೧೧೬

ಸಂಕ್ರಮಣ

ಸಂಪುಟ ೧೭ : ಸಂಚಿಕೆ ೪ ಸಪ್ಟಂಬರ ೧೯೮೧

ಸಮಿತಿಗಳು ಉಪಸಮಿತಿಗಳು

ರಾಮಾಯಣದ 'ಸೀತಾಯಣ'

ಕಿರು ಸಂಸ್ಕೃತಿಯ ಚಿಗುರು : ದಲಿತ ಸಾಹಿತ್ಯ

ಚದುರಂಗರ 'ವೈಶಾಖ'

ವಿಶ್ವಕಥಾಕೋಶ : ನೂರನೆಯ ಕಂತು

ಹೆಮ್ಮಿಗೆ ಶ್ರೀನಿವಾಸನ್, ಚೆ. ರಾಮಸ್ವಾಮಿ,
ಎಂ. ವಿ. ಚಕ್ರಪಾಣಿ, ಪುರುಷೋತ್ತಮ ಬಿಳಿಮಲೆ,
ಸೈಯದ್ ಜಮೀರುಲ್ಲಾ ಷರೀಫ್
ಇವರ ಕವನಗಳು

DEVU PATTAR
GUTTIPETH,
SHAHAPUR-585223

ಪುಸ್ತಕ ವಿಮರ್ಶೆ, ಪ್ರತಿಕ್ರಿಯೆ ಇತ್ಯಾದಿ

ಸಂಪಾದಕ : ಚಂದ್ರಶೇಖರ ಪಾಟೀಲ

ಮಕ್ಕಳೇ ರಾಷ್ಟ್ರದ ಸಂಪತ್ತು, ಅವರಿಗೆ ಪುಷ್ಟಿಕರ ಆಹಾರ ಕೊಟ್ಟು ಬೆಳೆಸಿ

ಕರ್ನಾಟಕದಲ್ಲಿ ಪೌಷ್ಟಿಕ ಆಹಾರ ಕಾರ್ಯಕ್ರಮ

ಎಳೆಯ ವಯಸ್ಸಿನಲ್ಲಿ ಕೊಡುವ ಆಹಾರ ಪುಷ್ಟಿಕರವಾಗಿದ್ದರೆ ಮಕ್ಕಳ ದೈಹಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ನೆರವಾಗುತ್ತದೆ. ಈ ಕಾರ್ಯಕ್ರಮಕ್ಕಾಗಿ ಸರ್ಕಾರವು ಪ್ರಸಕ್ತ ವರ್ಷ ೩೭೮.೭೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಿದೆ.

ಪೌಷ್ಟಿಕ ಆಹಾರ ಕಾರ್ಯಕ್ರಮವು ಭಾವೀ ಜನಾಂಗವನ್ನು ಸದೃಢವನ್ನಾಗಿ ಮಾಡುವುದರಿಂದ ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವ ಬಗ್ಗೆ ಸರ್ಕಾರವು ವಿಶೇಷ ಗಮನ ಕೊಟ್ಟಿದೆ.

ಪ್ರಸಕ್ತ ವರ್ಷ ಪ್ರಾಥಮಿಕ ಮತ್ತು ಪ್ರಾಥಮಿಕ ಪೂರ್ವ ಶಾಲೆಯ ೨.೪ ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಉಪಹಾರ ನೀಡುವ ಯೋಜನೆಗಾಗಿ ೨೧೫ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

ಅನ್ವಯಿಕ ಪೌಷ್ಟಿಕ ಆಹಾರ ಕಾರ್ಯಕ್ರಮವನ್ನು ಮುಂದುವರಿಸುವ ಸಲುವಾಗಿ ಈ ವರ್ಷ ೨೧.೭೫ ಲಕ್ಷ ರೂಪಾಯಿಗಳ ಅವಕಾಶ ಮಾಡಿಕೊಡಲಾಗಿದೆ.

ಉಳಿದ ೧೪೨ ಲಕ್ಷ ರೂಪಾಯಿಗಳ ವಿಶೇಷ ಪೌಷ್ಟಿಕ ಆಹಾರ ಕಾರ್ಯಕ್ರಮಕ್ಕಾಗಿ ಮೀಸಲಾಗಿಡಲಾಗಿದೆ.

ರಾಜ್ಯದಾದ್ಯಂತ ವಿವಿಧ ಜಿಲ್ಲೆಗಳಲ್ಲಿರುವ ೨೦ ಅಭಿವೃದ್ಧಿ ಬ್ಲಾಕುಗಳಲ್ಲಿ ತಲಾ ೧೦೦ ಅಂಗನವಾಡಿಗಳ ಮೂಲಕ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ನೀಡಲಾಗುತ್ತಿದೆ. ಇದರಲ್ಲಿ ಮಕ್ಕಳು ತಾಯಂದಿರು ಹಾಗೂ ಬಾಣಂತಿಯರಿಗೆ ಪೌಷ್ಟಿಕ ಆಹಾರ ಒದಗಿಸಲಾಗುತ್ತಿದೆ.

ಪ್ರಕಟಣೆ :—ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ

ಗ್ರಂಥಲೋಕ

ಪುಸ್ತಕೋದ್ಯಮಕ್ಕೆ ಮೀಸಲಾದ ಮಾಸಪತ್ರಿಕೆ

ಸಂ : ಆರ್. ಎಲ್. ಅನಂತರಾಮಯ್ಯ ವಾ. ಸದಸ್ಯತ್ವ : ೧೦ ರೂ.

ಗ್ರಂಥಲೋಕಕ್ಕೆ ರೂ. ೧೦೦ ಕಳಿಸಿ ಪೋಷಕರಾಗಬಹುದು.

(ಚೆಕ್‌ಗಳಿಗೆ ರೂ. ೨ ಹೆಚ್ಚು) ಪತ್ರಿಕೆ ಪ್ರಕಟವಾಗುವವರೆಗೆ ಬರುತ್ತದೆ. ನಿಲ್ಲುವ ಸಂದರ್ಭ ಬಂದರೆ ಪೋಷಕ ನಿಧಿ ವಾಪಸ್.

ಸಂಪಾದಕ : ಗ್ರಂಥಲೋಕ, ೪೯ ಅಕ್ಷಯ, ಟಿ. ಕೆ. ಬಡಾವಣೆ, ಸರಸ್ವತಿಪುರಂ, ಮೈಸೂರು–೫೭೦ ೦೦೯

ನೀವು ತರಿಸಲೇಬೇಕಾದ ಪತ್ರಿಕೆಗಳು :

ಸಮನ್ವಯ ಪಾಕ್ಷಿಕ

ಸಂ : ವಿ. ಎಚ್. ಗೌಡ ವಾ. ಚಂದಾ : ೧೮ ರೂ.

ಅಜಂತ, ೮ನೇ ಕ್ರಾಸ್, ಸರಸ್ವತಿಪುರಂ, ಮೈಸೂರು–೯

ಪಂಚಮ ಮಾಸಿಕ

ಸಂ : ರಾಮದೇವ ರಾಕೆ ವಾ. ಚಂದಾ : ೧೦ ರೂ.

ಮಾಸ್ತಿ ಗುಂಡಿ, ೨ನೇ ಕ್ರಾಸ್, ಅಶೋಕಪುರಂ, ಮೈಸೂರು–೮

ಸಮುದಾಯ ವಾರ್ತಾಪತ್ರ ಮಾಸಿಕ

ಸಂ : ಬರಗೂರು ರಾಮಚಂದ್ರಪ್ಪ ವಾ. ಚಂದಾ : ೧೨ ರೂ.

೪೬, ಅಂಗಡಿ ಬೀದಿ, ಬಸವನ ಗುಡಿ, ಬೆಂಗಳೂರು–೪

ಕೆ. ಪಿ. ದೇವೇಂದ್ರಯ್ಯ ಅವರ ಕಾದಂಬರಿ

ಅಂತ್ಯೋದಯ

ಬೆಲೆ : ಎಂಟು ರೂ.

ಪ್ರತಿಗಳಿಗಾಗಿ : ಅನ್ವೇಷಣೆ ಪ್ರಕಾಶನ, ಸಾಸ್ವೆಹಳ್ಳಿ–೫೭೭ ೨೨೪

ಬರಹಗಾರ ಗೆಳೆಯರಲ್ಲಿ :

ನಿಮ್ಮ ಹೊಸ ಪ್ರಕಟನೆಗಳ ಮಾಹಿತಿಯನ್ನು 'ಸಂಕ್ರಮಣ'ದ ಮೂಲಕ ನಾಡಿನುದ್ದಕ್ಕೂ ನೀವು ಪಸರಿಸಬಹುದು. ಪುಸ್ತಕಗಳ ವಿವರಗಳನ್ನೂ, (ಕೊಡುವಂತಿದ್ದರೆ) ರಿಯಾಯ್ತಿ ಬೆಲೆಯನ್ನೂ ಬರೆದು ಕಳಿಸಿರಿ. ಈ ಉಪಯುಕ್ತ ಕಾರ್ಯಕ್ಕಾಗಿ, ನೀವು 'ಸಂಕ್ರಮಣ'ಕ್ಕೆ ಎಂ. ಓ. ಮೂಲಕ ೨೫ ರೂ. ಕಳಿಸಿದರೆ ಸಾಕು.

ಸಂಕ್ರಮಣ ಪ್ರಕಾಶನ, ಧಾರವಾಡ-೮

ಸಂಕ್ರಮಣ

ಸಂಪುಟ : ೧೭ ಸಂಚಿಕೆ : ೪
ಸಪ್ಟಂಬರ ೧೯೮೧

ಮಾಸಿಕ ಸಾಹಿತ್ಯ ಸಂಕಲನ

ಸಂ : ಚಂದ್ರಶೇಖರ ಪಾಟೀಲ

ಈ ಸಂಚಿಕೆಯಲ್ಲಿ

ಸಮಿತಿಗಳೂ ಉಪಸಮಿತಿಗಳೂ : ಸದಾಶಿವ ಒಡೆಯರ ೫
ಅಮೆರಿಕೆಯಿಂದ ಬಂದ ಅಯ್ಯಂಗಾರಿ (ಕವನ) : ಡಾ. ಹೆಮ್ಮಿಗೆ ಶ್ರೀನಿವಾಸನ್ ೧೦
ರಾಮಾಯಣದ ಸೀತಾಯಣ' ; ಡಾ. ಪೋಲಂಕಿ ರಾಮಮೂರ್ತಿ ೧೧
ವ್ಯಾಪಾರ (ಕವನ) : ಚಿ. ರಾಮಸ್ವಾಮಿ ೨೪
ಕಿರು ಸಂಸ್ಕೃತಿಯ ಚಿಗುರು : ಕನ್ನಡದಲ್ಲಿ ದಲಿತ ಸಾಹಿತ್ಯ :
ಎಸ್. ಆರ್. ವಿಜಯಶಂಕರ ೨೫
ಸೊನ್ನೆಗಳ ಸಂತ (ಕವನ) : ಎಂ. ವಿ. ಚಕ್ರಪಾಣಿ ೩೦
ಚದುರಂಗರ 'ವೈಶಾಖ' : ಸುಧಾಕರ ೩೧
ಉಸಿರಿಲ್ಲದವರು ಪದ ಹಾಡಿದರು (ಕವನ) : ಪುರುಷೋತ್ತಮ ಬಿಳಿಮಲೆ ೪೩
ವಿಶ್ವಕಥಾಕೋಶ–೩ನೇ ಕಂತು : ಸಿ. ವಿ, ವೇಣುಗೋಪಾಲ ೪೫
ಬದುಕಿನ ಸಾಕ್ಷಿ (ಕವನ) : ಸೈಯದ್ ಜಮೀರುಲ್ಲಾ ಷರೀಫ ೫೬
ಡಾ। ಅಂಬೇಡ್ಕರ್ ಮತ್ತು ಮನು(?)ಸ್ಮೃತಿ : ಡಾ. ಶಂಬಾ ಜೋಶಿ ೫೭
ನಾಲ್ಕು ಕಿರುಹೊತ್ತಗೆಗಳು (ವಿಮರ್ಶೆ) : ಜಿ. ಎಸ್. ಅವಧಾನಿ ೫೯

SANKRAMANA 116 A Literary Monthly in Kannada
September 1981 Vol. XVII No. 4
Editor : Chandrashekhar Patil
Sankramana Prakashana Dharwad 580008 Karnataka
Printed at Sharada Printing Press, Dharwad-1

- ಸಂಕ್ರಮಣ ಬರಹಗಳ ಹಕ್ಕು ಹಾಗೂ ಹೊಣೆ ಆಯಾ ಬರಹಗಾರರವು.
- ಸಂಚಿಕೆ ತಲುಪಿದ ೧೦ ದಿನದೊಳಗಾಗಿ ಬಂದ ಪ್ರತಿಕ್ರಿಯೆಗಳಿಗೆ ಪ್ರಕಟನಾವಕಾಶ
- ವಾರ್ಷಿಕಚಂದಾ (ವಿಶೇಷಾಂಕ ಸಹಿತ); ೨೪ರೂ. ಆಜೀವ ಸದಸ್ಯತ್ವ ೨೦೦ರೂ.

ಈ ಸಂಚಿಕೆಯ ಲೇಖಕರು

ಸದಾಶಿವ ಒಡೆಯರ 'ಸದಾಮಂಗಲ' ಸಪ್ತಾಪುರ, ಧಾರವಾಡ-೧.

ಡಾ. ಹೆಮ್ಮಿಗೆ ಶ್ರೀನಿವಾಸನ್ ೭೦, ಸಂಶ್ರುತ, ಕೆ. ಎಂ. ಸಿ. ಹುಬ್ಬಳ್ಳಿ-೨೨.

ಡಾ. ಪೋಲಂಕಿ ರಾಮಮೂರ್ತಿ ಇಂಗ್ಲಿಷ್ ಪ್ರಾಧ್ಯಾಪಕ, ಮಾನಸಗಂಗೋತ್ರಿ ಮೈಸೂರು-೬.

ಚೆ. ರಾಮಸ್ವಾಮಿ ಕನ್ನಡ ಪ್ರಾಧ್ಯಾಪಕ, ಮದ್ರಾಸ ವಿಶ್ವವಿದ್ಯಾಲಯ, ಮದ್ರಾಸ-೫

ಎಸ್. ಆರ್. ವಿಜಯಶಂಕರ ಇಂಗ್ಲಿಷ ಪ್ರಾಧ್ಯಾಪಕ, ಮಿಲಾಗ್ರೆಸ್ ಕಾಲೇಜು, ಕಲ್ಯಾಣಪುರ, ದ. ಕ.

ಎಂ. ವಿ. ಚಕ್ರಪಾಣಿ ವೆಂಕಟಕೃಷ್ಣ ಎಂ., ರಾಷ್ಟ್ರೋತ್ಥಾನ ವಿದ್ಯಾಲಯ, ಹಗರಿಬೊಮ್ಮನಹಳ್ಳಿ, ಜಿ. ಬಳ್ಳಾರಿ.

ಸುಧಾಕರ ಉಪಪ್ರಾಧ್ಯಾಪಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೬.

ಪುರುಷೋತ್ತಮ ಬಿಳಿಮಲೆ ಕನ್ನಡ ಪ್ರಾಧ್ಯಾಪಕ, ನೆಹರೂ ಮೆಮೋರಿಯಲ್ ಕಾಲೇಜು, ಸುಳ್ಯ, ದ. ಕ.

ಡಾ. ಸಿ. ವಿ. ವೇಣುಗೋಪಾಲ ಇಂಗ್ಲಿಷ ಪ್ರಾಧ್ಯಾಪಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩.

ಸೈಯದ್ ಜಮೀನುಲ್ಲಾ ಷರೀಫ್ ಕನ್ನಡ ಪ್ರಾಧ್ಯಾಪಕ, ಅಂಜುಮನ್ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜ, ಭಟಕಳ, ಉ. ಕ.

ಡಾ. ಶಂಬಾ ಜೋಶಿ ಸಾಧನಕೇರಿ, ಧಾರವಾಡ-೮.

ಜಿ. ಎಸ್. ಅವಧಾನಿ ಕನ್ನಡ ಪ್ರಾಧ್ಯಾಪಕ, ಎಸ್. ಡಿ. ಎಂ. ಕಾಲೇಜ, ಹೊನ್ನಾವರ, ಉ. ಕ.

With Best Compliments From :

BELLAD AND COMPANY

Dharwad-1 Hubli-20

ಸಮಿತಿಗಳು ಉಪ ಸಮಿತಿಗಳು

ಲಲಿತ ಪ್ರಬಂಧ

ಸದಾಶಿವ ಒಡೆಯರ

DEVU PATTAR
GUTTIPETH,
SHAHAPUR-585223

ಇಂದಿನ ಕಾಲದಲ್ಲಿ ಸುಧಾರಿಸಿದ ಸಮಾಜದ ನಾಗರಿಕನೆನಿಸಿಕೊಂಡ ಯಾವ ವ್ಯಕ್ತಿಯೂ ಒಂದಿಲ್ಲ ಒಂದು ಸಮಿತಿಗೆ ಒಳಪಡದೇ ಇರುವದು ಸಾಧ್ಯವೇ ಇಲ್ಲ. ಹಾಗೆ ನೋಡಿದರೆ ಲೋಕ ಸಭೆಯಿಂದ ಹಿಡಿದು ಗ್ರಾಮ ಪಂಚಾಯಿತಿಯ ವರೆಗಿನ ನಮ್ಮ ಎಲ್ಲ ಸಂಸ್ಥೆಗಳಲ್ಲಿಯೂ ಸಮಿತಿಗಳ ಹಾವಳಿಯೋ ಹಾವಳಿ. ಈ ಕಾಲದಲ್ಲಿ ಯಾವದೇ ಕೆಲಸವನ್ನು ಮಾಡುವದಕ್ಕಾಗಿ, ಅಥವಾ ಮುಂದೂಡುವದಕ್ಕಾಗಿ, ಸಮಿತಿಗಳನ್ನು ನೇಮಿಸುವದು ಒಂದು ಅನುಕೂಲ ಶಿಷ್ಟಾಚಾರವಾಗಿದೆ. ಒಂದು ಸೂಚನೆ ಅಥವಾ ಯೋಜನೆಯ ಗತಿ ಏನಾಯಿತು ಎಂದು ಬಿಡುವಿಲ್ಲದೆ ಕೇಳುತ್ತಲೇ ಇರುವ ಅವಸರಗೇಡಿ ಚಳುವಳಿಗಾರರು ಯಾವ ಸಂಸ್ಥೆಯಲ್ಲಿಯಾದರೂ ಇದ್ದೇ ಇರುತ್ತಾರೆ. ಇಂಥವರನ್ನು ಸುಮ್ಮನಿರಿಸಲು ಅಧಿಕಾರದಲ್ಲಿರುವವರು ಸಾಮಾನ್ಯವಾಗಿ ಉಪಯೋಗಿಸುವದು, ಈ ವಿಷಯವನ್ನು ಪರಿಶೀಲಿಸಲು ಸಮಿತಿಯೊಂದನ್ನು ನೇಮಿಸಲಾಗಿದೆ ಎಂಬ ಬ್ರಹ್ಮಾಸ್ತ್ರ ಹೇಳಿಕೆ. ಯಾವದೇ ಒಂದು ಕೆಲಸವನ್ನು ಮಾಡುವದಕ್ಕಾಗಿ, ಅಥವಾ ಯಾವದೇ ಸಮಸ್ಯೆಯ ಬಗ್ಗೆ ವರದಿ ಒಪ್ಪಿಸಲು ಸಮಿತಿಗಳನ್ನು ನೇಮಿಸಲಾಗುತ್ತದೆ. ಆದರೆ ಎಷ್ಟೋ ಸಲ ಹಲವಾರು ಸಮಿತಿಗಳಲ್ಲಿ ಅದೇ ಕಾರ್ಯ ಇಮ್ಮಡಿ ಮಾಡುವ ಸಂದರ್ಭ ಒದಗುವದುಂಟು. ಹೀಗಾಗಿ ಇಂಥ ಹಲವಾರು ಸಮಿತಿಗಳಲ್ಲಿ ಹೊಂದಾಣಿಕೆಯನ್ನು ಸಾಧಿಸಲು ಮತ್ತೊಂದು ಸಮಿತಿಯನ್ನು ನೇಮಿಸುವದು ಅವಶ್ಯಕವಾಗುತ್ತವೆ ಕೆಲಸವು ತುಂಬಾ ಜಟಿಲವೂ ಸಂಕೀರ್ಣವೂ ಆದಾಗ ಈ ಸಮಿತಿಗಳು ಉಪಸಮಿತಿಗಳನ್ನು ನೇಮಿಸುತ್ತವೆ. ಹೀಗಾಗಿ ಸಮಿತಿಗಳು, ಉಪಸಮಿತಿಗಳು, ಸಮಿತಿಗಳಲ್ಲಿ ಹೊಂದಾಣಿಕೆ ಸಾಧಿಸಲು ನೇಮಿಸಿದ ಸಮಿತಿಗಳು—ಇವುಗಳ

ಗೊಂದಲದಲ್ಲಿ ಈ ಸಮಿತಿಗಳು ನಡೆಸುವ ಸುದೀರ್ಘ ಚರ್ಚೆಯು ಕಾಲಾವಧಿಯಲ್ಲಿ ಮೂಲ ಸಮಸ್ಯೆಯು ತನ್ನಷ್ಟಕ್ಕೆ ತಾನೇ ಬಗೆಹರಿದಿರುತ್ತದೆ; ಅಥವಾ ಕೆಲವೊಮ್ಮೆ ಸಮಿತಿಗಳು ಒಂದು ಸಮಸ್ಯೆಯ ಬಗ್ಗೆ ಚರ್ಚಿಸಿ ತೀರ್ಮಾನಕ್ಕೆ ಬರುವ ಹೊತ್ತಿಗೆ ಸಮಸ್ಯೆಯೇ ಇಲ್ಲದಾಗಿರುತ್ತದೆ.

ಸಮಿತಿಗಳು ತಮ್ಮ ವರದಿಗಳನ್ನು ನಿರ್ದಿಷ್ಟ ಅವಧಿಯಲ್ಲಿ ಒಪ್ಪಿಸಲು ನಾನಾಕಾರಣ ಗಳಿಂದಾಗಿ ಶಕ್ಯವಾಗುವದಿಲ್ಲವೆಂಬುದು ಸರ್ವರೂ ಅರಿತ ವಿಷಯ. ಸಾಮಾನ್ಯವಾಗಿ ಸಮಿತಿಗಳಲ್ಲಿ ನೇಮಕವಾಗುವ ವ್ಯಕ್ತಿಗಳು ಬಹಳ ಮಹತ್ವದ ವ್ಯಕ್ತಿಗಳಾಗಿರುತ್ತಾರೆ. ಅವರಿಗೆ ಈ ಸಮಿತಿಗಳ ಸಭೆಗಳಿಗೆ ಮೇಲಿಂದ ಮೇಲೆ ಹಾಜರಿರಲು ವೇಳೆಯಿರು ವದಿಲ್ಲ. ಮೀಟಿಂಗಿನ ದಿನಾಂಕವನ್ನು ನಿಶ್ಚಯಿಸುವ ಮೊದಲು ತನ್ನನ್ನು ಕೇಳದೇ ಇದ್ದಲ್ಲಿ, ಸಹಜವಾಗಿಯೇ ಯಾವದೇ ಸದಸ್ಯನು ಅಸಮಾಧಾನಗೊಳ್ಳುತ್ತಾನೆ. ಅದ ಕ್ಕಾಗಿ,ಕಾರ್ಯದರ್ಶಿಯು ಸಭೆಯ ದಿನಾಂಕದ ಸಂಬಂಧವಾಗಿ ಎಲ್ಲಸದಸ್ಯರನ್ನು ಕೇಳಿ ತಿಳಿಯಬೇಕಾಗುತ್ತದೆ. ಅಧ್ಯಕ್ಷರು ಸೂಚಿಸಿದ ದಿನಾಂಕ ಒಬ್ಬನಿಲ್ಲ ಒಬ್ಬ ಸಮಸ್ಯನಿಗೆ ಅನುಕೂಲವಿರುವದಿಲ್ಲ. ಎಲ್ಲ ಸದಸ್ಯರಿಗೆ ಒಪ್ಪಿತವಾದ ದಿನಾಂಕ ಅಧ್ಯಕ್ಷರಿಗೆ ಅನು ಕೂಲವಿರುವದಿಲ್ಲ. ಹೀಗೆ ಅಥವಾ ಮತ್ತಿನ್ನೇನೊ ಕಾರಣದಿಂದ ಸಮಿತಿಯ ಸಭೆ ಮುಂದೆ ಬೀಳುತ್ತ ಹೋಗುತ್ತದೆ. ಪ್ರತಿಯೊಬ್ಬ ಸದಸ್ಯನಿಗೂ ಬೇರೆ ಒಂದಿಲ್ಲ ಒಂದು ಮಹತ್ವದ ಮೀಟಿಂಗಿಗೆ ಹಾಜರಾಗಬೇಕಾಗಿರುತ್ತದೆ. ಹೀಗಾಗಿ ಸಮಿತಿಯ ಸಭೆಗಾಗಿ ಎಲ್ಲರಿಗೂ ಅನುಕೂಲವಾದ ಒಂದು ದಿನಾಂಕವನ್ನು ಕಂಡುಹಿಡಿಯುವದು ಕಪ್ಪೆ ತೂಗಿದಂತೆಯೇ ಸರಿ.

ಆಫೀಸಿನ ಚಹದ ಕ್ಲಬ್ಬಿನ ಕಾರ್ಯದ ಮೇಲ್ವಿಚಾರಣೆಗೆ ನೇಮಕವಾಗುವ ಸಮಿತಿ ಯಿಂದ ಹಿಡಿದು, ಕಾನೂನು ಮತ್ತು ಮಹತ್ವದ ವಿಧೇಯಕಗಳನ್ನು ರಚಿಸಲು ನೇಮಕವಾಗುವ ಸಮಿತಿಯ ವರೆಗೆ, ಎಲ್ಲೆಲ್ಲಿಯೂ ಸಮಿತಿಗಳೇ ಸಮಿತಿಗಳು. ಅವುಗಳ ಗಾತ್ರ ಮೊದಲಾದವುಗಳಲ್ಲಿ ವ್ಯತ್ಯಾಸವಿದ್ದಂತೆ, ಅವುಗಳ ಮಹತ್ವದಲ್ಲಿಯೂ ವ್ಯತ್ಯಾಸವುಂಟು. ಇವೆಲ್ಲವುಗಳಲ್ಲಿ ಏನೇ ವ್ಯತ್ಯಾಸವಿದ್ದರೂ ಅವುಗಳು ಅನುಸರಿ ಸುವ ಕಾರ್ಯ ವಿಧಾನದ ದೃಷ್ಟಿಯಿಂದ ಅವೆಲ್ಲ ಒಂದೇ.

ಇನ್ನು ಸಮಿತಿಯ ಸದಸ್ಯರುಗಳ ವಿಚಾರ. ಸಮಿತಿಯ ಸದಸ್ಯರು ನಾನಾ ಪ್ರಕಾರ ಮುಖ್ಯತಃ ಸಮಿತಿಗಳಲ್ಲಿ ಕಂಡುಬರುವ ಮಾದರಿಗಳಲ್ಲಿ ಇವು ಹಲವು.

ಮೊದಲನೆಯದಾಗಿ, ಪ್ರತಿಯೊಂದು ಸಮಿತಿಯಲ್ಲಿ ಇರುವ ಕೈತುಂಬ ಕೆಲಸದ ಅವಸರದ ಸದಸ್ಯ. ತಾನು ಯಾವದೇ ಸಮಿತಿಯ ಸದಸ್ಯನಾಗಿರುವದೆಂದರೆ, ಅದು

ತನಗೂ ಆ ಸಮಿತಿಗೂ ಗೌರವವೆಂದು ಆತನ ದೃಢ ನಂಬಿಕೆ. ಅವನಿಗೆ ಸಭೆಯ ಕಾರ್ಯಸೂಚಿಪತ್ರವನ್ನು ನೋಡಲಿಕ್ಕೂ ವೇಳೆಯಿಲ್ಲ. ಸಭೆಗೆ ಬಂದ ಮೇಲೆಯೇ ಆತ ಕಾರ್ಯದರ್ಶಿಯಿಂದ ಕಾರ್ಯಸೂಚಿಪತ್ರವನ್ನು ಕೇಳಿ ತೆಗೆದುಕೊಳ್ಳುವುದು. ಸಭೆಯ ಮುಂದೆ ಚರ್ಚೆಗೆ ಬರಲಿರುವ ವಿಷಯಗಳ ಮೇಲೆ ಆತ ಪ್ರಥಮವಾಗಿ ಕಣ್ಣು ಹಾಯಿಸುವುದು ಅಲ್ಲಿಯೇ. ಕಾರ್ಯದರ್ಶಿಗೆ ವ್ಯವಹರಿಸಲು ಈತ ಬಹು ಕಠಿಣ ವ್ಯಕ್ತಿ. ಯಾಕೆಂದರೆ ಪ್ರತಿಸಲ ಈತ 'ಈ ಕೆಲಸವಾಗಿಲ್ಲ' 'ಈ ಕೆಲಸ ತಪ್ಪಾಗಿದೆ' 'ಈ ವಿಷಯದ ಬಗ್ಗೆ ಮಾಹಿತಿ ಒದಗಿಸಬೇಕಾಗಿತ್ತು' ಎಂದು ಮುಂತಾಗಿ ಟೀಕಿಸಿದಾಗ, ಕಾರ್ಯಸೂಚಿಪತ್ರದ ಟಿಪ್ಪಣಿಯನ್ನು ಓದಲು ತನಗೆ ಸಾಧ್ಯವಾದಷ್ಟು ಸೌಜನ್ಯದಿಂದ ಅವನಿಗೆ ತಿಳಿಸುವುದೇ ಕಾರ್ಯದರ್ಶಿಯ ಪಾಲಿನ ಕೆಲಸವಾಗಿಬಿಡುತ್ತದೆ. ಆದರೆ ಈ ವ್ಯಕ್ತಿ ಇಂಥ ಸಂದರ್ಭಗಳಲ್ಲಿ ವಿವೇಚನೆಯಿಂದಲೂ ವರ್ತಿಸುತ್ತಾನೆ, ಆತ ತನ್ನನ್ನು ತಿದ್ದಿಕೊಳ್ಳಲು ಸದಾ ಸಿದ್ಧ.

ಎರಡನೆಯದಾಗಿ, ಕಿವುಡ ಅಥವಾ ಉದಾಸೀನ ಸದಸ್ಯ. ಈ ವರ್ಗವಲ್ಲಿ ಬರುವ ಸದಸ್ಯರಲ್ಲಿ ಎರಡು ತರಹ: ಇವರಲ್ಲಿ ಅರ್ಧ ಜನರಿಗೆ ಸಮಿತಿಯಲ್ಲಿ ಏನು ಚರ್ಚೆ ನಡೆಯುತ್ತದೆಯೆಂಬುದು ಕೇಳುವದೇ ಇಲ್ಲ. ಇನ್ನುಳಿದ ಅರ್ಧ ಜನರಿಗೆ ಅದು ಕೇಳಿಸಿದರೂ ಸಮಿತಿಯು ಚರ್ಚಿಸುತ್ತಿರುವ ವಿಷಯ ತಿಳಿಯುವದಿಲ್ಲ. ಪಾರ್ಕಿನ್ಸನೆ ಈ ವರ್ಗವನ್ನು "Those who cannot hear what is being said, and those who would not understand it even if they did" ಎಂದು ವರ್ಣಿಸಿದ್ದಾರೆ. ಇಂಥ ಸದಸ್ಯ ಸಭೆಯಲ್ಲಿ ಮಾತನಾಡಲು ಏಳುವದು ಒಂದು ವಿಷಯದ ಬಗ್ಗೆ ಚರ್ಚೆ ನಡೆದು, ಮತದಾನವಾಗಿ, ಅದು ನಿರ್ಧಾರಿತವಾದ ಎಷ್ಟೋ ಸಮಯದ ಮೇಲೆಯೇ. ಈತ ಮಾತನಾಡಲು ಎದ್ದನೆಂದರೆ ಸಾಕು ಎಲ್ಲರಿಗೂ ನಗೆಯೇ ನಗೆ. ಯಾಕೆಂದರೆ ಅವರಿಗೆ ಗೊತ್ತು ಅವನು ಮಾತನಾಡಲಿರುವದು ಮುಗಿದ ವಿಷಯದ ಮೇಲೆಯೇ ಎಂಬುದು.

ಇನ್ನು ತಡಮಾಡಿ ಬರುವ ಸದಸ್ಯ. ಯಾವಾಗಲೂ ಸಭೆಗೆ ಸ್ವಲ್ಪ ತಡಮಾಡಿ ಬರುವದರಲ್ಲಿಯೇ ಆತ ತನ್ನ ಪ್ರತಿಷ್ಠೆಯನ್ನು ಕಂಡುಕೊಳ್ಳುತ್ತಾನೆ. "ನಿಮ್ಮನ್ನೆಲ್ಲ ದಾರಿಕಾಯಲು ಹಚ್ಚಿದ್ದಕ್ಕಾಗಿ ನಾನು ವಿಷಾದಿಸುತ್ತೇನೆ. ಆದರೆ ಅದು ಅನಿವಾರ್ಯವಾಗಿತ್ತು" ಎಂದು ಮುಂತಾಗಿ ಆತ ಕ್ಷಮೆ ಕೇಳುತ್ತಾನೆ. ಸಪ್ಪಳ ಮಾಡುತ್ತಲೇ ಆತ ಸಭಾಭವನವನ್ನು ಪ್ರವೇಶಿಸುವದು. ಉಳಿದ ಸದಸ್ಯರಿಗಾಗುವ ತೊಂದರೆಯ ಕಡೆಗೆ ಆತನ ಲಕ್ಷ ಕಡಿಮೆ. ಪಾಪ, ಅವನು ಬಂದ ನಂತರ ಸಭೆ ಮತ್ತೆ ಮೊದಲಿನಿಂದ ಕಾರ್ಯ ಆರಂಭ ಮಾಡಬೇಕು. ಅವನೊಬ್ಬ 'ಪಿಂಗಾಣಿ ಅಂಗಡಿಯಲ್ಲಿ ಹೊಕ್ಕ ಗೂಳಿಯಂತೆ' (Bull in a China shop).

ಇನ್ನು ನಿಬಂಧನೆಗಳಿಗೆ ಕಟ್ಟುಬಿದ್ದ ಮಾದರಿಯ ಸದಸ್ಯ. ಆತನಿಗೆ ಎಲ್ಲವೂ ಕಾಯಿದೆಬದ್ಧವಾಗಿ, ವೈಧಾನಿಕವಾಗಿ, ಸಂಪ್ರದಾಯಕ್ಕನುಗುಣವಾಗಿ ಮತ್ತು ಶಿಷ್ಟಾಚಾರದಂತೆ ನಡೆಯಬೇಕು. ಅವನು ಯಾವಾಗಲೂ ಸಭೆಗೆ ಸ್ವಲ್ಪ ಮುಂಚಿತವಾಗಿಯೇ ಬರುತ್ತಾನೆ. ಮತ್ತು ಯಾವದೇ ಸದಸ್ಯನು ತಡಮಾಡಿ ಬಂದರೆ ಅದನ್ನು ಕೂಡಲೇ ಎತ್ತಿ ತೋರಿಸುತ್ತಾನೆ. ಅವನು ಯಾವಾಗಲೂ ಮಾತನಾಡುವದು ತಾನು ವಿವಿಧ ಸಮಿತಿಗಳಲ್ಲಿ ಕೆಲಸ ಮಾಡಿದ ಅನುಭವ ಮತ್ತು ಅಲ್ಲಿ ಅನುಸರಿಸಲಾದ ನಿಯಮಗಳು ಇವುಗಳನ್ನು ಕುರಿತೇ. ಸದ್ದಿಲ್ಲದೇ ಕಾರ್ಯ ಮಾಡುವದು ಅವನಿಗೆ ಒಗ್ಗದ ವಿಷಯ. ಸಭೆಯ ಕಾರ್ಯಕಲಾಪದ ವರದಿಗಳಲ್ಲಿ ತನ್ನ ಹೆಸರು ಎಲ್ಲ ಕಡೆಗೆ ಬರಬೇಕೆಂದು ಆತ ಅಪೇಕ್ಷಿಸುತ್ತಾನೆ ಯಾವದೇ ಗೊತ್ತುವಳಿಯನ್ನು ಮಂಡಿಸಲು, ಅಥವಾ ಅನುಮೋದಿಸಲು ಆತ ತುದಿಬೆರಳ ಮೇಲೆ ಸಿದ್ಧ. ಅವನು ಅಧ್ಯಕ್ಷನೊಡನೆ ಸಹಮತನಾಗಿರುವದೇ ಹೆಚ್ಚು. ಯಾರಾದರೂ ಅಧ್ಯಕ್ಷರ ಮೇಲೆ ಹರಿಹಾಯ್ದರೆ ಅವನು ಅಧ್ಯಕ್ಷರ ಪರವಾಗಿ ವಾದಿಸಲು ಎದ್ದೇ ಬಿಡುತ್ತಾನೆ. ಅನೇಕ ಸಮಿತಿಗಳಲ್ಲಿ ಸದಸ್ಯತ್ವ ಪಡೆಯಲು ಇದು ಒಳ್ಳೆಯ ಸಾಧನ ಎಂಬುದನ್ನು ಅವನು ಬಲ್ಲ. ಅವನು ಯಾವಾಗಲೂ ಅಧ್ಯಕ್ಷನ ಅನುಗ್ರಹ ಕೃಪಾಛತ್ರದಲ್ಲಿ ಇರಬಯಸುವ ವ್ಯಕ್ತಿ.

ಸಮಿತಿಗಳು ಎಷ್ಟೇ ತಡವಾಗಿದ್ದರೂ, ಎಲ್ಲ ಸಮಿತಿಗಳ ಅಧ್ಯಕ್ಷರು ಮಾತ್ರ ಒಂದೇ. ಜಗತ್ತಿನಲ್ಲಿ ಸಮಿತಿಯ ಅಧ್ಯಕ್ಷರಿಗಿಂತ ಹೆಚ್ಚು ಸುದೈವಿ ಮನುಷ್ಯರೇ ಅಪರೂಪ. ಒಂದು ಸಮಿತಿಯ ಅಧ್ಯಕ್ಷನಾಗುವದೆಂದರೆ ಅದೊಂದು ಮಹಾ ಗೌರವವಲ್ಲವೇ ? ಅಧ್ಯಕ್ಷ ಸ್ಥಾನಕ್ಕಿರುವ ಗೌರವದಿಂದ, ಅಧ್ಯಕ್ಷನಿಗೆ ಜೀವನ ಯಾವಾಗಲೂ ಸಮಾಧಾನಕಾರವಾಗಿರುತ್ತದೆ; ಯಾಕಂದರೆ ತಾನು ಮಾಡುತ್ತಿರುವ ಮಹತ್ವದ ಸಮಾಜ ಸೇವೆಯ ಅರಿವಿನಿಂದ ಅವನಿಗೆ ತನ್ನ ಜೀವನ ಸಾರ್ಥಕವಾಯಿತೆಂದು ಮನಗಾಣಿಕೆಯಾಗಿರುತ್ತದೆ. ಸಭೆಯ ಕೊನೆಗೆ ಆಡಂಬರದ ಸದಸ್ಯನೊಬ್ಬ ಅಧ್ಯಕ್ಷರ ಆಭಾರ ಮನ್ನಿಸಲು ಎದ್ದಾಗ ಯಾವ ಅಧ್ಯಕ್ಷನಿಗೆ ಅಭಿಮಾನದಿಂದ ಎದೆ ಉಬ್ಬುವದಿಲ್ಲ ? ಸದಸ್ಯರನ್ನು ಭರ್ಜರಿ ಭೋಜನ ಅಥವಾ ಚಹಾಪಾನಕ್ಕೆ ಆಮಂತ್ರಿಸುವದು ಅಧ್ಯಕ್ಷನ ಸ್ಥಾನ ಗೌರವಕ್ಕೆ ಅನುಗುಣವಾದ ಶಿಷ್ಟಾಚಾರ. ಯಾವ ಅಧ್ಯಕ್ಷನೂ ಇದಕ್ಕೆ ಹಿಂಜರಿಯುವದಿಲ್ಲ. ಒಟ್ಟಾರೆ ಸಮಿತಿಗಳು ಪ್ರಯೋಜನಕಾರಿಯಾಗಿಲ್ಲವೆಂದು ಹೇಳುವದು ತಪ್ಪಾದೀತು. ಅವುಗಳಲ್ಲಿ ಹಲವಾದರೂ ತಮಗೆ ಒಪ್ಪಿಸಿದ ಕಾರ್ಯವನ್ನು ಮುಗಿಸಿ, ಸರಿಯಾದ ವೇಳೆಗೆ ವರದಿಗಳನ್ನು ಒಪ್ಪಿಸಿವೆ. ಆದರೆ ಅವುಗಳಲ್ಲಿ ಹಲವಾರು ಸಮಿತಿಗಳು ತಮ್ಮ ಕೆಲಸವನ್ನು ಮುಗಿಸಿರದಿದ್ದರೆ, ಅದು ಅವುಗಳ ತಪ್ಪಲ್ಲ, ಅದಕ್ಕೆ ಅನೇಕ ಕಾರಣಗಳಿವೆ. ಮುಖ್ಯವಾಗಿ ಸಮಿತಿಯ ಮಹತ್ವದ ಸದಸ್ಯರು ಸಭೆಗೆ ಹಾಜರಿರಲು ಅನುಕೂಲ ವೇಳೆ ಒದಗಬೇಕು. ನಿಜವಾಗಿ ನೋಡಿದರೆ ಒಂದು ಸಭೆ

ಯನ್ನು ಮುಗಿಸಿ ಇನ್ನೊಂದು ಸಭೆಗೆ ಧಾವಿಸಬೇಕಾದ ಈ ಮಹತ್ವದ ಸದಸ್ಯರಿಗೆ ಒಂದು ಸಭೆಯಲ್ಲಿ ಕಳೆಯಲು ಸಿಗುವ ವೇಳೆಯಾದರೂ ಎಷ್ಟು ? ಮನೆ ಮಂದಿಯ ಕ್ಷೇಮ ಸಮಾಚಾರ ವಧೂ-ವರರನ್ನು ನಿಶ್ಚಯಿಸುವದು, ಅನುಗ್ರಹಗಳ ವಿನಿಮಯ (Exchange of favours), ತಮ್ಮ ಸಂಬಂಧಿಕರಿಗೆ ನೌಕರಿ ಕೊಡಿಸುವದು-ಇತ್ಯಾದಿ ಸಾಂಸಾರಿಕ ಹಾಗೂ ಇತರ ವಿಷಯಗಳ ವಿಚಾರ ವಿನಿಮಯ ಇಲ್ಲಿ ಆಗದೇ ಬೇರೆ ಮತ್ತೆಲ್ಲಿ ಆಗಬೇಕು ? ಇದಲ್ಲದೇ ಚಹಾ ಪಾನ ಮುಂತಾದವುಗಳಿಗೆ ಸ್ವಲ್ಪ ವೇಳೆ ಬೇಡವೇ ? ಹೀಗಾಗಿ ಸಮಿತಿಯ ಕೆಲಸಗಳನ್ನು ಗತ್ಯಂತರವಿಲ್ಲದೇ ಮುಂದೂಡಲೇ ಬೇಕಾಗುತ್ತದೆ. ಸಮಿತಿಗಳ ನಿರ್ಮಾಣ, ಅವುಗಳ ಕಾರ್ಯ ವಿಧಾನ, ಅವುಗಳಿಗೆ ಕಾರ್ಯ ಮಾಡಲು ದೊರೆಯುವ ಅತ್ಯಲ್ಪ ವೇಳೆಯ ಅವಕಾಶ ಇವೆಲ್ಲ ಅಡಚಣೆಗಳನ್ನು ಅರಿತು ಅವುಗಳಿಂದ ವೇಳೆಗೆ ಸರಿಯಾಗಿ ಕಾರ್ಯವಾಗಬೇಕೆಂದು ಬಯಸಿದರೆ ಅದು ಹೇಗೆ ಸಾಧ್ಯ ? ಸಮಿತಿಗಳಿಂದ ಪವಾಡ ಸದೃಶ ಕಾರ್ಯಗಳು ಆಗಬೇಕೆಂದು ನಿರೀಕ್ಷಿಸುವದು ಶುದ್ಧ ತಪ್ಪು. "ಯಾವದೇ ವಿಷಯದ ಬಗ್ಗೆ ನಿರ್ಣಯವನ್ನು ಮುಂದೆ ಹಾಕಬೇಕಾದರೆ ಒಂದು ಸಮಿತಿಯನ್ನು ನೇಮಿಸು" ಎಂಬುದು ಟೀಕಾಕಾರರ ಕಟು ಕುಚೇಷ್ಟೆ. ಸಮಿತಿಯ ಎಲ್ಲ ಕೆಲಸದ ಹೊರೆಯನ್ನು ಹೊರಲು ಒಬ್ಬ ಸದಸ್ಯನಿದ್ದರೆ ನಿಸ್ಸಂದೇಹವಾಗಿಯೂ ಸಮಿತಿಯ ಕಾರ್ಯ ವೇಳೆಗೆ ಸರಿಯಾಗಿ ಮುಗಿಯಾಗಿ ಮುಗಿಯುತ್ತದೆ. ಹೌದು, ಎಲ್ಲ ಸಮಿತಿಗಳಲ್ಲಿಯೂ ಕೆಲಸ ಮಾಡುವ ವ್ಯಕ್ತಿ ಒಬ್ಬನೇ. "ಎರಡು ಮಂದಿ ಸದಸ್ಯರಿದ್ದ ಸಮಿತಿಯಲ್ಲಿ ಒಬ್ಬ ಬಾರದೇ ಇದ್ದರೆ ಅದೇ ಶ್ರೇಷ್ಠ ಸಮಿತಿ" ಎಂದು ಆಂಗ್ಲ ಪ್ರಬಂಧಕಾರ ಇ. ವಿ. ಲ್ಯೂಕಸ್ ಹೇಳುವ ಮಾತು ನಿರಂತರ ಸತ್ಯ.

★

ಅಮೆರಿಕೆಯಿಂದ ಬಂದ ಅಯ್ಯಂಗಾರಿ

ಡಾ. ಹೆಮ್ಮಿಗೆ ಶ್ರೀನಿವಾಸನ್

ಅಮೆರಿಕೆಯಲ್ಲಿ ಅಯ್ಯಂಗಾರಿ
ಹುರಿದ ದನದ ಮಾಂಸ ತಿಂದ
ಮೇಲೆ ಬೀರಿನಿಂದ ಬಾಯಿ ಮುಕ್ಕಳಿಸಿದ
ಡನ್ ಹಿಲ್ ಹೊಗೆ ಉಗುಳಿದ
ಬಿಳಿ ಮೊಲೆ, ತೊಡೆಗಳ ತಡವಿದ
ಕೆಂಪು ದೀಪದ ಮಬ್ಬುಗತ್ತಲಲ್ಲಿ ಎಡವಿದ
ಬಹಳ ದಿನಗಳ ಮೇಲೆ ಮರಳಿದ
ಹುಟ್ಟೂರು ತಿಪ್ಪಾರಳ್ಳಿಗೆ
ಆಕಸ್ಮಾತ್ ಸತ್ತ
ಅಪ್ಪನ ಶ್ರಾದ್ಧ ಮಾಡಲಿಕ್ಕೆ.

ಮಂತ್ರಗಳ ಹೇಳುವಾಗ, ಪಿಂಡಪ್ರದಾನ ಮಾಡುವಾಗ,
ಜನಿವಾರ ಹಿಡಿದು ಗಾಯತ್ರಿ ಜಪಿಸುವಾಗ,
ಕ್ಯಾಥಿಯ ಕಟಿಯ ನೆನಪೇ,
ಲೀನಳ ವಯ್ಯಾರದೊನಪೇ,
ಲಿಂಡಳ ದುಂಡು ಕದಪೇ.

ಛೆ! ಏನಿದನ್ಯಾಯ ! ಇಂಥ ಸಮಯದಲ್ಲಿ
ಎಂಥ ನೆನಪು ಕಾಡುವುದಲ್ಲ,
ಊರಿಗೆ ಬಂದಾಗ ಮಾತ್ರ
ಉರುಳಾಗುವುದಲ್ಲ ಮೂರೆಳೆಯ ಜನಿವಾರ
ಬಲಿಗಿಟ್ಟ ಕೋಣದಂತೆ
ಗೋಣು ಚಾಚುವುದಲ್ಲ ಬ್ರಾಹ್ಮಣ್ಯ,
ತುಂಬ ವಿಚಿತ್ರ
ಎಂದು ವಿಷಾದದ ನಿಟ್ಟುಸಿರಿಟ್ಟ.
ಅರ್ಥಕ್ಕೆ ಮುಂಗಿಸಿಬಿಟ್ಟಿದ್ದ.

ಕಿರು ಸಂಸ್ಕೃತಿಯ ಚಿಗುರು :
ಕನ್ನಡದಲ್ಲಿ ದಲಿತ ಸಾಹಿತ್ಯ

ಎಸ್. ಆರ್. ವಿಜಯಶಂಕರ

ನಮ್ಮ ದೇಶದ ಚರಿತ್ರೆಗೆ ಸಂಬಂಧಪಟ್ಟಹಾಗೆ ಬಹಳ ವಿಷಾದದ ಸಂಗತಿಯೆಂದರೆ, ಆದಿಯಿಂದಲೂ ನಮ್ಮ ಆಡಳಿತ ಭಾಷೆ ಜನಸಾಮಾನ್ಯರ ಆಡುಭಾಷೆಯಾಗಿರಲಿಲ್ಲ ಎಂಬುದು. ಡಾ। ರಾಮ ಮನೋಹರ ಲೋಹಿಯಾ "ಪಾಳೆಗಾರಿ ಭಾಷೆ ವಿರುದ್ಧ ಜನಭಾಷೆಗಳು" ಎಂಬ ತಮ್ಮ ಲೇಖನದಲ್ಲಿ ಈ ಸಮಸ್ಯೆಯನ್ನು ಬಹಳ ಗಂಭೀರವಾಗಿ ವಿವರಿಸುತ್ತಾರೆ. ಸಾವಿರಾರು ವರ್ಷಗಳ ಕಾಲ ಸಂಸ್ಕೃತ ನಮ್ಮ ದೇಶವನ್ನು ಆಳಿತು. ಪ್ರಾಕೃತ, ಪಾಲಿ. ಆಗ ಜನರ ಭಾಷೆಗಳಾಗಿದ್ದವು. ಆಮೇಲೆ ಪರ್ಶಿಯನ್ ಭಾಷೆ ಅಧಿಕಾರವನ್ನು ಪಡೆಯಿತು. ಆದಾದನಂತರ ಆಡಳಿತಕ್ಕೆ ಬಂದ ಇಂಗ್ಲೀಷ ಇಂದೂ ಜನರ ಮನಸ್ಸಿನ ಮೇಲೆ ನಡೆಸುವ ಆಕ್ರಮಣ ನಮಗೆ ಗೊತ್ತೆ ಇದೆ. ಇಂಗ್ಲೀಷ ಬಾರದ ಜನ, ಇಂಗ್ಲೀಷ್ ಬಲ್ಲವರ ಎದುರು ಇನ್ನೂ ಒಂದು ರೀತಿಯ ಸಣ್ಣ ಕೀಳರಿಮೆಯಲ್ಲಿ ಬದುಕುತ್ತಾರೆ.

ತನ್ನ ಗರ್ಭದಲ್ಲಿ ಜಗತ್ತಿನ ಸರ್ವಜ್ಞಾನವನ್ನು ಹೊತ್ತಿರುವ ಇಂಗ್ಲೀಷ್ ಸಾಂಸ್ಕೃತಿಕ ...ಗಿ ನಮ್ಮ ಜನರ ಮೇಲೆ ಆಕ್ರಮಣ ನಡೆಸುತ್ತಿರುವುದು ಒಂದು ದೊಡ್ಡ ...ಂರಂತ. ಇದಕ್ಕೆ ಕಾರಣಗಳೂ ಅನೇಕ. ಜನರ ಭಾಷೆಯನ್ನೇ ಬಳಸಿದ ಮಹಾ ನಾಯಕರು ನಮ್ಮಲ್ಲಿ ಇಬ್ಬರೆ: ಗೌತಮ ಬುದ್ಧ ಮತ್ತು ಮಹಾತ್ಮಾ ಗಾಂಧಿ. ಉಳಿದಂತೆ ಎಲ್ಲರೂ ಭಾಷೆಯನ್ನು ಪ್ರತಿಷ್ಠೆಗಾಗಿ ಬಳಸಿದ್ದರಿಂದ ಸಾಂಸ್ಕೃತಿಕವಾಗಿ ನಾವು ಬಹಳಷ್ಟನ್ನು ಕಳೆದು ಕೊಂಡೆವು. ಭಾಷೆಯ ಸಾಮಾಜಿಕ ಪ್ರತಿಷ್ಠೆ ನಮ್ಮ ಯೋಚನಾಕ್ರಮದಲ್ಲಿ ಅನುಕರಣೆಗೂ ಅವಕಾಶ ಮಾಡಿಕೊಟ್ಟಿತು. ಇದರಿಂದಾಗಿ ಕೈಗಾರಿಕೀಕರಣದ ಇಂದಿನ ಯುಗದಲ್ಲಿ ನಾವು ಸೃಷ್ಟಿಸಬಹುದಾಗಿದ್ದ ಪರ್ಯಾಯ

ಸಾಧ್ಯತೆಯೊಂದನ್ನು ಕಳೆದುಕೊಳ್ಳಬೇಕಾಯಿತು. ಈ ಹಿನ್ನೆಲೆಯಲ್ಲಿ ನಮ್ಮ ಸ್ವಾತಂತ್ರ್ಯಾನಂತರದ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಗಳನ್ನು ಗಮನಿಸಬಹುದು.

ಪಂಡಿತ್ ನೆಹರೂ ಅವರ ಯೋಚನಾ ಕ್ರಮ ಇಂಗ್ಲಿಷ್ ಭಾಷೆಯಿಂದ ಕಲಿತ ಯುರೋಪಿನ ಯೋಚನಾ ಕ್ರಮ; ಗಾಂಧೀಜಿಯಂತೆ ಈ ದೇಶದ, ನಿಶ್ಶಕ್ತ ಬಡಕಲಾದ ಕೊಳಕು ಜನರ ಜೊತೆ ಸರಾಸರಿಯಲ್ಲಿ ಬದುಕುವ ಯೋಚನಾ ಕ್ರಮವಲ್ಲ. ಇದರ ನೇರ ಪರಿಣಾಮ ಇಂಡಿಯಾ ಯುರೋಪಿನ ಸಂಪೂರ್ಣ ಅನುಕರಣೆಗೆ ತೊಡಗಿದ್ದು. ನೆಹರೂರವರ ಕೈಗಾರೀಕರಣದ ಆರ್ಥಿಕ ನೀತಿಯಿಂದಾಗಿ ಮಹಾತ್ಮಾಗಾಂಧಿಯವರ ಆಸೆಗೆ ವ್ಯತಿರಿಕ್ತವಾಗಿ ಹಳ್ಳಿಗಳನ್ನು ಕಡೆಗಣಿಸಿ ನಗರಗಳು ಮಾತ್ರ ಬೆಳೆಯುತ್ತಾ ಹೋದವು. ಹಳ್ಳಿಗಳು ನಗರಗಳನ್ನು ಸಾಕುವ ಜಹಗೀರಂಗಳಾದವು. ನಗರಗಳು ಹಳ್ಳಿಗಳ ಸಾಂಸ್ಕೃತಿಕ ಅವಶ್ಯಕತೆಗೆ ಒಂದಷ್ಟು ಕೀಳು ಸಿನಿಮಾಗಳ ಸಂಸ್ಕೃತಿಯನ್ನು ಹಂಚಿದವು. ನಗರಗಳ, ಕಾರ್ಖಾನೆಗಳ ಬೆಳವಣಿಗೆಯಲ್ಲಿ ತಮ್ಮ ಆರ್ಥಿಕ ಸಮತೋಲನವನ್ನು ಕಳಕೊಂಡು ಬಡವಾಗಿದ್ದ ಹಳ್ಳಿಗಳು ತಮ್ಮದೇ ಆದ ಏನನ್ನೂ ಉಳಿಸಿಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ.

ಇದರ ಜೊತೆ, ಮೇಲ್ಪಟ್ಟದ ಜೀವನಕ್ರಮಕ್ಕೆ ಸೇರಿಕೊಂಡ ಬ್ರಿಟಿಶರ ಪ್ರಭಾವವನ್ನು ನಗರಗಳ ಅನುಕರಣೆಯಲ್ಲಿ ಹಳ್ಳಿಗಳ ಶ್ರೀಮಂತರೂ ಹಮ್ಮಿಕೊಂಡು ಇಂಗ್ಲಿಷ್ ಮಾಧ್ಯಮವನ್ನೇ ಪ್ರೋತ್ಸಾಹಿಸಿದರು ನಮ್ಮ ದೇಶಕ್ಕೆ ಸ್ವಾತಂತ್ರ್ಯಬಂದ ಹೊಸತರಲ್ಲಿ, ಗಾಂಧಿ, ನೆಹರೂ ಕರೆ ಕೇಳಿ, ಕಾಲೇಜು ಬಿಟ್ಟು, ದೇಶೀಯ ಕಾಲೇಜುಗಳಲ್ಲಿ ಕಲಿತು ಬಂದ, ಸ್ವಾತಂತ್ರ್ಯದ ಕನಸು ಕಟ್ಟಿ ಹೋರಾಡಿದ್ದ ಪ್ರಾಮಾಣಿಕ ಯುವಕರಿಗೆ ಯೋಗ್ಯ ಅವಕಾಶಗಳು ಸಿಗಲಿಲ್ಲ. ರಾಷ್ಟ್ರೀಯ ನೀತಿ ತಯಾರಿಕೆಯ ಮುಖ್ಯಸ್ಥಾನಗಳಾದ ಇಂಡಿಯನ್ ಸಿವಿಲ್‌ಪರೀಕ್ಷೆ(IAS) ಮೊದಲಾದವುಗಳು ಇಂಗ್ಲಿಷ್ ಕಾಲೇಜುಗಳಲ್ಲಿ ಕಲಿತಿದ್ದವರಿಗೆ ಮಾತ್ರ ಲಭ್ಯವಾಯಿತು. ತಾವೇ ಕರೆಕೊಟ್ಟು ಕಾಲೇಜು ಬಿಡಿಸಿದ್ದ ಆದರ್ಶವಾದಿ ಯುವಕರನ್ನು ನಮ್ಮ ನಾಯಕರು ಕಡೆಗಣಿಸಿದ್ದರು. ದೇಶೀಯ ಕಾಲೇಜುಗಳ ಪದವಿಗಳನ್ನು ನಮ್ಮ ಸರಕಾರವೇ ಮಾನ್ಯಮಾಡಲಿಲ್ಲ. ಕುಸಿದು ಬಿದ್ದ ಆದರ್ಶದಲ್ಲಿ, ಇಂಗ್ಲಿಷ್ ವಿದ್ಯಾಭ್ಯಾಸ ಬಿಟ್ಟುದಕ್ಕಾಗಿ ದುರಂತಕ್ಕೆ ಒಳಗಾದ ಯುವಕರನ್ನು ನೋಡಿದ ನಮ್ಮ ಸಮಾಜ ಏಕೋ ಭಕ್ತಿಯಿಂದ ಆಂಗ್ಲ ಭಾಷೆಯನ್ನು ಬೆಂಬಲಿಸಿತು. ಆಡಳಿತದಲ್ಲಿದ್ದ ಸರಕಾರವೂ ಅದನ್ನು ಪ್ರೋತ್ಸಾಹಿಸಿತು. ಇಂಗ್ಲಿಷ್ ಪರೋಕ್ಷವಾಗಿ ನಗರಗಳನ್ನು ಬೆಳೆಯಿಸಿದ ನೆಹರೂ ಆರ್ಥಿಕ ವಿಧಾನಕ್ಕೆ ಪೂರಕವಾಗಿದ್ದ ಅಂಶವೂ ಆಗಿತ್ತು.

ಇವೆಲ್ಲದರಿಂದಾಗಿ ಇನ್ನಷ್ಟು ಪ್ರಬಲವಾಗಿ ಬೆಳೆದ ಇಂಗ್ಲಿಷ್ ಮಾಧ್ಯಮದ ವಿದ್ಯಾಭ್ಯಾಸ ಅನುಕರಣೆಯನ್ನೇ ನಮ್ಮ ದೇಶದ ಶಿಕ್ಷಿತರಲ್ಲಿ ಬೆಳೆಸುತ್ತಾ ನಮ್ಮ ಯೋಜನಾಕ್ರಮದಲ್ಲಿ ಒಂದು ಅನುಕರಣೆಯ ಸಾಮೂಹಿಕತೆಯನ್ನು ತುಂಬಿ ಸ್ವಂತಿಕೆಯಿಂದ ರೂಪುಗೊಳ್ಳಬಹುದಾದ ಸಾಂಸ್ಕೃತಿಕ ಸಾಧ್ಯತೆಗಳನ್ನು ಮೊಟಕುಗೊಳಿಸುತ್ತಾ ಬಂತು.

ಆದರೆ, ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ, ಸಮಾಜದ ಮೇಲುಸ್ತರದಲ್ಲಿದ್ದು ಯಜಮಾನನಂತೆ ನಿಯಂತ್ರಿಸುತ್ತಿದ್ದ ಈ ಸಂಸ್ಕೃತಿಗೆ ಹೊರತಾದ ಒಂದು ಪ್ರತ್ಯೇಕವಾದ ಸಂಸ್ಕೃತಿ ನಮ್ಮ ಸಮಾಜದ ಕೆಳಸ್ತರದಲ್ಲಿ ಬಹಳ ಆದಿಯಿಂದಲೂ ಇತ್ತು ಎಂಬುದು. ಅಂಥ ಒಂದು ಕಿರುಸಂಸ್ಕೃತಿ ನಮ್ಮ ಸಮಾಜದ ಕೆಳವರ್ಗದ ಮತ್ತು ಕೆಳಜಾತಿಯ ಜೀವನಕ್ರಮದಲ್ಲಿ ರೂಪ ತಾಳಿದ ನೆಲದ ಗುಣ. ಇಂದು ಕೂಡಾ ನಮ್ಮ ಇಂಗ್ಲಿಷ ಸಂಸ್ಕೃತಿಗೆ ಒಳಪಡದೆ ಪ್ರತ್ಯೇಕವಾಗಿರುವ ಈ ಕಿರು ಸಂಸ್ಕೃತಿ ಒರಟಾಗಿ ನಾಜೂಕಿನ ಪ್ರದರ್ಶನವಿಲ್ಲದೆ ಇದೆ. ಯಜಮಾನ ಸಂಸ್ಕೃತಿಯ ಜನರಿಗೆ ಬೇಕಾದಷ್ಟು ಬಿಡುವು ಮತ್ತು ಸಂಪತ್ತನ್ನು ಕೊಡುವುದಕ್ಕಾಗಿ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ದುಡಿಯುವ ಜನರು ಇವರಾದ್ದರಿಂದ, ನಯನಾಜೂಕಿಗೆ ಬೇಕಾದಷ್ಟು ಆರಾಮದ ಸಂಪತ್ತು ಇಲ್ಲದೆ, ಇವರ ಸಂಸ್ಕೃತಿ ದೊರಗಾಗಿಯೇ ಇದೆ. ಆದಕ್ಕಾಗಿ ನೈಜವಾಗಿಯೂ ಇದೆ.

ಹೀಗೆ ನಮ್ಮ ಸಮಾಜದ ಕೆಳಸ್ತರದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಭದ್ರವಾಗಿ ಉಳಿದ ಬಹು ಸಂಖ್ಯಾಕರ ಸಂಸ್ಕೃತಿ ಎಂದೂ ಮೇಲಿನ ಸ್ತರದ ಸಂಸ್ಕೃತಿಯನ್ನು ಸ್ಥಾನಪಲ್ಲಟಗೊಳಿಸಿ ತಾನೇ ಈ ದೇಶವನ್ನು ಪ್ರತಿನಿಧಿಸುವ ಸಂಸ್ಕೃತಿಯಾದ್ದೇ ಇಲ್ಲ. ಕಿರುಸಂಸ್ಕೃತಿ ಅತ್ಯಂತ ಪ್ರಬಲವಾಗಿದ್ದ ಕಾಲದಲ್ಲಿ ಅದು ತನ್ನ ಹಿಂದಿನ ಅಥವಾ ಸುತ್ತಲಿನ ಹಿರಿಯ ಸಂಸ್ಕೃತಿಗಳ ಪ್ರಭಾವ ದಿಂದ ನಾಜೂಕಾಗಿ ಬಂದಿತ್ತು.

ಇದರಿಂದಾಗಿ ಈ ದೇಶದಲ್ಲಿ ಎಂದೂ ನಿಜವಾದ ಬದಲಾವಣೆ ಆಗಲೇ ಇಲ್ಲ. ಡಾ। ರಾಮಮನೋಹರ ಲೋಹಿಯಾರವರ ಪ್ರಕಾರ ನಮ್ಮ ದೇಶದ ಅರ್ಥಪೂರ್ಣ ಕ್ರಾಂತಿಯೆಂದರೆ: ಈ ದೇಶದ ಕಿರು ಸಂಸ್ಕೃತಿಯೇ ನಮ್ಮ ದೇಶದ ಸರ್ವಾಂತರ್ಯಾಮೀ ಸಂಸ್ಕೃತಿಯಾಗುವುದು; ನಮ್ಮ ಸಮಾಜದ ಮೇಲಿನ ಸ್ತರದ ಸಂಸ್ಕೃತಿಯಲ್ಲಿ ಮಾತ್ರ ಬದಲಾವಣೆಯಾಗುತ್ತಾ ಹೋಗಿ, ಅದು ಈ ದೇಶದ ಬಹು ಸಂಖ್ಯಾಕರ ಸಂಸ್ಕೃತಿಯಿಂದ ದೂರ ಉಳಿಯದೇ ಇರುವುದು; ನಮ್ಮ ದೇಶದ ಕಿರು ಸಂಸ್ಕೃತಿಯೇ ಯಜಮಾನ ಸಂಸ್ಕೃತಿಯನ್ನು ಆಕ್ರಮಿಸಿಕೊಂಡು ಒಂದು ಸರ್ವಾಂಗೀಣ ಬದಲಾವಣೆಯನ್ನು ಹೊಂದುವುದು.

ನಮ್ಮಲ್ಲಿ ಪ್ರತ್ಯೇಕವಾದ ಎರಡು ಸಂಸ್ಕೃತಿಗಳಿವೆ; ಮತ್ತು ಶತಮಾನಗಳಿಂದ ನಮ್ಮಲ್ಲಾದ ಅಷ್ಟೂ ಬದಲಾವಣೆಗಳೂ ಆಡಳಿತ ಭಾಷೆಯನ್ನು ಕಲಿತವರ, ಶ್ರೀಮಂತರ ಮತ್ತು ಅವರನ್ನು ಅನುಕರಿಸುತ್ತಾ ಬದುಕ ಬಯಸುವ ಮಧ್ಯಮ ವರ್ಗದ ಹಾಗೂ ಮೇಲ್ಜಾತಿಯವರ ಸಮಾನ ಆಸಕ್ತಿಯ ಸಾಂಸ್ಕೃತಿಕ ಕ್ಷೇತ್ರದಲ್ಲೇ ಆದ ಬದಲಾವಣೆಗಳು ಎಂದು ತಿಳಿದ ನಂತರ, ತಮ್ಮ ಜನರ ನೋವನ್ನು ಮೂರ್ತಗೊಳಿಸುತ್ತಾ ಇಂಗ್ಲಿಷ್ ಅನುಭವಗಳನ್ನು ಸಂಪೂರ್ಣವಾಗಿ ತಿರಸ್ಕರಿಸುವ ಕನ್ನಡ ಸಾಹಿತ್ಯದ ಹೊಸ ಬೆಳವಣಿಗೆಯಾದ ದಲಿತ ಸಾಹಿತ್ಯವನ್ನು ಅಭ್ಯಾಸ ಮಾಡುವುದು ಹೆಚ್ಚು ಯೋಗ್ಯ.

ತನ್ನ ಮನೆಯಲ್ಲಿ ರಾತ್ರಿ ದೀಪವನ್ನು ಉರಿಸದೆ, ಬೆಳಗ್ಗೆ ಬೆಳಕು ಮೂಡುವಾಗಲೇ ಎದ್ದು ಯಜಮಾನರ ಮನೆಗೆ ಕೂಲಿ ಕೆಲಸಕ್ಕೆ ಹೋಗುವ ಒಂದು ಹರಿಜನ ಕುಟುಂಬದ ಹುಡುಗನೊಬ್ಬ ಎಂ. ಎ. ಪಾಸಾದಾಗ ಹೇಗೆ ಯೋಚಿಸಬಹುದೆಂದು ಊಹಿಸಿಕೊಳ್ಳಿ. ಕೂಲಿಯಾಗಿ ಜೀವನವಿಡೀ ದುಡಿದೂ, ಗಂಜಿಗೂ ಗತಿಯಿಲ್ಲದೆ ನಿರಕ್ಷರಿ ಅಪ್ಪ, ಅಮ್ಮ, ಅಕ್ಕ, ತಂಗಿಯರು, ತನ್ನ ಸಮಸ್ತ ಮಂದಿ ಕತ್ತಲಿನ ಕೂಪದಿಂದ ಹೊರಬಂದು ಕಣ್ಣು ಪಿಳಿ ಪಿಳಿ ಮಾಡುವಾಗ 'ನೀನು ಸರಕಾರಿ ಬ್ರಾಹ್ಮಣ' ಎಂದು ಮೂದಲಿಸುವ ತನ್ನ ಅಧೋಗತಿಗೆ ಕಾರಣವಾದ, ವ್ಯವಸ್ಥೆಯ ಲಾಭ ಪಡೆದ ಜನ.

ಒಬ್ಬ ಸೂಕ್ಷ್ಮ ಸಂವೇದನಾಶೀಲ ಹರಿಜನ ಹುಡುಗ ಈಗ ಬದುಕನ್ನು ಗ್ರಹಿಸುವ ಕ್ರಮವೇ ಸಂಪೂರ್ಣ ಬದಲಾಗಿರುತ್ತದೆ. "ನನ್ನ ಕಾಲೇ ಕಂಬ, ದೇಹವೇ ದೇಗುಲವಯ್ಯ" ಎಂದು ಬಸವಣ್ಣನಿಗೆ ಕಂಡಂತೆ ಸಿದ್ಧಲಿಂಗಯ್ಯನಿಗೆ ಕಾಣಲಾರದು. ಸಿದ್ಧಲಿಂಗಯ್ಯನಿಗೆ "ನನ್ನ ಕಾಲು ಕೈ । ಕಂಬ ಅವರ ಹಟ್ಟಿಗೆ" ಎಂದು ತೋರುತ್ತದೆ. ಮತ್ತು ಹಾಗೆ ತೋರುವುದೇ ಸರಿ ಕೂಡಾ.

ಹೊಲೆಯರ ಕುಟುಂಬದಿಂದ ಬಂದ ನನ್ನ ಪರಿಚಯದ ದಲಿತ ಹುಡುಗನೊಬ್ಬ ಎಂ. ಎ. ಓದುತ್ತಿದ್ದಾಗ ಆತನಷ್ಟೇ ಬಡವನಾದ ಇನ್ನೊಬ್ಬ ಬ್ರಾಹ್ಮಣ ಹುಡುಗ ಅವನ ಕ್ಲಾಸಿನಲ್ಲಿದ್ದ. ಆ ಬ್ರಾಹ್ಮಣ ಬಡವ ತನ್ನ ಪಠ್ಯಪುಸ್ತಕಗಳನ್ನು ಹೇಗಾದರೂ ಹೊಂದಿಸುತ್ತಿದ್ದ. ಕೆಲವನ್ನು ತನ್ನ ಸೋದರ ಮಾವನಿಂದ, ದೂರದ ಸಂಬಂಧಿಕರಿಂದ, ಕೆಲವನ್ನು ಸ್ನೇಹಿತರಿಂದ ಮತ್ತು ಇನ್ನಿತರ ತನ್ನ ಊರಿನ ಪರಿಚಯದವರಿಂದ. ಮೈಸೂರಿನ ಸಾಹಿತ್ಯಾಸಕ್ತ ಗೆಳೆಯರನ್ನು ಬಿಟ್ಟರೆ, ತನ್ನೂರಿನಲ್ಲಿ ಯಾವ ಓದುಬರಹ ಬಲ್ಲ ಪರಿಚಿತರಾಗಲಿ, ಸ್ನೇಹಿತರಾಗಲಿ, ತನ್ನ ಬಾಲ್ಯದಲ್ಲಿ ಶಾಲೆ ಬಿಟ್ಟು ಒಂದು ವರ್ಷ ಕೂಲಿ ಕೆಲಸ ಮಾಡಿದ್ದ ಆ ದಲಿತ ಹುಡುಗನಿಗಿರಲಿಲ್ಲ. ಆದರೆ

ಅವನು ಒಂದು ಉದ್ಯೋಗಕ್ಕೆ ಸೇರಿ ಕೈತುಂಬಾ ಸಂಪಾದಿಸತೊಡಗಿದಾಗ, ಆತನ ಕೇರಿಯ, ಸಂಬಂಧದ ದಲಿತ ತಂದೆತಾಯಿಯರಲ್ಲಿ ತಮ್ಮ ಮಕ್ಕಳೂ ಅವನಂತೆ ಓದಬೇಕೆಂಬ ಅದಮ್ಯ ಆಸೆ ಬೆಳೆಯಿತು. ಒಬ್ಬ ಬ್ರಾಹ್ಮಣ ಬಡವನಿಗೂ, ಒಬ್ಬ ಹೊಲೆಯರ ಬಡ ಹುಡುಗನಿಗೂ ಇರುವ ವ್ಯತ್ಯಾಸ ಇದು.

ಕನ್ನಡ ಸಾಹಿತ್ಯದಲ್ಲಿ ಈತನಕ ಇರದಿದ್ದ ಒಂದು ಕತ್ತಲಿನ ಲೋಕದಿಂದ ಬಂದ ದಲಿತ ಲೇಖಕರು ಬಹಳ ಒರಟಾಗಿ ಬರೆಯುತ್ತಾರೆ. ನಾಜೂಕು ಅವರಿಗೆ ಬೇಡ. ಅವರ ಅನುಭವವೂ ನಾಜೂಕಿಂದಲ್ಲ. ಅವರ ಸಿಟ್ಟಲ್ಲಿ ಕೆಲವೊಮ್ಮೆ ಗೆರೆ ಎಳೆದು ವಿಭಾಗಿಸಿ ದಷ್ಟು ಸರಳವಾಗಿ ತೋರಿದರೂ ಕೂಡಾ ಅದು ಸಂಕೀರ್ಣವಾದದ್ದು. ಉದ್ವೇಗಕ್ಕೆ ಒಳಗಾಗದೆ ಶಾಂತವಾಗಿ ಪರಿಭಾವಿಸುವ ದೇವನೂರು ಮಹಾದೇವನಂಥ ಲೇಖಕರು ಅವರಲ್ಲಿದ್ದರೂ, ಅವರು ಕೂಡಾ ಬರೆಯುವುದು ತಮ್ಮ ರಕ್ತ, ಮಾಂಸಗಳನ್ನೇ ಕಿತ್ತು ಕೆತ್ತಿದ ಅನುಭವವನ್ನು. ಅದಕ್ಕಾಗಿಯೇ 'ಒಡಲಾಳ' ನಮಗೆ ಈ ತನಕ ಗೊತ್ತಿಲ್ಲದ ಒಂದು ಲೋಕದ ಅನುಭವಕ್ಕೆ ಕಣ್ಣು ತೆರೆಯಿಸಿದ ಕೃತಿ.

ಡಾ। ಶಿವರಾಮ ಕಾರಂತರ 'ಚೋಮನ ದುಡಿ'ಗೂ ಮಹಾದೇವ ಬರೆದ 'ಅಮಾಸ'ಕ್ಕೂ ವ್ಯತ್ಯಾಸ ಬರುವುದು ಇಲ್ಲಿ. ಡಾ। ಕಾರಂತರದ್ದು ಅಸ್ಪೃಶ್ಯತೆಯ ಸಾಮಾಜಿಕ ಅನ್ಯಾಯವನ್ನು ಬುದ್ಧಿಯಲ್ಲಿ ಗ್ರಹಿಸಿ ವಿವೇಚನೆಯಲ್ಲಿ ಅರಿತು, ಸಿಟ್ಟು ಕೊಂಡು, ಭಾವುಕತೆಯಲ್ಲಿ (emotional) ದುಃಖಗೊಂಡ ಹೊರಗಿನವರ ಅನುಭವ. ದೇವನೂರಿಗೆ ಅದು ತನ್ನ ಸ್ವಂತದ, ಇನ್ನೂ ತನ್ನ ಜನರು ಅನುಭವಿಸುತ್ತಿರುವ ನಿತ್ಯದ ಅನುಭವ. ಮಹಾದೇವ ಸುತ್ತಲಿನ ಜಗತ್ತನ್ನು, ಸಮಾಜವನ್ನು, ಜೀವನ ವನ್ನು ಕೊನೆಗೆ ನಕ್ಷತ್ರವನ್ನು ಕೂಡಾ ನೋಡುವುದು ಅದೇ ಅನುಭವದ ಮೂಲಕ. ಇಂಥ ಒಳಗಿನ ತೀವ್ರತೆಗೂ ಹೊರಗಿನ ಅನುಭವಕ್ಕೂ ಗುಣದಲ್ಲಿ ವ್ಯತ್ಯಾಸವಿದೆ. ಇನ್ನೂ ಬೆಳಕು ಕಾಣದ ತನ್ನ ಜನರಿಗೆ ಸಾಮಾಜಿಕವಾಗಿ ಏನಾದರೂ ಮಾಡುವ ಮತ್ತು ತನ್ನೊಳಗಿನ ನೋವಿನ ಅನುಭವವನ್ನು ಅಭಿವ್ಯಕ್ತಗೊಳಿಸುವ ಅವಶ್ಯಕತೆ ಸಂವೇದನಾ ಶೀಲನಾದ ದಲಿತನಿಗೆ ಇದ್ದೇ ಇದೆ. ಆದ್ದರಿಂದಲೆ ದಲಿತ ಸಾಹಿತ್ಯಕ್ಕೆ ಬಹಿರಂಗ ಸಂಸ್ಕೃತಿ ಮತ್ತು ಅಂತರಂಗದ ಅಭಿವ್ಯಕ್ತಿ ಎರಡರಲ್ಲೂ ನಿಜವಾಗುವ ಅನಿವಾರ್ಯತೆ ಇದೆ. ಈ ತನಕ ಬೆಳೆದ ಸಾಹಿತ್ಯ ವಿಮರ್ಶೆಯ ಅಳತೆಗೋಲು ಹೇಗೇ ಇರಲಿ, ಅನುಭವದ ವೈಯಕ್ತಿಕ ಅಭಿವ್ಯಕ್ತಿಯ ತೊಡಗುವಿಕೆಯಲ್ಲಿ ಸಾಮೂಹಿಕ ಬದುಕಿನ ಹೋರಾಟದ ಸಾಧ್ಯತೆಯನ್ನು ಗುರುತಿಸಿಕೊಳ್ಳುತ್ತಾ ಸೃಜನಶೀಲವಾಗುತ್ತಿರುವ ದಲಿತ ಸಾಹಿತ್ಯ, ನಮ್ಮ ಸಂಸ್ಕೃತಿಯ ಸಂದರ್ಭದಲ್ಲಿ ಈ ತನಕ ಇಲ್ಲದ ಹೊಸತನ್ನು ಕನ್ನಡ ಸಾಹಿತ್ಯಕ್ಕೆ ಕೊಡಬಹುದಾದ ಸಾಧ್ಯತೆಯತ್ತ ಸಾಗುತ್ತಿದೆ.

●

ಸೊನ್ನೆಗಳ ಸುತ್ತ

ಎಂ. ವಿ. ಚಕ್ರಪಾಣಿ

ಯುಗಯುಗಾಂತರದಿಂದ ಇಲ್ಲಿ ಹೀಗೆ:
ಪರಮಾಣು ಚಕ್ರ ಭ್ರಮಿಸುತ್ತದೆ;
ಮೇಲೆ ಆಕಾಶದಲ್ಲಿ ಸೂರ್ಯನ ಸುತ್ತ
ಗ್ರಹೋಪಗ್ರಹಗಳ ನಿರಂತರ ಚಲನೆ ನಡೆದಿದೆ
ಅಲ್ಲೂ ಸಲ್ಲದ ಇಲ್ಲೂ ಸಲ್ಲದ
ಗಾಣದೆತ್ತುಗಳ ಸುತ್ತೋಟ ಪರಿಧಿಯ ಗುಂಟ
ಗಾಡಿಯ ಚಕ್ರಕ್ಕಂಟಿ
ಕೊಂಚ ದೂರ ಮೇಲೆ ಮೇಲೆ ಮತ್ತೆ ಕೆಳಮುಖ
ಚಲನೆಯೇ ನಿತ್ಯವಿಧಿ.
ವರ್ಣಸಂಕರದ ನೆರಳ ಬೆನ್ನಿಗೆ
ಭಯದ ಸಂಭೋಗದ ಬಿಸಿಲ ಬಿಸಿ.
ಕುಡಿಯೊಡೆದ ಬಸಿರಿಗೆ
ಸಾವು ನೋವುಗಳ ನಾಯಿ ಬಾಲಕ್ಕೆ ಸಿದ್ಧಪಡಿಸಿದ ತೇಪೆ.
ವಾಸನೆಗೆ ಕೆರಳುವ
ಹತ್ತು ದಿಕ್ಕಿಗೆ ಹೊರಳುವ
ನಾಯಿಗಳ ನಿರಂತರದ ಕಾಪು ಬದುಕಿಗೆ.
ಬೀಜಾಣು ಜಾಲದೊಳ ಹೊಕ್ಕು
ತದ್ರೂಪು ಹೊತ್ತು ಗರ್ಭದಿಂದ ಹೊರ ಹರಿವ ರೇತೋ ಬಿಂದು.
ನೆಲದಾಳಕ್ಕಿಳಿದ
ಪರಂಪರೆಯ ಚಿತ್ತಕ್ಕೆ ಆಷಾಢದಲ್ಲಿ
ಹೊಸ ಹನಿಯ ಸೇಕ.
ತತ್ತಿಯಲ್ಲೂ ಹೊರ ತಲೆಯಿಕ್ಕುವ ತಾಯಿ ಕೋಳಿ,
ಹೊಸ ಅಲೆಯ ಹೊಸತಿಲಾಚೆಗೆ
ಭೋರ್ಗರೆವ ಕಡಲ ಮಾಮೂಲಿ ರಾಗ–
ಗಳಿಗೆಲ್ಲ ಎಂಜಲಾದ ಖಾಲಿ ತಟ್ಟೆಯ
ಸುತ್ತೂ ಸುತ್ತುವ ಇರುವೆಯನ್ನು ಬಿಟ್ಟು
ಉಳಿದ ಪ್ರತಿಮೆಗಳು ಬೇಕೆಂದರೂ ಸಿಗುವುದಿಲ್ಲ.

ಚದುರಂಗರ 'ವೈಶಾಖ'

ಒಂದು ವಿವೇಚನೆ

ಸುಧಾಕರ

'ವೈಶಾಖ'–ಚದುರಂಗರ ಮೂರನೆಯ ಕಾದಂಬರಿ.ಅವರ ಮೊದಲನೆಯ ಕಾದಂಬರಿ 'ಸರ್ವಮಂಗಳಾ' ದಲ್ಲಿ ಗ್ರಾಮೀಣ ಜೀವನದ ಮುಗ್ಧಸುಂದರ ಚಿತ್ರಗಳ ಸರಮಾಲೆ ನಿಶ್ಚಿತ ಕಥಾಚೌಕಟ್ಟಿನ ಕೊರಳನ್ನು ಅಲಂಕರಿಸಿದ್ದರೆ, ಎರಡನೆಯ ಕಾದಂಬರಿಯಾದ 'ಉಯ್ಯಾಲೆ' ಯಲ್ಲಿ ನಾಗರಿಕ ಜೀವನದ ಜಟಿಲತೆಯಿಂದ ಕೌಟುಂಬಿಕ ಜೀವನ ಕ್ಕೊದಗಿದ ಜಂಜಾಟ ಅರ್ಥಾತ್ ಆಂತರಂಗಿಕ ಹೊಯ್ದಾಟಕ್ಕೆ ಒತ್ತುಬಿದ್ದಿದೆ. ಮೂರನೆಯ ಕಾದಂಬರಿಯಾದ ಈ 'ವೈಶಾಖ' ದಲ್ಲಿ ಬಲಿಷ್ಠವಾದ ಬಹಿರಂಗ ಅಂತರಂಗ ಚಿತ್ರಗಳೆರಡೂ ಒಂದಕ್ಕೊಂದು ಪೂರಕವಾಗಿ ಅರ್ಥಪೂರ್ಣವಾಗಿ ಕೋದುಕೊಂಡಿರುವುದನ್ನು ಕಾಣಬಹುದು.

ಈ ಕಾದಂಬರಿಯಲ್ಲಿ ಪ್ರಧಾನವಾಗಿ 'ಪರಿಮಿತ ಸರ್ವಜ್ಞ ದೃಷ್ಟಿಕೋನ' (Limited omnicient point of view) ಹಾಗೂ ಅಲ್ಲಲ್ಲಿ ಗೌಣವಾಗಿ 'ಪ್ರಥಮಪುರುಷ ಸರ್ವಜ್ಞ ದೃಷ್ಟಿಕೋನ' (omnicient point ot view) ಗಳೆರಡೂ ಬಳಕೆಯಾಗಿವೆ. ಪರಿಮಿತ ಸರ್ವಜ್ಞ ದೃಷ್ಟಿಕೋನವು ನಮ್ಮ ಸಮಾಜದ ತೀರ ಕೆಳವರ್ಗಕ್ಕೆ ಸೇರಿದ ಲಕ್ಕನ ಪಾತ್ರ ಪ್ರಜ್ಞೆಯ ಮೂಲಕ ಪ್ರಧಾನವಾಗಿಯೂ ಮತ್ತು ಮೇಲುವರ್ಗಕ್ಕೆ ಸೇರಿದ ರುಕ್ಮಿಣಿ ಹಾಗೂ ಅವರ ಮಾವ ಕೃಷ್ಣಶಾಸ್ತ್ರಿಗಳ ಪಾತ್ರಪ್ರಜ್ಞೆಗಳ ಮೂಲಕ ಗೌಣವಾಗಿಯೂ ವ್ಯಕ್ತವಾಗಿರುವುದನ್ನು ಕಾಣುತ್ತೇವೆ. ಈ ಕಾದಂಬರಿಯ ವಸ್ತು ಮುಖ್ಯವಾಗಿ ನಮ್ಮ ಗ್ರಾಮೀಣ ಬದುಕಿನಲ್ಲಿ ತಾಂಡವವಾಡುತ್ತಿರುವ ಶೋಷಣೆ ಮತ್ತು ಅನ್ಯಾಯಗಳ ವಿವಿಧ ಮುಖಗಳನ್ನು ಅದರ ಸಂಕೀರ್ಣಾವಸ್ಥೆಯಲ್ಲಿ ಸುರುಳಿಬಿಚ್ಚಿಕೊಳ್ಳುವಂತೆ ಚಿತ್ರಿಸುವುದೇ ಆಗಿದೆ.

'ಬಡವನ ಹೆಂಡ್ತಿ ಊರೆಲ್ಲರ ಸೊಸೆ' ಎಂಬ ಗಾದೆಯಂತೆ, ಹಿಂದೆ ಕೆಲವು ಕಾಲ ಕೆಲವು ಮನೆಗಳಲ್ಲಿ ಜೀತದಾಳಾಗಿ, ಈಗ ಹಗಲು ಹೊತ್ತು ಕರೆದವರ ಗದ್ದೆತೋಟ ಗಳಲ್ಲಿ ಕೆಲಸ ಮಾಡುವ ದಿನಗೂಲಿಯಾಗಿ, ರಾತ್ರಿ ಹೊತ್ತು ಊರ ಕಾವಲು ಕಾಯುವ ಕುಳವಾಡಿಯಾಗಿ ಊರಿನ ಭೂತವರ್ತಮಾನ ವಿದ್ಯಮಾನಗಳ ಪ್ರತ್ಯಕ್ಷ ಪರೋಕ್ಷಾನುಭವಗಳ ಸಂಪರ್ಕ ಸೇತುವೆಯಂತಿರುವ ದಲಿತ ಲಕ್ಕನನ್ನು ಅನಂತ ಮುಖದ ಶೋಷಣೆ ಮತ್ತು ಅನ್ಯಾಯಗಳನ್ನು ಅನಾವರಣ ಮಾಡುವ ತಂತ್ರವನ್ನಾಗಿ ದುಡಿಸಿಕೊಂಡಿರುವುದು ಕಾದಂಬರಿಗೊಂದು ಬಂಧುರವಾದ ಬಂಧ ಲಭ್ಯವಾಗಲು ಕಾರಣವಾಗಿದೆ.

ಹೊಲೆಯರ ಲಕ್ಕ ಬ್ರಾಹ್ಮಣರ ಎಳೆಹಗೆಯಿಂದ ವಿಧವೆ ರುಕ್ಮಿಣಿಯನ್ನು ಬಸುರು ಮಾಡಿದನೆಂದು ಅವನಿಗೆ ಛಡಿ ಏಟಿನ ಶಿಕ್ಷೆ ವಿಧಿಸಿ, ಬಹಿಷ್ಕಾರ ಹಾಕಿ, ಊರಿಂದ ಉಚ್ಚಾಟನೆ ಮಾಡಿದ್ದು ಮುಖ್ಯಕಥೆಯ ಒಂದು ಮುಖವಾದರೆ, ವೇದಾಧ್ಯಯನದ ಹಕ್ಕಿನ ಗುತ್ತಿಗೆ ಪಡೆದಿದ್ದ, ಭೂಸುರರೆಂದು ತಮ್ಮನ್ನು ತಾವೇ ಹೊಗಳಿಕೊಂಡು ವಿಜೃಂಭಿಸುತ್ತಿದ್ದ ಬ್ರಾಹ್ಮಣರು, ಅಸ್ಪೃಶ್ಯನೊಂದಿಗೆ ಹಾದರ ಮಾಡಿ ಹಾರುವ ಜಾತಿಗೆ ಅವಮಾನ ಮಾಡಿದಳೆಂದು ಘಟಸ್ಫೋಟ ಮಾಡಿ, ತಲೆ ಬೋಳಿಸಿ, ಕತ್ತೆಯ ಮೇಲೆ ಕೂಡಿಸಿ ಮೆರವಣಿಗೆ ಮಾಡಬೇಕೆಂಬ ಬರ್ಬರ ತೀರ್ಮಾನ ತೆಗೆದುಕೊಂಡಾಗ ಆ ಅಸಹಾಯಕ ಹೆಣ್ಣು ಊರು ಬಿಟ್ಟು ಕಣ್ಮರೆಯಾಗುವುದು ಮುಖ್ಯ ಕಥೆಯ ಇನ್ನೊಂದು ಮುಖ. ಶೋಷಣೆಗೆ ಗುರಿಯಾದ ಈ ಎರಡು ಪಾತ್ರಗಳಿಗೆ ಒದಗುವ ಯಮಯಾತನೆ ಚಿತ್ರಹಿಂಸೆ–ದರುಮನ ಹಳ್ಳಿಯ ಇತರ ಜನತೆ ಅನುಭವಿಸುವ ಅನಂತ ಮುಖದ ಯಮಯಾತನೆ ಚಿತ್ರಹಿಂಸೆಗೆ ಸಂಕೇತವಾಗಿ ತುಂಬ ಕಲಾತ್ಮಕವಾಗಿ ಅನನ್ಯವಾಗಿ ಚಿತ್ರಿತವಾಗಿದೆ. ಪಾತ್ರ ಪ್ರಜ್ಞೆಯ ಮೂಲಕ ಅಭಿವ್ಯಕ್ತಿಸುವ ಕಾದಂಬರಿಕಾರರಾಗಲೀ ಅನುಭವಿಸುವ ಪಾತ್ರಗಳಾಗಲೀ ಎಲ್ಲಿಯೂ ಭಾವೋದ್ವೇಗ ಕ್ಕೊಳಗಾಗಿ ಹಸಿಹಸಿಯಾದ ಬಂಡಾಯದ ಘೋಷಣೆಗಳನ್ನು ಕಕ್ಕುವ ಅಪ್ರಬುದ್ಧ ಕೊರಕಲು ಜಾಡಿಗೆ ಕಾಲಿಕ್ಕದೆ, ನಿರುದ್ವಿಗ್ನವಾಗಿ ಎಲ್ಲವನ್ನೂ ತಾಳಿಕೊಳ್ಳುವ, ಆ ತಾಳಿಕೆಯೊಳಗಿನಿಂದಲೇ ಸದ್ದಿಲ್ಲದೆ ಸೀಳಿಕೊಂಡು ಕುಡಿಚಾಚುವ ಹೊಸ ಅರಿವಿನ 'ಅಕ್ಕಡಿ' ಯನ್ನು ಕಾಣಿಸುವ ಪ್ರಬುದ್ಧ ಹೆದ್ದಾರಿಯಲ್ಲಿ ಹೆಜ್ಜೆ ಇಟ್ಟಿರುವುದೇ ಇದಕ್ಕೆ ಮುಖ್ಯಕಾರಣವಾಗಿದೆ. ಹೀಗೆ ತಾಳಿಕೊಳ್ಳುವುದರ ಒಳಗಿನಿಂದಲೇ ಸದ್ದಿಲ್ಲದೆ ಸೀಳಿಕೊಂಡು ಮೈಮುರಿದೇಳುವ ಹೊಸ ಅರಿವಿನ ಜಾಗೃತಿಯನ್ನು ಕಾದಂಬರಿಯ ಕೊನೆಯ ಭಾಗದ ಲಕ್ಕನ ಮನಸ್ಥಿತಿಯಲ್ಲಿ ಓದುಗರು ಕಾಣಬಹುದಾಗಿದೆ. ಈ ಧ್ವನಿಸಾಧ್ಯತೆಗೆ ಪುಷ್ಟಿಯನ್ನು ನೀಡುವ ವಿವರಗಳೆಂದರೆ ೧) ಅಲಕ್ಷಿಸಬಹುದಾದ ಯಃಕಶ್ಚಿತ್ ಕಟ್ಟಿರುವೆಗಳೂ ಒಟ್ಟಾಗಿ ಕೂಡಿ ಭಯಂಕರ ಕಾಳಿಂಗ ಸರ್ಪದ

ಪ್ರಾಣ ತೆಗೆದದ್ದನ್ನು ಕಂಡು ಆಗಲಗೊಳ್ಳುವ ಲಕ್ಕನ ಕಣ್ಣುಗಳು; ೨)'ಉಪ್ಪಲಶೆಟ್ಟಿ ಉಪ್ಪಲಶೆಟ್ಟಿ ನೀ ತರ್‍ರೆ ನಾ ಪುರ್‍ರೆ' ಎಂಬ ಸೋರೆಕಟ್ಟು ಹಕ್ಕಿಯ ಮಾತಿನ ಹಿಂದಿರುವ ಜನಪದ ಕಥೆಯ ಆಶಯ; ೩) ಆನೆಯೊಂದು ಮರಿಯನ್ನು ಈ-ಯುವಾಗಿನ ವಿವರ ಹೊರಹೊಮ್ಮಿಸುವ ಸಂಕಲ್ಪ ಬಲ; ೪) ಮೊದಲಿನಿಂದಲೂ ವಿಯುದ್ ವಿಹಾರಿಯಾದ ವೈನತೇಯನ ಬಗೆಗಿರುವ ಮಿಡಿತ-ತುಡಿತ-ಇವುಗಳೆಲ್ಲ ಲಕ್ಕನ ಅಂತರಂಗದಲ್ಲಿ ತೆಕ್ಕೆಹುಯ್ದುಕೊಂಡು ಮಾಗಿ ಜಾಗೃತವಾಗಲು ಹವಣಿಸುತ್ತಿದ್ದ ಹೊಸ ಅರಿವಿನ ಸಂಕಲ್ಪ ಬಲಕ್ಕೆ ಚಾಲನೆಯನ್ನು ನೀಡುವ ಅಂಶಗಳು.

ಈ ಕಾದಂಬರಿಯ ಕಥಾ ಹಂದರದ ಆವರಣ ಮೈಸೂರು ಜಿಲ್ಲೆಯ ಹುಣಸೂರಿನ ಸುತ್ತಮುತ್ತಿನದು. ಗ್ರಾಮೀಣ ಪ್ರದೇಶದ ನಡೆನುಡಿ,ಮಡಿಮೈಲಿಗೆ, ಹಬ್ಬಹರಿದಿನ, ಅರ್ಥಕಳೆದುಕೊಂಡ ಆಚಾರವಿಚಾರಗಳು, ವ್ಯಕ್ತಿಗಳ ಆಕ್ರಮಣ-ಅಸಹಾಯಕತೆಗಳು, ಅನ್ಯಾಯ-ಅತ್ಯಾಚಾರಗಳು, ಕಿತಾಪತಿ- ಕಿರುಕುಳಗಳು, ದ್ವೇಷ-ಅಸೂಯೆಗಳು; ಈ ಎಲ್ಲವುಗಳ ಮಧ್ಯೆಯೂ ಅಲ್ಲಲ್ಲಿ 'ಪಳಾರ್' ಎಂದು ಮಿಂಚುವ ಪ್ರೀತಿವಾತ್ಸಲ್ಯ, ಅನುಕಂಪ, ಪರಹಿತನಿಷ್ಠೆ, ಉದಾತ್ತಗುಣ ಮುಂತಾದ ಮಾನವೀಯ ಮಿಡಿತಗಳು- ಹೀಗೆ ಕಿಕ್ಕಿರಿದ ಮನುಷ್ಯಲೋಕದ ಬಗೆಬಗೆಯ ಭಾವನೆ ಮತ್ತು ಕ್ರಿಯೆಗಳ ಜೊತೆಗೆ ಪ್ರಕೃತಿ ಲೋಕದಲ್ಲಿ ಜರುಗುವ ಆದರೆ ನೋಡಲು ದುರ್ಲಭವಾದ ಹಾವು-ಮುಂಗುಸಿಗಳ ರೋಷ ಭೀಕ್ಷಣ ಹೋರಾಟ, ಕಾಳಿಂಗ ಸರ್ಪ ಮತ್ತು ಕಟ್ಟಿರುವೆಗಳ ಬಲಾಬಲ ಪ್ರದರ್ಶನದ ಸೆಣೆಸಾಟ, ಆನೆಯೊಂದರ ಹೆರಿಗೆಗೆ ಉಳಿದ ಆನೆಗಳು ರಚಿಸಿದ ಚಕ್ರವ್ಯೂಹ ಮತ್ತು ಬಾಹ್ಯ ಅಪಾಯ ಸಂಭವಿಸದ ಹಾಗೆ ಕಾವಲು ಕಾಯುತ್ತಾ ನಿಂತಿದ್ದ ಸಲಗನ ಆತ್ಮವಿಶ್ವಾಸದ ಕ್ಯಾಮರಾನೋಟ-ಇಂಥ ವಿವಿಧ ಬಗೆಯ ವಿಶಿಷ್ಟಾನುಭವಗಳು ಓದುಗರನ್ನು ವಿಸ್ಮಿತರನ್ನಾಗಿ ಮಾಡುವುದೇ ಅಲ್ಲದೆ ಅವರ ಪ್ರಜ್ಞೆ ವಿಸ್ತೃತಗೊಳ್ಳುವಂತೆಯೂ ಮಾಡುತ್ತವೆ ಎಂಬುದರಲ್ಲಿ ಸಂದೇಹವಿಲ್ಲ: ಈ ಕಾರಣದಿಂದ ಈ ಕಾದಂಬರಿಯನ್ನು 'ಗ್ರಾಮಭಾರತ' ವೆಂದೇ ಕರೆಯಬೇಕು. ರಾಮಾಯಣದಲ್ಲಿ ಆದರ್ಶಕ್ಕೆ ಒತ್ತುಬಿದ್ದಿದ್ದರೆ, ಮಹಾ ಭಾರತದಲ್ಲಿ ಜೀವನದ ಕಟು ವಾಸ್ತವತೆಗೆ ಒತ್ತುಬಿದ್ದಿದೆಯಷ್ಟೆ. ಅದೇ ರೀತಿ ದರುಮನಹಳ್ಳಿಯ ಮತ್ತು ಸುತ್ತಮುತ್ತಲ ಕಟು ವಾಸ್ತವ ನಿರ್ದಿಷ್ಟ ಜೀವನವನ್ನು ಚಿತ್ರಸುತ್ತಲೇ-ಇದು ಇಂದಿನದು ಮಾತ್ರವಲ್ಲ, ಹಿಂದೆಯೂ, ಇದ್ದಂಥದು, ಮುಂದೆಯೂ ಇರುವಂಥದು ಎಂಬ-ನಿರ್ದಿಷ್ಟತೆಯನ್ನು ಮೀರಿದ ಸಾರ್ವತ್ರಿಕತೆಯನ್ನು ತಂದುಕೊಡಲು ಸ್ಥಳಪುರಾಣದ ಪೌರಾಣಿಕ ಕಲ್ಪನೆಯನ್ನು ಸೂಕ್ಷ್ಮವಾಗಿ ಬಳಸಿಕೊಂಡಿರುವುದು ಇಲ್ಲಿ ಗಮನಾರ್ಹ. ದಗುಮನಹಳ್ಳಿ, ಶಕುನಿಕೊಪ್ಪಲು, ಚಿತ್ರಮೂಲನಕೋಟೆ (ದ್ರೋಣಾಚಾರ್ಯರು ಕುರುಕ್ಷೇತ್ರ ಯುದ್ಧಕ್ಕಿಂತ ಮೊದಲು ಚಕ್ರವ್ಯೂಹ ರಚನೆಯ

'ಗೆಜ್ಜೆ ಪೂಜೆ' (Trial) ನಡೆಸಿದ್ದು ಇಲ್ಲಿ ಎಂದು ಸ್ಥಳಪುರಾಣ) ಎಂಬ ಹೆಸರುಗಳು, ದರುಮಾನ ಹಳ್ಳಿಯಲ್ಲಿ ಪಾಂಡವರು ಕುದುರೆ ಕಟ್ಟಲು ಬಳಸುತ್ತಿದ್ದರೆಂದು ಜನ ಈಗಲೂ ನಂಬಿರುವ ಮತ್ತು ಅದೇ ಹೆಸರಿನಿಂದ ಕರೆಯುವ 'ಕುದುರೆಕಂಬ' ಗಳು, ಕಾದಂಬರಿಯ ಕಥೆಯಲ್ಲಿ ಒಂದು ಕಡೆ ಪಂಚಾಯಿತಿದಾರರು ಕೌರವರ ಹಾಗೆ "ಮುಟ್ಟಾಗಿದ್ದ ಸಿವಾಚಾರದ ಗಂಗೆಯನ್ನು ಮುಂದಲೆ ಹಿಡಿದು ದರದರನೆ ಎಳೆದು ತಾ" ಎಂದು ಹೊಲೆಯರ ಲಕ್ಕನಿಗೆ ಆಜ್ಞಾಪಿಸುವ ಪ್ರಸಂಗ ಇವುಗಳೆಲ್ಲ ಮೇಲಿನ ನನ್ನ ಮಾತಿಗೆ ಸಾಕ್ಷಿಯಾಗಿ ನಿಲ್ಲುತ್ತವೆ.

ಲಕ್ಕನ ಪ್ರಜ್ಞೆಯ ಮೂಲಕ ಪ್ರಕಟವಾಗುವ ವರ್ತಮಾನಾನುಭವಗಳ ಜೊತೆ ಜೊತೆಯಲ್ಲೇ ಭೂತಾನುಭವಗಳೂ ತೆಕ್ಕೆಮುರಿ ಬೀಳುವುದರಿಂದ ಒಂದು ಮತ್ತೊಂದಕ್ಕೆ ಸನ್ನೆಗೋಲಾಗಿ, ಪರಸ್ಪರ ಪೂರಕಗುಣದಿಂದ ಪುಷ್ಟವಾಗಿ ಕಾದಂಬರಿ ಸಂಕೀರ್ಣಗೊಳ್ಳುತ್ತದೆಂಬುದೇನೋ ನಿಜ. ಆದರೆ ಕೆಲವು ವಿವರಗಳ ಬಗ್ಗೆ, ಕಾದಂಬರಿಕಾರರು ತಮ್ಮ ಅಗಾಧ ಜೀವನಾನುಭವಕ್ಕೆಲ್ಲ ಹೇಗಾದರೂ ಮಾಡಿ ಜಾಗ ಗಿಟ್ಟಿಸಿಕೊಡಲೇ ಬೇಕೆಂದು ಬಲವಂತವಾಗಿ ಗಿಡಿಯುತ್ತಿದ್ದಾರೇನೋ ಎಂದು ಮೇಲ್ನೋಟಕ್ಕೆ ಅನ್ನಿಸಿದರೂ, ಸಾವಧಾನದ ಒಳನೋಟಕ್ಕೆ ಅವು ಅನಗತ್ಯ ವಿವರಗಳೆನ್ನಿಸದೆ ಮುಂದಿನ ಕಥಾಕೇಂದ್ರಕ್ಕೆ ಪೂರಕವಾಗುವ, ಅರ್ಥಪೂರ್ಣ ಸಂಕೇತವಾಗುವ ಅಥವಾ ವೈದೃಶ್ಯಗುಣದಿಂದ ಕಾದಂಬರಿಗೆ ಆಳವನ್ನೊದಗಿಸುವ ಅನಿವಾರ್ಯ ವಿವರಗಳು ಎಂಬ ಸತ್ಯ ಹೊಳೆಯುತ್ತದೆ. ಉದಾಹರಣೆಗೆ: ಕಾದಂಬರಿಯ ಮೊದಲ ಭಾಗದಲ್ಲೇ ನಂಜೇಗೌಡರಿಂದ ಆಜ್ಞಾಪಿತನಾಗಿ ಮಾರಿಗುಂಡಿ ಅಣ್ಣದೀರಿಂದ ಜಪ್ಪಯ್ಯನ ಮಠದ ಸ್ವಾಮಿಗಳಿಗೆ 'ಔಷಧಿ'ಯನ್ನು ಒಂದು ಗೋಣಿಚೀಲದಲ್ಲಿ ಹೊತ್ತು ತಂದು ಕೊಟ್ಟಾಗ ಖುಷಿಗೊಂಡ ನಂಜೇಗೌಡ ಲಕ್ಕನ ಬೆನ್ನು ತಟ್ಟಿ ತಾರೀಪು ಮಾಡುತ್ತಾನೆ. ಲಕ್ಕ, 'ನನ್ನನ್ನು ಮುಟ್ಟಿಬಿಟ್ರಲ್ಲ' ಎಂದಾಗ 'ತೊಳಕೊಂಡರಾಯ್ತು' ಎನ್ನುತ್ತಾನೆ ನಂಜೇಗೌಡ. ಆಗ ಭೂತಾನುಭವವೊಂದು ಲಕ್ಕನ ನೆನಪಿನ ಮೂಲಕ ಅವತರಿಸುತ್ತದೆ. ಆದೆಂದರೆ ಕಡ್ಲೆಮಠದ ಹಣ್ಣು ಹಣ್ಣು ಸ್ವಾಮಿಗಳೊಬ್ಬರು ಸ್ನಾನವಾಡಿ ದೇವರಪೂಜೆಗೆಂದು ಹೊರಬಂದಾಗ, ಹೂತಂದ ಭಕ್ತನೊಬ್ಬ ಆಡಿದ ಹೊಲಸು ಮಾತನ್ನು ಕೇಳಿ ಹಾಗೆಯೇ ಮತ್ತೊಮ್ಮೆ ಸ್ನಾನಗೃಹ ಪ್ರವೇಶ ಮಾಡುತ್ತಾರೆ. ಎರಡನೆಯ ಸಾರಿ ಸ್ನಾನ ಮಾಡಿಕೊಂಡು ಹೊರಬಂದಾಗ, ತನ್ನ ತಪ್ಪಿಗಾಗಿ ಕ್ಷಮೆ ಯೊಚಿಸಲು ಅವರ ಕಾಲು ಕಟ್ಟಿಕೊಂಡು 'ಇನ್ನೊಂದು ಸಾರಿ ನನ್ನ ಬಾಯಿಂದ ಅಂಥ ವಾಕ್ಸ ಬಂದರೆ ಕೆಡವಿಕೊಂಡು ನನ್ನ ಮುಕುಳಿಗೆ ಹೆಟ್ಟಿ' ಎಂದಾಗ ಆ ಹಣ್ಣು ಹಣ್ಣು ಸ್ವಾಮಿಗಳು ಮೂರನೆಯ ಸಾರಿ ಸ್ನಾನಗೃಹ ಹೊಕ್ಕವರು ಆ ಭಕ್ತಶಿರೋಮಣಿ ಅಲ್ಲಿಂದ ಗೈರು ಹಾಜರಾಗುವವರೆಗೂ ಹೊರಬರದಿರುವಂಥ ಘಟನೆಯ

ವಿವರ. ಇದು ಮೇಲುನೋಟಕ್ಕೆ ಲೇಖಕರು ತಮಗಾದ ಸ್ವಾರಸ್ಯ ಪೂರ್ಣ ಅನುಭವವನ್ನು ಹೇಗಾದರೂ ಮಾಡಿ ಹೇಳಲೇಬೇಕೆಂಬುದರ ಪ್ರತೀಕ; ಯಾವ ರೀತಿಯಿಂದಲೂ ಪೂರಕವಲ್ಲದ ಅನಗತ್ಯ ನೆನಪಿನ ವಿವರ ಎನ್ನಿಸಿದರೂ, ಇಂದಿನ ಜಪ್ಪಯ್ಯನಮಠದಲ್ಲಿ ಜರುಗುತ್ತಿರುವ ಅನಾಚಾರಕ್ಕೆ ವೈದೃಶ್ಯವಾಗಿ ನಿಂತು ಅರ್ಥಪೂರ್ಣತೆಯನ್ನು ತಂದುಕೊಡಲು ಸಹಾಯಕವಾಗಿದೆ ಎಂದು ಸಾವಧಾನದ ಒಳನೋಟಕ್ಕೆ ಹೊಳೆಯುತ್ತದೆ. ಹೀಗೆಯೇ ಸಾಲುಗಟ್ಟಿ ನಿಂತ ಹೊಲಗೇರಿಯ ಜನ ಸುರಿಸುತ್ತಿರುವ ಕಣ್ಣೀರಕೋಡಿಯನ್ನು ದಾಟುತ್ತಾ, ಊರಿಂದ ಉಚ್ಚಾಟನೆಗೊಂಡ ನಿರಪರಾಧಿ ಲಕ್ಕ ಗೋಸಂಸಾಬರ ಜೊತೆ ಶಕುನಿಕೊಪ್ಪಲಿನತ್ತ ಸಾಗುವ ಕರುಳು ಕಿವುಚುವ ಸಂದರ್ಭದಲ್ಲಿ, ಕೊಂಚವೂ ಹೊಂದಾಣಿಕೆಯಿಲ್ಲದೆ ಧಿಡೀರನೆ ತಲೆ ಹಾಕುವ–"ಮುಂದೆ ಒದ್ದೆ ಹಿಂದೆ ಭಾರ"ವಾಗಿ ಅವಸರದಿಂದ ಕೆರೆಯತ್ತ ದಾಪುಗಾಲು ಹಾಕುತ್ತಾ ಹೋಗುತ್ತಿರುವ ವೆಂಕಣ್ಣ ಜೋಯಿಸರ ಹಿಂದೆ ನಾಗಾಲೋಟದಲ್ಲಿ ಬಂದ ನಾಮಧಾರಿ ಬಿಳಿಗಿರಿ ಏದುತ್ತ 'ಈ ದಿವಸ ಚೆನ್ನಾಗಿದ್ಯ?' ಎಂದು ಕೇಳುವುದು; 'ಮನೆ ಹತ್ರ ಬರ್ತೇನೆ,ನಡಿ' ಎಂದು ಜೋಯಿಸರೆಂದಾಗ 'ಇಲ್ಲ ಹೇಳಿ, ನಾನೊಂದು ಜೊತೆ ಎತ್ತು ತಗೋಬೇಕು, ನಾಳೆ ಅವು ಬೇರೆಯವರ ಪಾಲಾಗ್ತವೆ' ಎಂದು ಗಂಟು ಬೀಳುವುದು; ಹೀಗೆ 'ಅವಸರದ ನೆಂಟ' ನನ್ನು ಸಾಗು ಹಾಕಿ ಬರಲು ಕೆರೆಯತ್ತ ಧಾವಿಸುವ ಜೋಯಿಸರನ್ನು, 'ಅವಸರದ ಹೋಬಳಿ ಶಿರಸ್ತೇದಾರ' ನಂತೆ ಬಿಳಿಗಿರಿ ಒಂದು ಗಳಿಗೆ ತಡೆದು ನಿಲಿಹಾಕುವ ಹಾಸ್ಯಪ್ರಸಂಗ ಅಪ್ರಕೃತ, ಅನುಚಿತ ಎಂದು ಮೊದಲನ್ನಿಸಿದರೂ, ಯಾರಿಗೆ ಏನನ್ಯಾಯವಾದರೂ ಜನ ತಮ್ಮತಮ್ಮ ಸಮಸ್ಯೆಗಳಲ್ಲಿ, ಬಾಧೆಗಳಲ್ಲಿ, ಸ್ವಾರ್ಥಗಳಲ್ಲಿ ಮುಳುಗಿರುತ್ತಾರೆಯೇ ವಿನಾ ಸಾಮೂಹಿಕ ಹಿತಾಹಿತಗಳ ಬಗೆಗೆ ತಲೆಕೆಡಿಸಿಕೊಳ್ಳುವುದಿಲ್ಲ ಎಂಬ ಜೀವನಸತ್ಯದ ಕಂಡರಣೆಯ ದೃಷ್ಟಿಯಿಂದ ಅರ್ಥಪೂರ್ಣ ವಿವರ ಎನ್ನಿಸುತ್ತದೆ. ಹೀಗೆಯೇ ಮರ ಒರಗಿ ಕುಳಿತಿದ್ದ ಹೆಣ್ಣೊಬ್ಬಳ ಸುತ್ತಲೂ ಕಾದು ಕುಳಿತಿದ್ದ ರಣಹದ್ದುಗಳು ಸುಳಿವು ಸಿಕ್ಕೊಡನೆಯೇ ಜೇನುಹುಳದಂತೆ ಮುಸುರಿ ಮಾಂಸ ಕಿತ್ತು ತಿನ್ನುವ ಭಯಾನಕ ದೃಶ್ಯ 'ಬಿಡಿಗೆ' (unrelated, separate) ಯಂತೆ ಕಂಡರೂ ದರುಮನಹಳ್ಳಿಯಲ್ಲಿ ನಡೆಯುವ ಶೋಷಣೆಗೆ ಸಂಕೇತವಾಗಿ, ಸಿಡಿಯು ವಿವರ ಲಕ್ಕನಿಗೊದಗುವ ಚಿತ್ರಹಿಂಸೆಗೆ ಸಂಕೇತವಾಗಿ, ಪ್ಲೇಗಿನ ವಿವರ ಆ ಹಳ್ಳಿಯ ಜನರ ನೈತಿಕ ಅಧಃಪತನದ ಸಂಕೇತವಾಗಿ, ಕನಸಿನಲ್ಲಿ ರುಕ್ಮಿಣಿ ಗಂಡನೊಡನೆ ಚಿತ್ರಮೂಲನಕೋಟೆಯಿಂದ ಹೊರಬರಲು ದಾರಿಯೇ ಕಾಣದೆ ಕಕಮಕ ಹಿಡಿದಂತೆ ದಿಕ್ಕೆಟ್ಟು ಅಲೆದಾಡುವ ವಿವರ ಗಂಡನಿಲ್ಲದೆ ಬಸುರಾಗಿದ್ದ ಆಗಿನ ಅವಳ ಅಂತರಂಗಿಕ ಹೊಯ್ದಾಟದ ಸಂಕೇತವಾಗಿ ಕಥಾಕೇಂದ್ರಕ್ಕೆ ಪೂರಕವಾಗುತ್ತಾ ಹೋಗುತ್ತವೆ.

ಧಾರ್ಮಿಕ ಸಂಸ್ಥೆಯಾದ ಮಠ ಹೇಗೆ ಶೋಷಣೆಯ ಪ್ರಬಲ ಕೇಂದ್ರವಾಗಿದೆ ಎಂಬುದು ಜಪ್ಪಯ್ಯನಮಠದ ಸ್ವಾಮಿಗಳ ಹಾಗೂ ಅವರ ಹಿಂಬಾಲಕರ ಪಹಿವಾಟಿನ ಮುಖಾಂತರ, ಕ್ರೈಸ್ತ ಪಾದ್ರಿ ತಾನು ಬಸುರು ಮಾಡಿದ ಕನ್ಯೆಯನ್ನು ಸಂಚುಮಾಡಿ ಲಕ್ಕನ ದೊಡ್ಡಪ್ಪನ ಮಗ ಮುಗ್ಧ ಪುಟ್ಟಾರಿಯ ಕೊರಳಿಗೆ ಕಟ್ಟುವ ನೀಚತನದ ಮೂಲಕ, ತಾಯಿಯ ವ್ಯಭಿಚಾರವನ್ನು ಕಂಡು ನೇಣು ಹಾಕಿಕೊಂಡು ಸತ್ತ ಹಲಗನ ಸಾವಿಗೆ, ಮನೆಯ ಬಾಗಿಲಲ್ಲಿದ್ದ ಟಿಫಿನ್ ಕ್ಯಾರಿಯರನ್ನು ಕದ್ದು ತಂದು ಪಶ್ಚಾತ್ತಾಪದಿಂದ ಹಿಂದಿರುಗಿಸಿದ ಟಗರೂರನೇ ಕಾರಣವೆಂದು ಪಂಚಾಯಿತಿದಾರರು ತೀರ್ಮಾನಿಸಿ ಆ ಹುಡುಗನ ಉತ್ತರಕ್ರಿಯೆಗೆ ಸಾವಿರ ರೂಪಾಯಿ ಕೊಡಬೇಕೆಂದು ಒತ್ತಾಯ ಹಾಕಿ ಪೀಡಿಸಲು, ಅಷ್ಟು ದಂಡ್ದನ್ನು ಕೊಡಲು ಮಾರ್ಗವಿಲ್ಲದ ನಿರ್ಗತಿಕ ಟಗರೂರ 'ನನ್ನನ್ನು ಯಾರಾದರೂ ಜೀತಕ್ಕಿರಿಸಿಕೊಂಡು ಅಷ್ಟು ದಂಡ್ದನ್ನು ಕೊಡಿ' ಎಂದಾಗ 'ಅಷ್ಟುದುಡ್ಡನ್ನು ನಿನಗೂ ಕೊಡೋದಿಲ್ಲ, ನಿನ್ನ ಹೆಂಡತಿಗೂ ಕೊಡೋದಿಲ್ಲ ನಿನ್ನ ಮಗಳಿಗಾದ್ರೆ ಯಾರಾದರೂ ಮುಂದೆ ಬರಬಹುದು' ಎಂಬ ನಂಜೇಗೌಡನ ಮಾತಿನಂತೆ ತುಂಬುಹರೆಯದ ಇನ್ನೂ ಮದುವೆಯಾಗದ ಕನ್ಯೆ 'ಚೆಲುವೆ'ಯನ್ನು ಉದ್ಧಾರಯ್ಯನ ತೋಳೊಳಕ್ಕೆ ಎಸೆಯುವಂತೆ ಮಾಡಿದ ಶೋಷಣೆಯ ನೀಚತನ, ಹಾಗೆ ತೆಗದುಕೊಂಡ ಸಾವಿರ ರೂಪಾಯಿಯಲ್ಲಿ ಹಲಗನ ತಾಯಿಗೆ ನೂರು ಮಾತ್ರ ಕೊಟ್ಟು ಉಳಿದದ್ದನ್ನು ಪಂಚಾಯಿತಿದಾರರೇ ಸ್ವಾಹಾ ಮಾಡಿದ ಶೋಷಣೆಯ ಸಣ್ಣತನ–ಒಂದೆ ? ಎರಡೆ ? ಕಾದಂಬರಿಯನ್ನು ಓದಿದಾಗಲೇ ಶೋಷಣೆಯ ವಿರಾಡ್‌ರೂಪ ದರ್ಶನದಿಂದ ಮೂಕವಿಸ್ಮಿತರಾಗುವುದು; ತದನಂತರ ಅರ್ಜುನನಂತೆ ಮತ್ತೆ ಶಸ್ತ್ರ ಹಿಡಿದು ಹೋರಾಡಬೇಕೆಂದು ಮನಸ್ಸಾಗುವುದು.

ಈ ಕಾದಂಬರಿಯ ಪಾತ್ರ ಸೃಷ್ಟಿಯಂತೂ ವೈವಿಧ್ಯಪೂರ್ಣ. ಸತ್ತ ಹೆಣದ ಹೆಬ್ಬೆಟ್ಟಿನ ಗುರ್ತನ್ನು ತನ್ನ ಪತ್ರಕ್ಕೆ ಒತ್ತಿಸಿಕೊಳ್ಳುವ ದುರಾಶಾಪಿಶಾಚಿ ಬೆಟ್ಟಯ್ಯ; ಮಠದಲ್ಲೇ ಬೆಳೆಯುತ್ತಿದ್ದ ಸಿವಾಚಾರದ ಸಾತ್ವಿಕ ವ್ಯಕ್ತಿ ಕಪನಯ್ಯನವರ ಹರೆಯದ ಮಗಳನ್ನು ಬಸುರು ಮಾಡಿ ಅವಳ ಸಾವಿಗೆ ಕಾರಣವಾದ ಹಾಗೂ 'ಶಿವಾಚಾರ' ದ ಮಠವನ್ನು ಅನಾಚಾರ'ದ ಮಠವನ್ನಾಗಿ ಪರಿವರ್ತಿಸಿದ ಜಪ್ಪಯ್ಯನ ಮಠದ ಸಿವಪಾದಪ್ಪ; ಅವರ ಆ ದೌರ್ಬಲ್ಯವನ್ನೇ ತನ್ನ ಅಸ್ತ್ರ ಮಾಡಿಕೊಂಡು ಸ್ವಾಮಿಗಳನ್ನು ಬೆರಳತುದಿಯಲ್ಲಿ ಕುಣಿಸುತ್ತ ಊರಿನ ಹೆಣ್ಣು ಮಕ್ಕಳನ್ನು ತನ್ನ ಕಾಮಪಿಪಾಸೆಗೆ ಹಲವು ಹನ್ನೊಂದು ಮಾರ್ಗಗಳ ಮುಖಾಂತರ ಬಲಿಪಶುಗಳನ್ನಾಗಿಸುವ ಹಾಗೂ ಊರಿನ ಸಕಲ ಆಗುಹೋಗುಗಳ ಮೇಲೂ ತನ್ನ ಹಿಡಿತವನ್ನು ಇಟ್ಟುಕೊಂಡು ದಬ್ಬಾಳಿಕೆ ನಡೆಸುವ ನಂಜೇಗೌಡ; ದಾಯಾದಿಯು ಹಸು ಹಾಕಿದ ತೊಪ್ಪೆಯನ್ನು ಕದ್ದು ಬಾಚಿ ಹಾಕಿಕೊಳ್ಳುವ, ಆ ಮೂಲಕ ತನಗೇ ಹೆಚ್ಚು ನಷ್ಟಮಾಡಿಕೊಂಡದ್ದಲ್ಲದೆ ದಾಯಾದಿ ಗಂಗೆಯ ಶೀಲಹರಣಕ್ಕೂ ಪರೋಕ್ಷವಾಗಿ ಕಾರಣವಾಗುವ ಸಣ್ಣತನ ಮತ್ತು ಅವಿವೇಕಗಳ ಸಂಗಮವಾದ ಅಡವಿಯಪ್ಪ;

ಕಂಡಕಂಡ ಹೆಣ್ಣುಮಕ್ಕಳ ತಿಕಮೂಸುತ್ತ ತನ್ನ ಪುಂಸತ್ವ ಕಳೆದುಕೊಂಡು, ಕೊನೆಗೆ ತನ್ನ ಹರಾಮಿ ಹೆಂಡತಿ ತನ್ನೆದುರೇ ಹಾದರ ಮಾಡುತ್ತಿದ್ದರೂ ದಂಡಿಸುವ ದಮ್ಮಿಲ್ಲದೆ ಹಲ್ಲುಕಿತ್ತ ಹಾವಿನಂತೆ ಕಾಲ ಹಾಕುವ ಕೆಂಗಣ್ಣಪ್ಪ; ಜಾಡಿ ಇಲ್ಲದೆ ಗಂಟಲಲ್ಲಿ ಅನ್ನವಿಳಿಯದ ಹಾರುವಿತಿ ಲಕ್ಷ್ಮಮ್ಮ; ತಾನು ವಿಧವೆಯಾಗಿ ತಲೆ ಬೋಳಿಸಿಕೊಂಡಿದ್ದೇನೆಂದು ಸಕೇಶಿಯಾದ ರುಕ್ಮಿಣಿಯ ಕೂದಲನ್ನು ರಾತ್ರಿ ಹೊತ್ತು ಕತ್ತರಿಸಲು ಹೋಗುವ ಹೊಟ್ಟೆಕಿಚ್ಚಿನ ಮೊಟ್ಟೆಕೋಳಿಯಾದ ಸುಶೀಲತ್ತೆ; ಒಂಟಿತನದಿಂದ ಮತ್ತು ಆರ್ಥಿಕ ಅಭದ್ರತೆಯಿಂದ ಅಸಹಾಯಕಳಾಗಿ ಶೀಲವನ್ನು ಮಾರಿಕೊಂಡ ಲಕ್ಕನ ಸೋದರಿ ಶಿವನಿ; ಇನ್ನೂ ಋತುಮತಿಯಾಗದ ತನ್ನ ಮಗಳನ್ನು ಬಲವಂತವಾಗಿ ಹಿಡಿದು ಸಂಭೋಗಿಸಿದ ಕೆಂಗಣ್ಣಪ್ಪನ ವಿರುದ್ಧ ಅಹವಾಲನ್ನು ನೀಡಿದರೂ ಅದನ್ನು ನ್ಯಾಯಸ್ಥರು ಕಿವಿಗೇ ಹಾಕಿಕೊಳ್ಳದೆ ಅಲಕ್ಷಿಸಿದಾಗ, ಜಾತಿಬಲವಾಗಲೀ ಧನಬಲವಾಗಲೀ ಇಲ್ಲದೆ ನಿಸ್ಸಹಾಯಕಳಾಗಿ ಬಾಯಿಮುಚ್ಚಿಕೊಂಡು ಹಲುಬುವ ದಲಿತೆ ಕುಂಡಿಮಾದಿ; ಅನ್ಯಾಯದ ವಿರುದ್ಧ ಅನ್ನಿಸಿದ್ದನ್ನು ಯಾವ ಮುಲಾಜೂ ಇಲ್ಲದೆ ಆಡುವ, ಅನ್ಯರ ಕಷ್ಟದಲ್ಲಿ ಅನುಕಂಪದಿಂದ ಭಾಗಿಯಾಗುವ ಹಾಗೂ ತಮ್ಮ ಲವಲವಿಕೆಯ ರಸಿಕತೆಯ ಮಾತುಕತೆಗಳಿಂದ ಎಲ್ಲರ ಮನ ಸೂರೆಗೊಳ್ಳುವ ದ್ಯಾವಾಜಮ್ಮ ಮತ್ತು ಬುಡಮ್ಮ; ಸುಟ್ಟರೊಟ್ಟಿಯ ಬಿಸಿ ತಣ್ಣಗಾಗದಿರಲೆಂದು ಕಿಬ್ಬೊಟ್ಟೆಯೊಳಗೆ ಇಟ್ಟುಕೊಂಡು, ಊರಿಂದ ಉಚ್ಚಾಟನೆಯಾದ ಮಗನಿರುವಲ್ಲಿಗೆ ತೆಗೆದುಕೊಂಡು ಹೋಗಿ ಕೊಟ್ಟೂ ಕೊಟ್ಟು, ಅಷ್ಟಗಲ ಜಾಗವೂ ಸುಟ್ಟುಹೋಗಿದ್ದರೂ ಯಾರೊಂದಿಗೂ ಬಾಯಿಬಿಡದೆ ಅಸದೃಶ ಮಾತೃವಾತ್ಸಲ್ಯವನ್ನು ತೋರಿ ಕಣ್ಣುಮುಚ್ಚಿಕೊಂಡ ಕಲ್ಯಾಣಿ; ಮುಸಲ್ಮಾನನಾದರೂ ಶ್ರೇಷ್ಠ ಹಿಂದೂಗಳು ನಾಚುವಂತೆ ಮಾನವೀಯ ವರ್ತನೆಯಿಂದ ಮನಸೆಳೆವ ಗೋಸುಸಾಬರು; ಯಾವುದೋ ವಿಷಗಳಿಗೆಯಲ್ಲಿ ಸಂಯಮ ಕಳೆದುಕೊಂಡು ದಾರಿತಪ್ಪಿದರೂ, ಸದಾ ಕಂದಾಚಾರ ಅನ್ಯಾಯಗಳ ವಿರುದ್ಧ ಸೆಣಸುತ್ತಲೇ ಮಾನವೀಯತೆಗೆ ಮೊದಲ ಸ್ಥಾನ ನೀಡುವ ಸಾತ್ವಿಕ ವ್ಯಕ್ತಿ ಕೃಷ್ಣಶಾಸ್ತ್ರಿ–ಹೀಗೆ ಹತ್ತಾರು ಬಗೆಯ ಜೀವಂತ ಪಾತ್ರಗಳು ಕಾದಂಬರಿ ರಸದುಂಬಲು ಕಾರಣವಾಗಿವೆ.

ಕಾದಂಬರಿಯಲ್ಲಿ ಬರುವ ವೈದೃಶ್ಯ ವಿವರಗಳು ಕಾದಂಬರಿ ಆಳಗೊಳ್ಳಲು, ತೂಕಗೊಳ್ಳಲು ಸಹಕಾರಿಯಾಗಿವೆ. ಉದಾಹರಣೆಗೆ ಪಂಚಾಯಿತಿದಾರರ ಅಜ್ಞೆಯಂತೆ ಲಕ್ಕ ಗಂಗೆಯ ಮನೆಗೆ ಬಂದು ಐದಾರುಸಾರಿ ಕೂಗಿದರೂ ಗಂಗೆ ಓಗೊಳ್ಳದಿದ್ದುದನ್ನು ಕಂಡು ಪಡಸಾಲೆಗೆ ಹೆಜ್ಜೆ ಇಟ್ಟು ಇನ್ನೊಮ್ಮೆ ಕೂಗಬೇಕೆನ್ನುವಷ್ಟರಲ್ಲಿ ಹೊರಗೆ ಹೋಗಿದ್ದ ಗಂಗೆ ಬಂದು "ನಿನಗೆಷ್ಟುಲ ಧಿಮಾಕು ? ಪಡಸಾಲೆ ಒಳೀಕ ಬಂದಿದ್ದೀಯಾ ಸಿಪಾಚಾರದೋರು ಒಂದೇ, ಹೊಲೇರು ಒಂದೆ-ಅಲ್ವೇನೊ ?" ಎಂದು ಧಟ್ಟಿಸಿ ಕೇಳುವ ಪ್ರಸಂಗಕ್ಕೂ, ಬಾಲ್ಯದಲ್ಲಿ ದನಮೇಯಿಸಲು ಹೋಗಿ ಮಳೆಯಲ್ಲಿ ನೆನೆದು ಹುಲಿಮೊಳೆಯ ಗುಹೆಯಲ್ಲಿ ಲಕ್ಕ ಮತ್ತು ಗಂಗೆ ಇಬ್ಬರೇ ಇರುವಾಗ ಚಳಿಯನ್ನು

ತಾಳಲಾರದ ಗಂಗೆ (ಇನ್ನೇನು 'ದೊಡ್ಡೋಳು' ಆಗುವ ವಯಸ್ಸು) ಲಕ್ಕನನ್ನು ತಬ್ಬಿ ಹಿಡಿದು ಕೆಳಕ್ಕುರುಳಿಸಿಕೊಂಡು ಮೇಲೆ ಮಲಗಿ ಹೊಸಕಾಡಿದ ಪ್ರಸಂಗಕ್ಕೂ ಇರುವ ವೈದೃಶ್ಯ ಓದುಗರ ಪ್ರಜ್ಞೆಯನ್ನು ವಿಸ್ತರಿಸುವಂತೆ ಮಾಡುತ್ತವೆ. ಹೀಗೆಯೇ ಬ್ರಾಹ್ಮಣರ ರುಕ್ಮಿಣಿಯನ್ನು ಹೊಲೆಯರ ಲಕ್ಕ ಬಸುರು ಮಾಡಿದನೆಂದು (ರುಕ್ಮಿಣಿಗೇ ಸಂದೇಹ–ತಾನು ಬಸುರಿಯಾದದ್ದು ಲಕ್ಕನಿಂದಲೋ ? ಅಥವಾ ಮಾವನಿಂದಲೋ ? ಎಂದು) ಉತ್ತಮ ನ್ಯಾಯಸ್ಥರೆಲ್ಲ ಸೇರಿ ಅಮಾನುಷವಾಗಿ ಅವನಿಗೆ ಶಿಕ್ಷೆ ವಿಧಿಸುವ ಪ್ರಸಂಗಕ್ಕೂ, ಹಿಂದೆ ಗಂಡನನ್ನು ಕಳೆದುಕೊಂಡ ದುಃಖದಲ್ಲಿ ವಿಧವೆ ರುಕ್ಮಿಣಿ ಜೀವದಾಸೆ ತೊರೆದು ಬಾವಿಗೆ ಬೀಳುವುದೂ; ರಾತ್ರಿ ಊರ ಕಾವಲು ಕಾಯುತ್ತಿದ್ದ ಲಕ್ಕ ನೋಡಿ ಬಾಯಿ ಬಡಿದುಕೊಂಡಾಗ ಬ್ರಾಹ್ಮಣರೂ ಸೇರಿದಂತೆ ಅಕ್ಕಪಕ್ಕದ ಉತ್ತಮರೆಲ್ಲ ಎದ್ದು ಬಂದು ಬಾವಿಯ ಸುತ್ತ ನೆರೆಯುವುದು; ಆ ಕತ್ತಲೆಯಲ್ಲಿ ಆಳವಾದ ಬಾವಿಯೊಳಕ್ಕೆ ಇಳಿದು ಒಂದು ಜೀವವನ್ನುಳಿಸುವ ಪರಹಿತೈಕನಿಷ್ಠೆಯ ಜನ ಬ್ರಾಹ್ಮಣಶ್ರೇಷ್ಠರಲ್ಲಾಗಲೀ ಅಥವಾ ಅಬ್ರಾಹ್ಮಣ ಉತ್ತಮರಲ್ಲಾಗಲೀ ಮುಂದೆ ಬರದಿರುವುದು; ಲಕ್ಕ ತನ್ನ ಪ್ರಾಣದಾಸೆಯನ್ನು ಲೆಕ್ಕಿಸದೆ ಇನ್ನೊಂದು ಪ್ರಾಣವನ್ನು ಉಳಿಸಲು ಬಾವಿಗಿಳಿದವನೇ, ಹರೆಯದ ಹಾರುವ ತರುಣಿಯನ್ನು ತಬ್ಬಿಕೊಂಡು ಮೇಲೆತ್ತುವುದು–ಈ ಪ್ರಸಂಗಕ್ಕೂ ಇರುವ ವೈದೃಶ್ಯ ನಮ್ಮ ಜಾತಿವ್ಯವಸ್ಥೆಯ ಹಾಗೂ ಉತ್ತಮರ ಅರ್ಥಹೀನ ವರ್ತನೆಯ ಬಗೆಗೆ ಯೋಚಿಸುವಂತೆ ಮಾಡುತ್ತದೆ. ಹೊಲೆಯರ ಲಕ್ಕ ಸರ್ವಶ್ರೇಷ್ಠ ಬ್ರಾಹ್ಮಣ ಜಾತಿಯ ಹೆಣ್ಣನ್ನು ಬಲವಂತದಿಂದ ತಬ್ಬಿ ಕೆಡಿಸಿದ ಎಂದು ಈಗ ತಪ್ಪು ಕಂಡು ಶಿಕ್ಷೆ ವಿಧಿಸುವ ಉತ್ತಮರಿಗೆ, ಅಂದು ಅವಳ ಜೀವವನ್ನುಳಿಸಲು ಬಾವಿಯೊಳಗೆ ತಬ್ಬಿಕೊಂಡು ಮೇಲೆತ್ತಿದಾಗೇಕೆ "ನೀನು ಹೊಲೆಯ ಬ್ರಾಹ್ಮಣ ಯುವತಿಯನ್ನು ಮುಟ್ಟಬೇಡ" ಎಂದು ಕೂಗಿ ಅಡ್ಡಿಪಡಿಸಲಿಲ್ಲ ? ಎಂಬ ಸತ್ಯದತ್ತ ಓದುಗರ ಯೋಚನೆ ಹರಿಯುತ್ತದೆ. ಕಾದಂಬರಿಕಾರರು ತುಂಬ ಸೂಕ್ಷ್ಮವಾಗಿ ನಿರುದ್ವಿಗ್ನವಾಗಿ ಕಲಾತ್ಮಕವಾಗಿ ಕಡೆದು ತೆಗೆದ ಈ ಸಾಮಾಜಿಕ ಪ್ರಜ್ಞೆಯ ಹೊಸ ಮಗ್ಗುಲನ್ನು ಕಂಡು ಓದುಗರ ಕಣ್ಣುಗಳು ಅರಳುತ್ತವೆ; ಅಗಲಗೊಳ್ಳುತ್ತವೆ. ಹೀಗೆಯೇ ಬ್ರಾಹ್ಮಣ ಜಾತಿಯ ಕೇಶವಯ್ಯ ಹೊಲೆಯರ ಜಾತಿಯ ಲಕ್ಕನ ಸೋದರಿ ಶಿವನಿಯನ್ನು ಮಡಗಿಕೊಂಡಿದ್ದರೂ ಬ್ರಾಹ್ಮಣರಾರಿಗೂ ತಮ್ಮ ಜಾತಿ ಹೋಯಿತು ಎನ್ನಿಸಿ, ರುಕ್ಮಿಣಿಗೆ ಮಾಡಿದಂತೆ ಘಟಸ್ಫೋಟ ಮಾಡಿ ಜಾತಿಯಿಂದ ಹೊರಹಾಕದಿರುವಂಥ ವೈದೃಶ್ಯವಾಗಲೀ ಅಥವಾ ನಂಜೇಗೌಡ ಕಿತಾಪತಿ ಮಾಡಿ ಗಂಡನಿಲ್ಲದ ಗಂಗೆಯನ್ನು ಹೆದರಿಸಿ ಮಠಕ್ಕೆ ಕರೆದೊಯ್ದು ಮೂರುನಾಲ್ಕು ಸಾರಿ ಬಸುರು ಇಳಿಸಿಕೊಳ್ಳುವಂತೆ ಮಾಡಿದ ವಿಷಯ ಊರಿಗೆ ಗೊತ್ತಾದರೂ ಲಕ್ಕನಿಗೆ ವಿಧಿಸಿದಂಥ ಶಿಕ್ಷೆಯನ್ನು ಮಠದ ಸ್ವಾಮಿಗಾಗಲೀ ಅಥವಾ ಅವರ ದೌರ್ಬಲ್ಯವನ್ನು ಬಳಸಿಕೊಂಡು ಗೂಳಿಯಾಗಿ ಕಂಡಕಂಡವರ ಹೊಲದ ಬೆಳೆಯನ್ನು ಮೇಯುವ ನಂಜೇಗೌಡನಿಗಾಗಲೀ

ವಿಧಿಸುವ ತಾಕತ್ತು ನ್ಯಾಯಸ್ಥರಿಗೆ ಇಲ್ಲದಿರುವ ವೈದೃಶ್ಯವಾಗಲೀ-ಹೇಗೆ ಈ ಕಾದಂಬರಿಯ ಬರವಣಿಗೆ, ಮೇಲೆ ಮೇಲೆ ತೇಲುವ ಬೆಂಡಾಗದೆ ಆಳಕ್ಕೆ ಮುಳುಗುವ ಸೀಸದ ಗುಂಡಾಗಿದೆ ಎಂಬುದನ್ನು ದೃಢಪಡಿಸುತ್ತವೆ. ಕಾದಂಬರಿಯು ತುಂಬ ಗಿಟಕಾಯಿಸಿಕೊಂಡಿರುವ ಇಂಥ ವೈದೃಶ್ಯಗಳ ಮುಖೇನ ಅರ್ಥಪೂರ್ಣವಾದ ಹೊಸ ಅರಿವಿನ ಆಯಾಮ ಸುಲಭವಾಗಿ ದಕ್ಕುವಂಥಾಗಿರುವುದು ಈ ಕಾದಂಬರಿಯ ಹೆಚ್ಚುಳದ ಅಂಶಗಳಲ್ಲಿ ಒಂದೆನ್ನಬಹುದು.

ಈ ಕಾದಂಬರಿಯ ಇನ್ನೊಂದು ಹೆಚ್ಚುಳದ ಅಂಶವೆಂದರೆ ಭಾಷಾಬಳಕೆಯು. ರುಕ್ಮಿಣಿ ಹಾಗೂ ಕೃಷ್ಣಶಾಸ್ತ್ರಿಗಳ ಪ್ರಜ್ಞೆಯ ಮೂಲಕ ದಾಖಲಾಗುವ ವಿಷರಕ್ಕೆಲ್ಲಾ ಶಿಷ್ಟ ಭಾಷೆಯನ್ನೂ, ಕೇಂದ್ರಪಾತ್ರವಾದ ಲಕ್ಕನ ಪ್ರಜ್ಞೆಯ ಮುಖಾಂತರ ದಾಖಲಾಗುವ ವಿವರಗಳಿಗೆಲ್ಲ ಗಟ್ಟಿಮುಟ್ಟಾದ ಗ್ರಾಮ್ಯ ಭಾಷೆಯನ್ನೂ ಬಳಸಿ ವೈವಿಧ್ಯವನ್ನು ಮೆರೆದಿದ್ದಾರೆ. ಆದರೆ ಮೊನಚಿನಿಂದ, ಹೊಳಪಿನಿಂದ, ಗರಿಮುರಿಯಂದ ತಾಜಾತನದಿಂದ, ಖುಷಿಕೊಡುವ ಲವಲವಿಕೆಯಿಂದ, ಧ್ವನಿಪ್ರಚುರವಾದ ಸ್ಪಂದನಶಕ್ತಿಯಿಂದ ಕೂಡಿದ ಗ್ರಾಮ್ಯಭಾಷೆಯ ಮುಂದೆ ಅದೇ ಮಟ್ಟದ ಮೊನಚು, ಹೊಳಪು, ತಾಜಾತನ, ಧ್ವನಿಪ್ರಚುರತೆಗಳನ್ನು ಹೊಂದಿರದ ಶಿಷ್ಟಭಾಷೆ ನಿಸ್ತೇಜವಾಗಿ ಕಾಣುತ್ತದೆ. ಶಿಷ್ಟಭಾಗಕ್ಕಿಂತ ಅಶಿಷ್ಟ ಭಾಗದಲ್ಲಿ ಕಾದಂಬರಿಕಾರರು ಮೈಚಳಿಬಿಟ್ಟು ಬರೆಯುವ ಎದೆಗಾರಿಕೆಯನ್ನು ತೋರಿರುವುದೇ ಅಲ್ಲದೆ, ಹುಣಸೂರು ಪ್ರದೇಶದ ಭಾಷೆಯ ಕುವತ್ತನ್ನು ಕೊಳ್ಳೆಹೊಡೆದಿದ್ದಾರೆ ಎಂದೇ ಹೇಳಬೇಕು. ಅಲ್ಲಿ ಬಳಕೆಯಾಗಿರುವ ಗಾದೆಗಳು (ನೆರಮನೆ ಹೆಂಗಸಿಗೆ ನೆಗದು ಮುತ್ತುಕೊಟ್ಟಂಗೆ, ಶ್ಯಾಟ ಸುಟ್ಟರೆ ಇದ್ದಲೂ ಅಲ್ಲ ಬೂದಿಯೂ ಅಲ್ಲ, ಹಡಸಿಕೊಂಡ ಮ್ಯಾಲೆ ಹೇಳಿಕೋಬಾರ್ದ್ರ್, ಹಾಲು ಕುಡಿದರೆ ಹಾದರ ಮಾಡೋ ಹಾಗಾಗ್ತದೆ, ಅನ್ನ ಅದೆ ಅಂತ ಉಂಡೋನು ಕೆಟ್ಟ ಹೆಣ್ಣು ಅದೆ ಅಂತ ಹೋದೋನು ಕೆಟ್ಟ ಮುಂತಾದುವು) ಒಗಟುಗಳು (ಪಂಚಮುಖದ ಕುದುರೆ ಪಾರ ತಿರುಗ್ತದೆ-ಮಂತು; ಉತ್ತಹೊಲದಲ್ಲಿ ತೆಕ್ಕೆ ಹುಯ್ಕೊಂಡು ಬಿದ್ದದೆ-ಉಳ್ಳೋಹಗ್ಗ ಮುಂತಾದುವು) ಮತ್ತು ನುಡಿಗಟ್ಟುಗಳು (ಉರಿದು ಉಪ್ಪಾಗು-ಕೋಪಗೊಳ್ಳು, ಬಾವುಟ ಮ್ಯಾಲಾಗು-ಗೆಲ್ಲು, ಮುಂಡೆ ಕೂದ್ಲು ಚುಳ್ ಅನ್ನದಿರು-ಕೊಂಚವೂ ಕಷ್ಟ ಅನುಭವಿಸದೆ ಹಾಯಾಗಿರು, ಮಾತು ಆತುಕೊಳ್ಳು-ಕೇಳಿಸಿಕೊಳ್ಳು, ತಿಕ್ಕೆ ಗೇರು ಹುಯ್ಯು-ಎರಡು ಬಗೆ ಮುಂತಾದುವು) ಗ್ರಾಮೀಣ ಪ್ರದೇಶದ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾಗಿ ಹಳ್ಳಿಗಾಡಿನ ಆವರಣವನ್ನು ಮೂಡಿಸುವುದರಲ್ಲಿ ಸಹಾಯಕವಾಗಿದೆ. ಶಿಷ್ಟಭಾಷೆಗಿಂತ ಅಶಿಷ್ಟ ಎನ್ನುವ ಗ್ರಾಮ್ಯಭಾಷೆ ಎಷ್ಟು ಶಕ್ತಿಪೂರ್ಣವಾಗಿ ಬಳಕೆಯಾಗಿದೆ ಎನ್ನುವುದಕ್ಕೆ ಕೆಳಗಿನ ಎರಡು ಉದಾಹರಣೆಗಳನ್ನು ಅವಲೋಕಿಸಬಹುದು:

೧)"ಹಿಂದೆಲ್ಲ ತಮ್ಮ ತೋಟಕ್ಕೆ ಕೂಲಿಗೆ ಬರುತ್ತಿದ್ದ ತನ್ನ ಓರಗೆಯ ಎಂಕಟಿಯನ್ನು ಕುರಿತು ರುಕ್ಮಿಣಿ "ನೀನು ಮದುವೆಯಾದದ್ದು ಹನುಮನ್ನ ಅಲ್ಲವಾ?" ಎಂದು ಕೇಳಿದಾಗ ಎಂಕಟಿ ಹೇಳುತ್ತಾಳೆ "ಊ. ಆಗಿದ್ದೆ ಕನವ್ವ-ಅವನ್ನೇ ಆಗಿದ್ದೆ. ಇಲ್ಲಾಂತ ಯಾವಬಾಯ್ನಲ್ಲಿ ಯೋಳ್ಲಿ? ಆದ್ರೆ ಯಾವ ಸೀಮೆ ಗಂಡಸ ಅವ್ನು?... ಮಗ್ಗುಲಲ್ಲಿ ಮನಗಿಸಿ ಕೊಂಡ್ರೆ ಒಂದು ಎಳೆಕೂಸ ತಬ್ಬಿಕೊಂಡು ಮನಕ್ಕಂಡಂಗಾಯ್ತಿತ್ತು. ಅದರಾಗೆ ಯಾವ ಸುಂಕ, ತಗೀರಿ ಬರೀ ನೀರಿಗೆ ಬೆಟ್ಟದ್ದಿ ಚೀಪಿದಂಗೆ, ಅಷ್ಟೇಯ.... ಅಯ್ಯೋ ಪರ್ಪಂಚಕೇ ಗ್ವತ್ತಿರುವಾಗ ನಿಮ್ಮ ತಾವು ಮುಂಚ್ಚಕೆ ಹೋದ್ರೆ, ತಿಕ ಬುಟ್ಟು ಸ್ಯಾಲೆ ಸುತ್ತಿಗಂಡಂಗೆ ಆಯ್ತದೆ...ಕ್ಯಾಳಿ, ನಿಮ್ಮ ತಾವ ಯೋಳಕ್ಕೇನು ? ನಂದೂ ಪೆಣ್ಣು ಜಲ್ಮ. ತಡೀನಿಲ್ಲ. ಅವನ್ನ ಬುಟ್‌ಬುಟ್ಟು ಬ್ಯಾರೆ ಒಬ್ಬನ್ನ ಮಡಿಕಂಡಿವ್ನಿ."

೨)ಕುಂಡಿಮಾದಿ ತನ್ನ ಇನ್ನೂ ಋತುವಾಗದ ಮಗಳನ್ನು ಒಂಟಿಸಿಕ್ಕಿಸಿಕೊಂಡು ಬಲವಂತವಾಗಿ ಸಂಭೋಗಿಸಿದ ಕೆಂಗಣ್ಣಪ್ಪನ ವಿಷಯವನ್ನು ಹೇಳಿದಾಗ, ಹೊಲೆಯರ ದ್ಯಾಮಾಜಮ್ಮನ ಪ್ರತಿಕ್ರಿಯೆ ಹೀಗೆ: "ಇದರಾಗೆ ಯಾವ ಅತಿಸಯ ಇದ್ದಾತು, ತಗಿ, ಅವಯ್ಯ ಸರಕಾರಿ ಗೂಳಿ ಹಂಗೆ ಕಂಡ ಕಂಡ ಅವ್ಮೀರ ಮೇಲೆಲ್ಲ ಹಾರಿ, ತನ್ನ ಪುರುಸತ್ವಾನೆಲ್ಲ ಕಳಕೊಂಡು ಭಾಳ ಕಾಲ ಆಗೋಯ್ತು. ಈಗ ಮ್ಯಾಲೆ ದಬ್ಬನೆ ಬೀಳಾದು, ಹ್ವಸಕಾಡಾದು, ಈಟೇಯ ಅವನ ಕೈಲಿ ಕಿಸಿಯಾದು! ಅವ್ನು ಮಡಕ್ಕಂಡಿದ್ದ ಮರಸು ಒಕ್ಕಲಿಗರ ದ್ಯಾವೀನೇ ನನ್ನ ಕಂಟ್ಟೆ ನಗಾಡ್ತಾ ಯೋಳಿದ್ಲು... ಈಗ ನಿನ್ನ ಸಾವಂತ್ರಿ ರುತುಮಾತಿ ಆಗದಿದ್ರೂ ಓಟೇಯ, ಆಗಿದ್ರೂ ಓಟೇಯ... ಈವಯ್ಯ ಆಡೋ ಆಟಕೆ ಐನಾತಿ ಹೆಡ್ತೀನೆ ಗಂಟಾಕವ್ನೆ, ತಕ್ಕೊ... ಇವ್ನ ಕದ್ದು ಮಾಡಾದ ಅವಳು ರಾಜಾರೋಸವಾಗೇ ಮಾಡ್ತಾ ಅವಳಲ್ಲ ?.... ಈ ಮುಂಡೇದೆನಾರ ತುಂಟಪಿಟಕನ್ನಾಕೆ ಅಪ್ಪಣೆ ಉಂಟ ? ನಮ್ಮೂರ್ನಲ್ಲಿ ಆಡೋ ಯಕ್ಸಗಾನದಲ್ಲಿ ಮರದ ಅಟ್ಟ ನಡಗಿಸಕ್ಕಿಲ್ವ ತೊಂಡಾನೂರು ರಕ್ಕಸಿ, ಅವಳಂಗೆ ಒಂದಪ ಅಬ್ಬರಿಸಿದ್ರೆ ಮುಂಗಿದೋಯ್ತು, ಇಂದುಂಗಡೆ ಸ್ಯಾವಿಗೆ ಒತ್ತಿಗತ್ತದೆ ಅಯ್ಯಂಗೆ!"

ಮೇಲಿನ ಉಧೃತ ಭಾಗಗಳು ಆಡುನುಡಿಯಲ್ಲಿರುವ ಚಿತ್ತಾಕರ್ಷಕ ಚಿತ್ರಕಶಕ್ತಿಯನ್ನೂ ಧ್ವನಿಶಕ್ತಿಯನ್ನೂ ಸಾಬೀತು ಪಡಿಸುತ್ತವೆ. ಆದರೆ ಕೆಲವು ಶಬ್ದಗಳ ರೂಪ ಸಾಮಾನ್ಯ ಓದುಗರಿಗೆ ತಲೆನೋವು ಬರಿಸುತ್ತದೆ ಎಂಬುದಂತೂ ನಿಜ. ಉದಾಹರಣೆಗೆ ಯೋಳಗೆ (ಹೇಳು + ಹೆಣ್ಣೆ), ಬಾಗೆ (ಬಾ + ಹೆಣ್ಣೆ), ಏನು ಕಿತ್ತುಕಂಡೀಣೆ(ಏನು ಕಿತ್ತುಕಂಡೀಯೆ + ಹೆಣ್ಣೆ) ಮುಂತಾದ ಮಾತುಗಳನ್ನು ಗಮನಿಸಬಹುದು. ಭಾಷೆ ತಾಳುವ ವಿವಿಧರೂಪದ ಬಗ್ಗೆ ಅರಿವಿದ್ದವರಿಗೆ ಇದೇನು ಕಷ್ಟವಾಗುವುದಿಲ್ಲ,

ಕೂಡಲೇ ಅದರ ಶುದ್ಧರೂಪವನ್ನು ಊಹಿಸಿಕೊಳ್ಳಬಹುದು. ಆದರೆ ಹಳ್ಳಿಗಾಡಿನ ಭಾಷೆಯ ಸಂಪರ್ಕವಾಗಲೀ, ಉಚ್ಚಾರಣೆ ಹಾಗೂ ಸೌಲಭ್ಯಾಕಾಂಕ್ಷೆಯಿಂದ ಶಬ್ದ ತಾಳುವ ಸಂಕ್ಷಿಪ್ತರೂಪದ ಬಗೆಗಿನ ಎಚ್ಚರವಾಗಲೀ ಇಲ್ಲದ ನಾಗರಿಕ ಓದುಗರಿಗೆ ಕೊಂಚ ಕಷ್ಟವಾಗುತ್ತದೆ,

ಅಗಾಧ ಜೀವನಾನುಭವದ ವಿವರಗಳನ್ನು ಎಲ್ಲಿಯೂ ಎಚ್ಚರದಪ್ಪದೆ ಕಲಾತ್ಮಕವಾಗಿ ನಿರ್ವಹಿಸಿರುವ ಕಾದಂಬರಿಕಾರರು, ಕೆಲವು ಸಣ್ಣಪುಟ್ಟ ವಿಷಯಗಳಲ್ಲಿ ಎಚ್ಚರದಪ್ಪಿರುವುದು ಆಶ್ಚರ್ಯವಾಗಿ ಕಾಣುತ್ತದೆ. ಉದಾಹರಣೆಗೆ ಪುಟ ೬೪ ರಲ್ಲಿ ಕೃಷ್ಣಶಾಸ್ತ್ರಿಗಳು ಸರಸಿಯ ಬಗೆಗೆ "ತಾಯಿ ಇಲ್ಲದ ಕೂಸು" ಎಂದು ಹೇಳುತ್ತಾರೆ. ಆದರೆ ನಿಜವಾಗಿ ಹೇಳಬೇಕಾದದ್ದು "ತಂದೆ ಇಲ್ಲದ ಕೂಸು" ಎಂದು! ಪುಟ ೧೬೬ರಲ್ಲಿ ನಿಂಗಯ್ಯ ತನ್ನ ಮಗಳಿಗೆ "ಸೋಸಲುವೀನು ಉದಕ ಮಾಡಮ್ಮ" ಎಂದಾಗ ಮಗಳು "ಅದ್ಕೆ-ದುಡ್ಡು ?" ಎಂದು ಕೇಳುತ್ತಾಳೆ. ಆಗ ನಿಂಗಯ್ಯ "ಅಯ್ಯಾಗೇಳಿ ತರಿಸು" ಎನ್ನುತ್ತಾನೆ. ಆದರೆ ಅಲ್ಲಿ ನಿಜವಾಗಿರಬೇಕಾದದ್ದು "ಅವ್ವಾಗೇಳಿ ತರಿಸು" ಎಂದು! ಪುಟ ೪೪೪-೪೫ ರಲ್ಲಿ ಬೊಡ್ಡ ಲಕ್ಕನ ಜೊತೆಯೇ ಇದ್ದು ಕಾಡ ಕಂಡದ್ದಕ್ಕೆಲ್ಲ ಬಗುಳುತ್ತಿದ್ದದ್ದು, ಆವನು ಆನೆ ಈಯುವ ದೃಶ್ಯವನ್ನು ನೋಡುವಾಗ ಮಾತ್ರ ನಾಯಿ ಬಗುಳುವುದೇ ಇಲ್ಲ! ಬಹುಶ: ಕಾವಲು ಕಾಯುವ ಸಲಗನಿಗೆ ಗೊತ್ತಾದರೆ ತನ್ನ ಪ್ರಾಣ ಉಳಿಸುವುದಿಲ್ಲ ಎಂಬ ಭಯ ಲಕ್ಕನಿಗೆ ಇರುವಂತೆಯೇ ಚಿತ್ರಿಸುವ ಕಾದಂಬರಿಕಾರರಿಗೂ ಇರುವುದರಿಂದ ಅಭಿಮನ್ಯು ಮಾಡಿದ ಹಾಗೆ ಅದು ಬಗುಳದಂತೆ ಬಾಯ್ಮುಂಬ ಬಾಣಗಡಿದಿರಬೇಕು!

ಈ ಕಾದಂಬರಿಯಲ್ಲಿ ಬರುವ ಲಕ್ಕ ಮತ್ತು ಬೊಡ್ಡ ಕುವೆಂಪು ಅವರ "ಮಲೆಗಳಲ್ಲಿ ಮದುಮಗಳು" ಕಾದಂಬರಿಯಲ್ಲಿ ಬರುವ ನಾಯಿಗುತ್ತಿ ಮತ್ತು ಗುತ್ತಿನಾಯಿಯನ್ನು ನೆನಪಿಗೆ ತಂದರೂ; ಅಲ್ಲಿ ಗುತ್ತಿನಾಯಿ 'ನಿಜ' ಆಗಿರುವ ಹಾಗೆ ಅಥವಾ ಒಂದು ಜೀವಂತ ಪಾತ್ರವಾಗಿರುವ ಹಾಗೆ ಇಲ್ಲಿ ಬೊಡ್ಡ ಆಗಿಲ್ಲ ಎನ್ನಿಸುತ್ತದೆ. ಆದರೆ ಕೆಲವು ಅನುಭವಗಳನ್ನು ಲಕ್ಕನ ಪ್ರಜ್ಞೆಯ ಮೂಲಕ ಅಭಿವ್ಯಕ್ತಿಸಲು ಬೊಡ್ಡ ಸಹಾಯಕವಾಗಿದೆ. ಅಂದರೆ ತಾಂತ್ರಿಕ ದೃಷ್ಟಿಯಿಂದ ಬೊಡ್ಡನನ್ನು ಕಾದಂಬರಿಯಲ್ಲಿ ಬಳಸಿಕೊಳ್ಳಲಾಗಿದೆ. ಉದಾಹರಣೆಗೆ ಹಾವು ಮುಂಗುಸಿಯ ಕಚ್ಚಾಟವನ್ನು ಕಂಡು ಬೊಡ್ಡ ಬಗುಳಿದ್ದರಿಂದಲೇ ಲಕ್ಕ ಅಲ್ಲಿಗೆ ಹೋದದ್ದರಿಂದಲೇ ನಂಜೇಗೌಡ ಕಾಡಿನ ಮರಗಳನ್ನು ಕಡಿಸಿ ಮೈಸೂರಿಗೆ ಕದ್ದು ಸಾಗಿಸುವ ಕುತಂತ್ರವನ್ನು ಲಕ್ಕನ ಪ್ರಜ್ಞೆಯ ಮುಖಾಂತರ ದಾಖಲು ಮಾಡಲು ಸಾಧ್ಯವಾದದ್ದು; ಹಾಗೆಯೆ ಲಕ್ಕನ ತಾಯಿ ಕಲ್ಯಾಣಿಯ ಅಸದೃಶ ಮಾತೃವಾತ್ಸಲ್ಯವನ್ನು ಅನಾವರಣಮಾಡಲು ಸಾಧ್ಯವಾದದ್ದು. ಹೀಗೆ ತಾಂತ್ರಿಕ ದೃಷ್ಟಿಯಿಂದ ಬೊಡ್ಡನ ಸ್ಥಾನ ಅಗತ್ಯವಾಗಿದೆ.

ಕುವೆಂಪು ಅವರ 'ಕಾನೂರು ಹೆಗ್ಗಡಿತಿ' ಹಾಗೂ 'ಮಲೆಗಳಲ್ಲಿ ಮದುಮಗಳು', ಕಾರಂತರ 'ಮರಳಿಮಣ್ಣಿಗೆ', ರಾವ್‌ಬಹಾದ್ದೂರರ 'ಗ್ರಾಮಾಯಣ' ಮುಂತಾದ ಅತ್ಯುತ್ತಮ ಪ್ರಾದೇಶಿಕ ಕಾದಂಬರಿಗಳ ಸಾಲಿಗೆ ಸೇರುವಂಥದು 'ವೈಶಾಖ'–ಕಥಾ ಭಾಗದ ಬೃಹತ್ತು, ಅನುಭವಸಾಂದ್ರತೆಯ ಮಹತ್ತು ಹಾಗೂ ವಸ್ತು ನಿರ್ವಹಣೆಯ ಕಲಾತ್ಮಕ ಕಿಮ್ಮತ್ತುಗಳ ದೃಷ್ಟಿಯಿಂದ. ಒಟ್ಟಿನಲ್ಲಿ ಕನ್ನಡ ಕಾದಂಬರಿ ಪರಂಪರೆಯ ಮುನ್ನಡೆಗೆ ಚಾಲನೆಕೊಡುವ ಹೊಸ ಕೊಡುಗೆ ಈ ಕಾದಂಬರಿ ಎಂದು ಹೆಮ್ಮೆಯಿಂದ ಹೇಳಬಹುದು.

ಉಸಿರಿಲ್ಲದವರು ಪದ ಹಾಡಿದರು

ಪುರುಷೋತ್ತಮ ಬಿಳಿಮಲೆ

ನನ್ನುಸಿರನ್ನೆಲ್ಲಾ ಆವಿಯಾಗಿಸುವ ನಿಷ್ಕರುಣಿ ಸೂರ್ಯ
ಕೆಂಪಾಗಿ ಬಿರಿದ ಸಮಯ ಬಿಳಿಚಿಕೊಂಡು
ಎದೆ ನಡುಗಿಸುವ ಹೊತ್ತು
ನೆಲದ ಹಸಿರೆಲ್ಲಾ ಒಣಗಿ ಭೂಮಿ ಬಿರಿವ ಕಾಲ
ಒಣತೊಗಲ ವಿಕೃತಿಯಡಿಯಲ್ಲಿ
ಹುಲ್ಲು ಹುಟ್ಟದೆ ನನ್ನವ್ವನ ಮುಖದಲ್ಲಿ
ನೀರಿಲ್ಲದ ನೂರು ಕಾಲುವೆ ಹುಟ್ಟಿಕೊಂಡಾಗ
ಉಸಿರಿಲ್ಲದವರು ಪದ ಹಾಡಿದರು.

ಸಪ್ಪೆ ಅವಕಾಶಗಳಲಿ ಸೊಂಪಾಗಿ ಬಿರಿವ
ಕೆಂಪು ದಾಸವಾಳಗಳು ಒಣಗಿ ಪರಿಮಳವಿಲ್ಲದೆ
ದಳ ಉದುರಿಸಿಕೊಂಡು ವಿಧವೆಗಳಾಗುವ ಹೊತ್ತು
ನನ್ನೂರ ಮುಳ್ಳು ಬೇಲಿಗಳಲ್ಲಿ ಕ್ಯಾಕ್ಟಸ್‌ನ ಮೊಗ್ಗುಗಳು
ಅರಳತೊಡಗಿದಾಗ
ಉಸಿರಿಲ್ಲದವರು ಪದ ಹಾಡಿದರು.

ನೆಲಬಿರಿವ ಕಾಲದಲಿ ಕಲ್ಲುಗಳು ಎದೆ ಒಡೆದುಕೊಂಡು
ಮಣ್ಣು ನಾರುವ ಸಮಯ
ಹೊಳೆಬದಿಯ ಮರಳು ಬಾಣಲೆಯ ಕಡಲೆಯಾಗುತ್ತಾ
ಎದೆಯಾರಿ ನಾಲಗೆ ಕುಂಬುಗಟ್ಟಿದ ಕಾಲ
ರಕ್ತ ಆವಿಯಾಗಿ ದೇಹ ಮೂಳೆ ಚಕ್ಕಳವಾಗಿ
ಮಿಂದುಳು ಕನೆಗಟ್ಟಿ ಕಣ್ಣು ಪೇಲವವಾಗಿ
ನರಸತ್ತವರ ಗುಂಡು ನರಳತೊಡಗಿದಾಗ
ಉಸಿರಿಲ್ಲದವರು ಪದ ಹಾಡಿದರು.

ಸಂಕ್ರಮಣ/೧೧೬

ತುಂಬು ಕೋಟೆಯು ತುಂಬಾ ತುದಿಟ್ಟುಕೊಂಡ
ಮುತ್ತು ರತ್ನಗಳೆಲ್ಲಾ ಹಾಡು ಹಗಲೇ ದರೋಡೆಯಾಗುತ್ತಿರುವಾಗ
ನನ್ನಂಥವರ ಸಾವಿರ ಸಾವಿರ
ಮನೆಗಳ ಗೋಡೆಗಳೆಲ್ಲಾ ಗಡಗಡನೆ ನಡುಗಿ
ಬಂಡ ಕಳಚಿಕೊಳ್ಳುವ ಸಂದರ್ಭ
ನಕ್ಷತ್ರಗಳು ಹೆಣವಾಗಿ ಚಂದ್ರ ನಂದಿ
ಬೆಳದಿಂಗಳಿಗೆ ಹೆಣದ ಕಮಟುವಾಸನೆ ತಿಂದು
ಕೋಗಿಲೆಗಳು ವಿಷಕುಡಿದು ಹೊರಳುತ್ತಿದ್ದಾಗ
ಉಸಿರಿಲ್ಲದವರು ಪದ ಹಾಡಿದರು.

ನನ್ನೂರ ದಟ್ಟಹಸುರುಕಾಡುಗಳ ಮಧ್ಯೆ
ಹುಲಿ ಸಿಂಹ ಸರ್ಪಗಳು ರಾಜ್ಯವಾಳುತ್ತಿದ್ದಾಗ,
ಅಲ್ಲೊಂದು ಇಲ್ಲೊಂದು ಕೊಬ್ಬಿದ ತೋಳಗಳು
ಕುರಿಮರಿಗಳಿಗೆ ಪಾಠ ಹೇಳಿಕೊಡುತ್ತಿರುವಾಗ
ನೆಲವೊದೆದು
ತುಟಿಕಚ್ಚಿ
ಮೈ ಬಿಚ್ಚಿ

ಉಸಿರಿಲ್ಲದವರು ಪದ ಹಾಡಿದರು
ಕೊನೆಗೂ
ಉಸಿರಿಲ್ಲದವರು ಪದ ಹಾಡಿದರು.

ವಿಶ್ವಕಥಾಕೋಶ : ಮೂರನೆಯ ಕಂತು

ಡಾ. ಸಿ. ವಿ. ವೇಣುಗೋಪಾಲ

ಹೆಜ್ಜೆಗುರುತು, ಅರಬಿ, ನೆತ್ತರು ದೆವ್ವ, ಬಾವಿಕಟ್ಟೆಯ ಬಳಿ–ಇವು ನವಕರ್ನಾಟಕ ಪ್ರಕಾಶನದವರ ಬೃಹದ್ಯೋಜನೆ ವಿಶ್ವಕಥಾಕೋಶದ ಮೂರನೆಯ ಕಂತಿನ ನಾಲ್ಕು ಕಥಾ ಸಂಕಲನಗಳು. ಮೊದಲ ಎರಡು ಕಂತಿನ ಪುಸ್ತಕಗಳಂತೆಯೇ ಉತ್ತಮ ಮುದ್ರಣ, ವಿನ್ಯಾಸಗಳಿಂದ ಆಕರ್ಷಕವಾಗಿ ಹೊರಬಂದಿರುವ ಇವೂ ತಾವು ಒಡಗೊಂಡಿರುವ ವೈವಿಧ್ಯಮಯ ಕತೆಗಳಿಂದ ಓದುಗರಿಗೆ ನಿರಾಸೆಯನ್ನೂ ಮಾಡದು. ಕೆಲವು ಉತ್ತಮ ಪ್ರಾತಿನಿಧಿಕ ಲೇಖಕರು ಇಲ್ಲಿ ಕಾಣದಿರಬಹುದು. ಸಂಪಾದಕರು ಹೇಳುವಂತೆ ಅದಕ್ಕೆ ವಿಶಿಷ್ಟ ಕಾರಣಗಳಿಗಬಹುದು. ಆದರೆ ಪರಿಚಯಿಸಿರುವ ಕತೆಗಾರರೆಲ್ಲರೂ ಉತ್ತಮ ಮಟ್ಟದ ಕತೆಗಾರರೆಂಬುದರಲ್ಲಿ ಮಾತ್ರ ಸಂಶಯವಿಲ್ಲ.

●

ಈ ಕಂತಿನ ಮೊದಲನೆಯ ಸಂಕಲನ ಹೆಜ್ಜೆಗುರುತು. ರಷ್ಯದ ಹದಿನೇಳು ಕತೆಗಳು. ವಿಶ್ವಕಥಾಕೋಶದ ಮೊದಲ ಸಂಪುಟಗಳು ಹೊರಬಂದಾಗ ಅನೇಕರಿಗೆ ಇದ್ದ ಭಾವನೆ–(ಇಲ್ಲಿಯ ಕತೆಗಳ ಆಯ್ಕೆ ಎಡಪಂಥೀಯ ಧೋರಣೆಗೆ ಅನುಕೂಲಕರವಾಗುವ ಕತೆಗಳಷ್ಟೇ)–ರಷ್ಯದ ಕತೆಗಳು ಅಕ್ಟೋಬರ್ ಕ್ರಾಂತಿಯ ತದನಂತರದ ಕತೆಗಳಿಗೆ ಸೀಮಿತವಾಗಿರಬಹುದೆಂಬ ನಂಬಿಕೆಯನ್ನು ನಮ್ಮಲ್ಲಿ ತರಿಸಿದ್ದರೆ ಆಶ್ಚರ್ಯವಲ್ಲ. ಆದರೆ ಕ್ರಾಂತಿಪೂರ್ವದ ಐದು ಶ್ರೇಷ್ಠ ಕತೆಗಳನ್ನು (ಒಟ್ಟು ಹದಿನೇಳರಲ್ಲಿ) ಒಳಗೊಂಡಿರುವ ಈ ಸಂಪುಟ ವಿಶ್ವಕಥಾಕೋಶದ ಆಯ್ಕೆಯ ಪ್ರಾಮಾಣಿಕತೆಯನ್ನು ಮೆರೆಯುತ್ತದೆ. 'ಹೆಜ್ಜೆ ಗುರುತು' ವಿಶ್ವವಿಖ್ಯಾತ ತಲಸ್ತೋಯ್‌ನ ಒಂದು ಕತೆ. ಕೊಬ್ಬಿದ ಧಡೂತಿ ಕರಡಿಯೊಂದರ ಬೇಟೆಯ ಮೈನವಿರೇಳಿಸುವ ಚಿತ್ರಣ. ಜೀವನದ ಯಾವುದೇ ಅನುಭವದ ಆಳ ವಿಸ್ತಾರಗಳೆರಡನ್ನೂ ಒಮ್ಮೆಗೇ ಹಿಡಿದು ಹಿಡಿದು ಚಿತ್ರಿ

ಸುವ ಕಲೆ ತಲ್‌ಸ್ತೋಯ್‌ನಿಗೆ ಸಾಧಿಸಿರುವಂತೆ ಬಹಳಷ್ಟು ಕತೆಗಾರರಿಗೆ ಸಾಧಿಸಿಲ್ಲ. ಗುಂಡಿನೇಟು ಬಿದ್ದೂ ಸಾಯದೆ ರೊಚ್ಚಿನಿಂದ ಪ್ರತೀಕಾರ ಪಡೆಯಲೆತ್ನಿಸುವ ಕರಡಿ ತಾನು ಸಾಯುವ ಮುಂದೆ ಸಾಕಷ್ಟು ಹಾನಿ ಮಾಡಿಯೇ ಪ್ರಾಣ ಕಳೆದುಕೊಳ್ಳುತ್ತದೆ. ತಲ್‌ಸ್ತೋಯನ ನಿರೂಪಣಾ ಸಾಮರ್ಥ್ಯಕ್ಕೊಂದು ಮಾದರಿ:
ಗುಂಡೇನೋ ತಾಗಿತ್ತು, ಆದರೆ ಕರಡಿ ಸಾಯಲಿಲ್ಲ!
ಅದು ತಲೆ ಸೆಟಿಸಿ, ಕಿವಿಗಳನ್ನು ಹಿಂದಕ್ಕೆ ಚಾಚಿ, ತನ್ನ ಕ್ರೂರ ಹಲ್ಲುಗಳನ್ನು ಪ್ರದರ್ಶಿಸುತ್ತ ನನ್ನೆಡೆಗೆ ಬರುತ್ತಿತ್ತು

ನಾನು ಕೋವಿಯನ್ನು ಸೆಳೆದುಕೊಳ್ಳುವಷ್ಟರಲ್ಲಿ ಕರಡಿ ನನ್ನಮೇಲೆರಗಿ ನನ್ನನ್ನು ನೆಲಕ್ಕೆ ಕೆಡವಿ, ತೊತ್ತಳದುಳಿದು ಮುಂದೆ ಹಾದು ಹೋಯಿತು,
ದಸ್ತಯೆವ್‌ಸ್ಕಿಯ 'ಕ್ರಿಸ್‌ಮಸ್ ವೃಕ್ಷ ಮತ್ತು ಮದುವೆ' ಜಗತ್ಪ್ರಸಿದ್ಧ ಕತೆಗಳಲ್ಲೊಂದು. ಅನುವಾದ ಸತ್ವಯುತವಾಗಿ ಬಂದಿದೆ. ವಿಡಂಬನೆ,ಮಾನವೀಯ ಮೌಲ್ಯಗಳ ನೈಜ ಚಿತ್ರಣ.ಅಸಹಾಯಕರಿಗೆ ಅನುಕಂಪ, ಸ್ವಾರ್ಥಸಾಧನೆ.ಇವುಗಳ ನಿರೂಪಣೆಯಲ್ಲಿಯೂ ಹಾಸ್ಯದ ಲೇಪ–ಇವೆಲ್ಲವನ್ನೂ ಒಂದೇ ಕಡೆ ಶೈಲಿಯಲ್ಲಿ ಹಿಡಿದಿಡುವುದು ದಸ್ತಯೆವ್‌ಸ್ಕಿಯ ವಿಶಿಷ್ಟತೆ. 'ಗಣ್ಯ, ಗೌರವಾನ್ವಿತ ಅತಿಥಿ ಯೂಲಿಯಾನ್ ಮಾಸ್ತಕೋವಿಚ್' ಮಕ್ಕಳ ನರ್ತನ ಗೋಷ್ಠಿಯಲ್ಲಿ ಶ್ರೀಮಂತನೊಬ್ಬನ ಪುಟ್ಟ ಮಗಳನ್ನು ಅವಳು ಬೆಳೆದನಂತರ ವಿವಾಹವಾಗುವ ಲೆಕ್ಕಾಚಾರ ಹಾಕುತ್ತಾನೆ.ಮುಂದೆ ಸಫಲನೂ ಆಗುತ್ತಾನೆ. ಆದರೆ ವಿವಾಹದ ದಿನ 'ತನ್ನ ಜೀವನದ ಪ್ರಥಮ ವಸಂತಕ್ಕೆ ಕಾಲಿಡುತ್ತಿದ್ದ ಆ ಅತ್ಯದ್ಭುತ ಲಾವಣ್ಯರಾಶಿ ಅನ್ಯಮನಸ್ಕಳಾಗಿದ್ದಳು' 'ನೆರೆದಿದ್ದ ಜನ' ವಧುವಿನ ಶ್ರೀಮಂತಿಕೆಯ ಬಗ್ಗೆ, ಐದು ಲಕ್ಷ ರೂಬಲ್ ವರದಕ್ಷಿಣೆಯ ಬಗ್ಗೆ, ಮತ್ತು ಮೇಲು ಖರ್ಚಿಗೆ ಇಂತಿಷ್ಟು ಎಂಬುದರ ಬಗ್ಗೆ ಹರಟೆ ಕೊಚ್ಚುತ್ತಿದ್ದರು.

ಆಂತೋನ್ ಚೇಹವ್‌ದ 'ಪಣ'ವೂ ಜನಪ್ರಿಯ ಕತೆಯೇ: ಇಪ್ಪತ್ತು ಲಕ್ಷ ರೂಬಲ್ ಪಣಕ್ಕೆ ಹದಿನೈದು ವರ್ಷ ಏಕಾಕಿತನದ ಶಿಕ್ಷೆ ಅನುಭವಿಸುವ ಪಣ ತೊಟ್ಟ ಹರೆಯದ ವಕೀಲ ಆ ಅವಧಿಯಲ್ಲಿ ವಿಸ್ತಾರವಾದ ವ್ಯಾಸಂಗ, ಚಿಂತನೆಗಳಿಂದ ಜೀವನದ ನಿಜಸ್ವರೂಪವನ್ನರಿತು ಗಡುವು ತೀರುವ ಸ್ವಲ್ಪ ಹೊತ್ತು ಮುಂಚೆಯೇ ಕಾರಾಗೃಹದಿಂದ ಹೊರಬಂದು ಬೇಕೆಂದೇ ನಿಯಮೋಲ್ಲಂಘನೆ, ಮಾಡಿದರೆ ಅವನಿಗೆ ಇಪ್ಪತ್ತು ಲಕ್ಷ ಕೊಡಬೇಕಲ್ಲ ಎಂಬ ಸಂಕಟಕ್ಕೆ ಅವನನ್ನು ಕೊಲ್ಲಲೆಣಿಸಿ ಅಲ್ಲಿಗೆ ಬರುವ ಬ್ಯಾಂಕರ್ ಇವರಿಬ್ಬರ ಮನೋವಿಶ್ಲೇಷಣೆ ಈ ಕತೆಯ ಕೇಂದ್ರವಸ್ತು.

ಮಾನಸಿಕ ಒಳತೋಟಿಯ ಅಧ್ಯಯನದಿಂದ ಸಮಾಜದ ವಿಡಂಬನೆಯ ಕಡೆ ಕತೆಗಾರನ ಒಲವನ್ನು ತಿರುಗಿಸಿದವರಲ್ಲಿ ಗೋರ್ಕಿಯೂ ಒಬ್ಬರು. ಇವರ ಕತೆ 'ಮಕರ್ ಚುದ್ರ'

ದಲ್ಲಿ ಈ ಒಲವಿನ ಹಲವು ಉದಾಹರಣೆಗಳು ಸಿಗುತ್ತವೆ: 'ಮಗು, ನಿನಗೆ ಉಪದೇಶ ಕೊಡಲಿಕ್ಕೆ ಹುಟ್ಟಿದ ಗುರುಗಳಿದ್ದಾರೆ, ಹುಷಾರು! ಕಡಿಮೆ ತಿನ್ನೆಂದು ನಿನಗೆ ಬೋಧಿಸುತ್ತಾ, ತಾನೇ ದಿನಕ್ಕೆ ಹತ್ತು ಸಲ ಕೂಳು ಕತ್ತರಿಸುವ ಗುರುಗಳಿದ್ದಾರ! ಸ್ವಾಭಿಮಾನಿ ಜಿಪ್ಸಿಜೋಡಿ ಲೋಯ್‌ಕಾ ಜೋಬರ್ ಮತ್ತು ರಾದಳ ದುರಂತವನ್ನು ಕಣ್ಣಾರೆ ಕಂಡ ಚಂದ್ರನ ತತ್ವ 'ಮನುಷ್ಯನ ಬಾಳಿನ ಉದ್ದೇಶವೇನು ಅಂತ ಯಾರು ತಾನೆ ಧೈರ್ಯವಾಗಿ ಹೇಳಬಲ್ಲರು ? ಇಂಥ ಪ್ರಶ್ನೆಯನ್ನು ನೀನೇ ಹಾಕಿಕೊಂಡು ಒದ್ದಾಡಬೇಡ. ನಿನಗೆ ಹೇಗೆ ಸರಿಕಾಣುತ್ತದೋ ಹಾಗೆಮಾಡು. ಸದಾ ಅಲೆದಾಡ್ತಿರು, ಸುತ್ತಲಿನ ಪ್ರಪಂಚವನ್ನು ನೋಡು. ಆಗ ಅಸ್ವಸ್ಥತೆ, ಬೇಸರ, ಯಾವುದೂ ನಿನ್ನ ಹತ್ತಿರ ಸುಳಿಯೋದಿಲ್ಲ.'

ಇನ್ನುಳಿದ ಕತೆಗಳಲ್ಲಿ ಆರು ಕ್ರಾಂತಿಯ ಹಿನ್ನೆಲೆಯನ್ನುಳ್ಳವು. ಜೀತದಾಳುಗಳು ಶೋಷಣೆಯ ವಿರುದ್ಧ ಪ್ರತಿಭಟಿಸಿ ನಿಲ್ಲುವ ಚಿತ್ರ ಶೋಲಹೆವ್‌ರ 'ಪ್ರಶಾಂತ ಹುಲ್ಲುಗಾವಲು' ಜೀತದಾಳುಗಳಿಗೆ ಇಲ್ಲಿ ದುರಂತವೇ ಗಟ್ಟಿಯಾದರೂ ಅವರ ಅಂತಿಮ ವಿಜಯ, ಅವರ ಅದಮ್ಯ ಶಕ್ತಿ ಎರಡು ಕಾಲುಗಳನ್ನೂ ಕಳೆದುಕೊಂಡರೂ ಬದುಕುಳಿದು ಸೆಡವು, ಸ್ವಾಭಿಮಾನಗಳನ್ನು ಜ್ವಲಂತ ಇರಿಸಿಕೊಳ್ಳುವ ಅನಿಕೇಯ್ ನಲ್ಲಿ ಸ್ಪಷ್ಟವಾಗಿ ಪ್ರತಿಬಿಂಬಿತ ವಾಗಿದೆ.

ಕಾನ್‌ಸ್ಟಾಂಟಿನ್ ಸಿಮನವ್‌ರ 'ಮೂರನೆಯ ಸಹಾಯಕ' ಪೂರ್ಣವಾಗಿ ಯುದ್ಧ ರಂಗದಲ್ಲೇ ಚಿತ್ರಿತವಾಗಿ ಅದರಲ್ಲಿಯ ಕಾಮಿಸಾರ್ (ಸೇನೆಗೆ ತರಬೇತಿ ನೀಡುವ ಅಧಿಕಾರಿ)ಯ ವ್ಯಕ್ತಿ ಚಿತ್ರಣದ ಮೂಲಕ ನಿತ್ಯಸತ್ಯವೊಂದನ್ನು–ಹೇಡಿಗಳು ಧೀರರಿಗಿಂತ ಬೇಗ ಸಾಯುತ್ತಾರೆ–ಸಫಲವಾಗಿ ಮುಂದಿಡುತ್ತದೆ. ಯುದ್ಧದಲ್ಲಿ ಅಡಿಗಡಿಗೆ ತನ್ನ ಈ ನಂಬಿಕೆಗೆ ಕೊಡಲಿ ಪೆಟ್ಟು ಬೀಳುವಂತೆ ಕಂಡರೂ ಕಾಮಿಸಾರ್ ಕಂಡ ಈ ಸತ್ಯ ಕಡೆಗೂ ರುಜುವಾತಾಗುತ್ತದೆ.

ನಿಯತ್ತಾ ಪರೋವರ "ಗೇಟಿನ ಬಳಿ ಮೂವರು ಹುಡುಗರು" ಯುದ್ಧದ ಬಗ್ಗೆ ಪುಟ್ಟಹುಡುಗರ ನೈಜ ಪ್ರತಿಕ್ರಿಯೆಯ ಪರಿಚಯ, ಜಿಂಗೀಜ್ ಐರ್‌ಮಾತವ್‌ರ 'ಸೈನಿಕನ ಮಗ' ತನಗೆ ಅರಿವು ಮೂಡುವ ಮೊದಲೇ ತಂದೆಯನ್ನು ಕಳಕೊಂಡು ಮುಂದೆ ಯುದ್ಧದ ಸಿನಿಮಾ ಒಂದರಲ್ಲಿ ಶೌರ್ಯದಿಂದ ಕಾದು ಮಡಿಯುವ ನಟನೊಬ್ಬನನ್ನು ತನ್ನ ತಂದೆಯೆಂದು ಗುರುತಿಸಿಕೊಂಡು ಅಭಿಮಾನಪಡುವ ಬಾಲಕನೊಬ್ಬನ ಸುಂದರ ಚಿತ್ರ. ಇನ್ನುಳಿದ ಕತೆಗಳಲ್ಲಿ ವಸ್ತು ಮತ್ತು ತಂತ್ರ ಇವೆರಡರ ಬಳಕೆಯಲ್ಲಿಯೂ ಮೆಚ್ಚಿಸುವ ಕತೆಗಳೆಂದರೆ ಫಜಿಲ್ ಇಸ್ಕಂದರ್ ಅವರ 'ನಿಷಿದ್ಧ ಫಲ' ಮತ್ತು ಮಾರ್ಕೀ ವಿಚೂಸ್ ಅವರ 'ದೇವಶಿಲ್ಪಿ' ಮುಸ್ಲಿಂ ಹುಡುಗ

ನೊಬ್ಬ ತನ್ನ ಅಕ್ಕ ನಿಷಿದ್ಧ ಹಂದಿಮಾಂಸ ತಿಂದುದನ್ನು ಕಂಡು ಧರ್ಮಿಷ್ಠನಾದ ತನ್ನ ತಂದೆಯ ಮುಂದೆ ತನಗೆ ಇನ್ನೊಮ್ಮೆ ಅನ್ಯಾಯವಾಗಿದೆ ಎಂದರಿತಾಗ ಆ ಸುದ್ದಿಯನ್ನು ತಂದೆಗೆ ತಿಳಿಸುತ್ತಾನೆ. ಕ್ಷಣಕಾಲ ಅಪ್ರತಿಭನಾದ ತಂದೆ 'ನನ್ನ ಸ್ವಂತ ಮನೆಯಲ್ಲೇ ಫಿತೂರಿಕಾರರನ್ನು ಕಾಣಬೇಕಾಯಿತೆ' ಎಂದು ಕೂಗಿ ಅವನನ್ನಪ್ಪಳಿಸಿದಾಗ ಜ್ಞಾನೋದಯವಾಗುತ್ತದೆ. ಯಾವುದೇ ಉದಾತ್ತ ತತ್ವ ಸಣ್ಣತನ ದ್ರೋಹಗಳನ್ನು ಸಮರ್ಥಿಸುವುದಿಲ್ಲ. 'ದೇವಶಿಲ್ಪಿ' ಶಿಲ್ಪಿ ಮತ್ತಿಯೋಯಸ್ ದೇವರುಗಳ ಪ್ರತಿಮೆಯನ್ನೆಲ್ಲಾ ತಾನು ಕಂಡ ಮಾನವರಂತೆ ಕಡೆದು ದೇವರ ನಿಜಸ್ವರೂಪವನು ಅರಿತವನ ಕತೆ ಕ್ರಿಸ್ತನನ್ನು ತನ್ನ ಪರಿಚಿತ ರೈತನಂತೆ ಕಡಿದು ಅರ್ಚಕ ಇವನಿಗೆ ತಲೆ ಕೆಟ್ಟಿದೆಯೆಂದು ನಿರ್ಧರಿಸಿದಾಗ ಮತ್ತಿಯೋಯುಸ್‌ನ ಮಾತುಗಳು : 'ಈತ ನಮ್ಮ ಮನೆಗಳನ್ನು ಕಟ್ತಾನೆ, ನಮಗೆ ಆಹಾರ ಒದಗಿಸ್ತಾನೆ, ಬಟ್ಟೆಬರೆ ನೀಡ್ತಾನೆ. ನಾವು ಇವನನ್ನ ದಿನನಿತ್ಯ ಎಲ್ಲೆಲ್ಲಿಯೂ ನೋಡ್ತಾ ಇರ್ತೇವೆ. ಇವನು ನಮ್ಮ ವಿಮೋಚಕನಲ್ಲವೇ ? ಯೇಸ ವಲ್ಲವೇ ? ದೇವರಲ್ಲವೇ ?'

●

ಅರಬಿ ಐರ್‌ಲೆಂಡ್, ವೇಲ್ಸ್, ಸ್ಕಾಟಲೆಂಡಿನ ಕತೆಗಳ ಸಂಕಲನ. ಖ್ಯಾತ ಬರಹಗಾರರಾದ ಜೇಮ್ಸ್ ಜಾಯ್ಸ್, ಡಬ್ಲ್ಯು. ಬಿ. ಯೇಟ್ಸ್, ಸ್ಯಾಮ್ಯುಯೆಲ್ ಬೆಕೆಟ್, ರೈನ ಡೇವೀಸ್, ಡಿಲಾನ್ ಥಾಮಸ್ ವಾಲ್ಟರ್ ಸ್ಕಾಟ್ ಮುಂತಾದವರೆಲ್ಲ ಉಂಟು ಇಲ್ಲಿ. ವಸ್ತುವಿಗಿಂತ ತಾಂತ್ರಿಕ ಸಂಕೀರ್ಣತೆ ಇಲ್ಲಿ ಅನೇಕ ಕತೆಗಳಲ್ಲಿ ಕಂಡುಬರುತ್ತದೆ. ನಾವು ಸಾಮಾನ್ಯವಾಗಿ ಖ್ಯಾತರೆಂದು ಹೆಸರಿಸುವ ಜಾಯ್ಸ್, ಥಾಮಸ್, ಮುಂತಾದವರು ವಿಶ್ವಕಥಾಕೋಶದ ಎಲ್ಲ ಕತೆಗಳ ನಡುವೆ ಅನನುಕೂಲ ಪರಿಸ್ಥಿತಿಯಲ್ಲಿ ಕಂಡುಬರುತ್ತಾರೆ. ಕಥಾತಂತ್ರವನ್ನು ಸಾಮಾನ್ಯ ಓದುಗನ ಅರಿವಿನ ಸಾಧ್ಯತೆಗಿಂತ ತೀರ ದೂರ ಒಯ್ದುರೇನೋ ಎಂಬ ಅನುಮಾನ ಬರುತ್ತದೆ.

ಇಲ್ಲಿಯ ಪರಿಣಾಮಕಾರೀ ಕತೆಗಳಲ್ಲಿ ಜಾರ್ಜ್ ಮೂರ್‌ರ 'ಜೂಲಿಯಾಳ ಶಾಪ' ಒಂದು. ಮೂಢ ನಂಬಿಕೆಗಳಿಂದ ತುಂಬಿ, ವರ ಶಾಪಗಳನ್ನು ನಂಬಿದ್ದ ಸಮಾಜದಲ್ಲಿ ತಾನು ಪ್ರೀತಿಸಿದ ಹುಡುಗನನ್ನು ಮದುವೆಯಾಗಲು ಬಿಡದೆ ಮಗಳನ್ನೇ ಮನೆಯಿಂದಟ್ಟುವ ತಂದೆಯು, ಇಡೀ ಹಳ್ಳಿಯು, ಮೌಢ್ಯದ ಭಯಾನಕ ವರ್ಣನೆ ಈ ಕತೆ.

ಫ್ರಾಂಕ ಓ'ಕಾನರ್‌ರ 'ರಾಷ್ಟ್ರದ ಅತಿಥಿಗಳು' ಮತ್ತು ಲಿಯಾಮ್ ಓ' ಫ್ಲಹರ್ಟಿಯ 'ಹೊಂಚುಸಿಪಾಯಿ' ಯುದ್ಧ ಮಧ್ಯೆ ಅನಿವಾರ್ಯವಾಗಿ ಬರುವ ನಮ್ಮ ಮಾನವೀಯತೆಯನ್ನೆ ಪ್ರಶ್ನಿಸುವ ದುರಂತ ಘಟನೆಗಳು. ನಮ್ಮ ವಶಕ್ಕೊಳಗಾದ ಶತ್ರು ಸೈನಿಕರನ್ನು ಸಕಲ ಗೌರವದಿಂದ ಆದರಿಸುತ್ತಿದ್ದರೂ ಅವರ ಕಡೆಯುವರು

ನಮ್ಮವರನ್ನೇನಾದರೂ ಗುಂಡಿಕ್ಕಿ ಕೊಂದರೆ ಇಲ್ಲಿ ಇವರನ್ನು ನಿಷ್ಕರುಣೆಯಿಂದ ಮುಗಿಸುವ ನೀತಿಯನ್ನು ವಿಡಂಬಿಸುವ ಕತೆ 'ರಾಷ್ಟ್ರದ ಅತಿಥಿಗಳು'. ಒಬ್ಬರಿಗೊಬ್ಬರು 'ಚಮ್' ಎಂದು ಮಾತಾಡುತ್ತಾ, ಸ್ನೇಹಪರ ವಾದವಿವಾದಗಳನ್ನಾಡುತ್ತಿದ್ದವರು ಇದ್ದಕ್ಕಿದ್ದಂತೆ ಅವರಲ್ಲಿ ನಿಶ್ಶಸ್ತ್ರರಾದವರಿಬ್ಬರನ್ನು ಕೊಲ್ಲಲು ಆಜ್ಞೆಯಾದಾಗ ಅವರಲ್ಲಿನ ತುಮುಲ, ಮುಂದೆ ಕರ್ತವ್ಯಪಾಲನೆ ಇವುಗಳ ಮಾರ್ಮಿಕ ಚಿತ್ರ. 'ಹೊಂಚು ಸಿಪಾಯಿ'ಯಲ್ಲಂತೂ ಹಲವಾರು ರೀತಿಯ ತಂತ್ರಗಳನ್ನುಪಯೋಗಿಸಿ ವಿರೋಧ ಪಕ್ಷಗಳ ಇಬ್ಬರು ಒಬ್ಬರನ್ನೊಬ್ಬರು ಕೊಲ್ಲಲೆತ್ನಿಸಿ ಕಡೆಗೆ ಒಬ್ಬ ಸಫಲನಾಗಿ ಮುಂದೆ ಆ ಸತ್ತವನ ಮುಖವನ್ನು ನೋಡಿ ಆತ ತನ್ನ ಒಡಹುಟ್ಟಿದವನೇ ಆಗಿರುವುದನ್ನು ಕಾಣುತ್ತಾನೆ! ಐರ್ಲೆಂಡಿನ ಕ್ರಾಂತಿಯ ಕಾಲದಲ್ಲಿ ಎಲ್ಲೆಲ್ಲೂ ಮರಣ, ಶವಯಾತ್ರೆಗಳೇ ತುಂಬಿದ್ದ ಸಮಯದಲ್ಲಿ ಇದರ ಪರಿಣಾಮ ಮಕ್ಕಳ ಮೇಲೆ ಎಷ್ಟು ಸಹಜವಾಯಿತೆಂದರೆ ಅವರು ಶವಯಾತ್ರೆಯ ಆಟವಾಡುತ್ತಾರೆ—ಡೇನಿಯಲ್ ಕಾರ್ಕೆರಿ ಅವರ 'ಮಕ್ಕಳು' ಕತೆಯಲ್ಲಿ. ಕವಿ ಹ್ಯಾನ್‌ರಾಹನ್ ತನ್ನ ಪ್ರತಿಭೆಯಿಂದ, ಕಾವ್ಯ ಗಾರುಡಿಯಿಂದ ಯುವತಿ ಊನಾಳ ಮನಸ್ಸನ್ನಾಕ್ರಮಿಸಿ ಅವಳನ್ನು ಅವಳ ಜನರಿಂದ ಬೇರ್ಪಡಿಸಿ ಹೊರಡುವಷ್ಟರಲ್ಲಿ ಅಲ್ಲಿಯ ಹೆಂಗಸರು ಅವನ ಕೈಯಲ್ಲಿ ಹುರಿ ಮಾಡಲು ಕೊಟ್ಟು ಮನೆಯಿಂದಾಚೆ ದಬ್ಬುವ ದೃಶ್ಯ ಯೇಟ್ಸ್‌ರ 'ಹುರಿಯ ಹಾಡು'. ಯೇಟ್ಸ್‌ರ ವಿಶಿಷ್ಟ ಪ್ರತಿಭೆ ಸಾಲುಸಾಲಿನಲ್ಲೂ ಎದ್ದು ತೋರುತ್ತದೆ.

ಸಂಕಲನದಲ್ಲಿಯ ವೇಲ್ಸ್ ಕತೆಗಳು ಮೂರು. ಇವುಗಳಲ್ಲಿ ಜಾರ್ಜ್ ಇವರ್ಟ್ ಇವಾನ್ಸರ 'ನಾಯಿ ನಕ್ಕಾಗ' ನಾಯಿಗಳ ಬಗ್ಗೆ ಒಂದು ರೀತಿಯ ಹುಚ್ಚನ್ನೇ ಬೆಳೆಸಿಕೊಂಡಿದ್ದ ವಿಲ್ ಫ್ಲಾಗನ್ಸ್ ಒಂದು ಬೇಟೆ ನಾಯಿಯನ್ನು ಹಿಡಿಯಲು ಪಟ್ಟ ವಿಫಲ ಯತ್ನಗಳ ಚಿತ್ರವಾದರೂ ಇಲ್ಲಿ ನಾಯಿಗಳ ಮೂಲಕ ಮಾನವನನ್ನು ವಿಡಂಬಿಸುವ ಸಫಲ ಪ್ರಯತ್ನ ನಡೆದಿದೆ. ಆ್ಯನಿಯನ್ನು ಬಹಳಷ್ಟು ಹಿಂದೆ ಹಾಕಿ ದೂರ ನಿಂತ ಬೇಟೆ ನಾಯಿ 'ಒಬ್ಬ ಶ್ರೀಮಂತ ಬಂಧುವಿನಂತೆ ಅದರಿಂದ ದೂರವಾಗಿತ್ತು.' ರೈಸ್ ಡೇವೀಸರ 'ಕ್ಯಾತಿಬನ ದೋಣಿ'ಯೂ ವಿಡಂಬನೆಯೇ. ಧರ್ಮಶಾಸ್ತ್ರಗಳ ಬಗ್ಗೆ ಅಪಾರ ನಂಬಿಕೆ ಬೆಳೆಸಿಕೊಂಡು, ತನ್ನ ಅಧ್ಯಯನದ ಪ್ರಕಾರ ಜಗತ್ತಿನ ಪ್ರಳಯ ಆಗಲೇಬೇಕೆಂದು ನಂಬಿ ತಾನೇ ಮತ್ತೊಬ್ಬ ನೋವಾನೆಂದು ಆರಿಸಲ್ಪಟ್ಟಿರುವೆನೆಂಬ ವಿಶ್ವಾಸದಿಂದ ದೋಣಿಯೊಂದನ್ನು ಕೊಂಡು ಅದರಲ್ಲಿ ಪ್ರಾಣಿಗಳನ್ನೂ ತುಂಬುವ ಕ್ಯಾತಿಬ್ ಪ್ರಳಯವಾಗದಿದ್ದಾಗ ಕುಸಿಯುತ್ತಾನೆ. ಆದರೆ ಮಾರ್ಗಿಯೆಂಡ್ ತಾಳ್ಮೆ ಮತ್ತು ಅನುಕಂಪ ಮಿಶ್ರಿತ ಸೇವೆಯಿಂದ ಅವನನ್ನು ಸಾಧಾರಣ ಮಾನವನನ್ನಾಗಿ ಮಾಡುವುದರಲ್ಲಿ ಯಶಸ್ವಿಯಾಗುತ್ತಾಳೆ.

ಸಂಕಲನದಲ್ಲಿಯ ಸ್ಕಾಟ್‌ಲೆಂಡಿನ ಐದೂ ಕತೆಗಳು ಮಾರ್ಮಿಕವಾದವು. ವಾಲ್ಟರ್ ಸ್ಕಾಟ್‌ನ 'ಜಾನೆಟ್ ಡಾಲ್ರಿಂಪಲ್‌ಳ ಮದುವೆಯ ಕಥೆ' ಪ್ರಚಲಿತ ದಂತ ಕಥೆಯೊಂದರ ಆಧಾರದ ಮೇಲೆ ರಚಿಸಿದ್ದು. ಡಾಲ್ರಿಂಪಲ್ ತಾನೊಲಿದವನನ್ನು ಮದುವೆಯಾಗಲಾರದೆ ತನ್ನ ತಂದೆತಾಯಿಗಳ ಬಯಕೆಯಂತೆ ಮತ್ತೊಬ್ಬನನ್ನು ವಿವಾಹವಾಗಿ ಆ ರಾತ್ರಿ ಅವನನ್ನೂ ಕೊಂದು ತಾನೂ ಕೊಂದುಕೊಳ್ಳುತ್ತಾಳೆ. ಲೂಯಿ ಗ್ರಾಸಿಕ್-ಗಿಬ್ಬನ್‌ರ 'ಮಣ್ಣು' ಸಂಚಾರೀ ಬುಡಕಟ್ಟಿನ, ಸಾಮಾನ್ಯವಾಗಿ ಗೌರವಾನ್ವಿತರಲ್ಲದ ಗಾಲ್ವರಲ್ಲೊಬ್ಬ ಕುಲೀನ ಕನ್ಯೆಯನ್ನು ಮದುವೆಯಾಗಿ ಒಂದೆಡೆ ಸ್ಥಿರವಾಗಿ ನಿಲ್ಲುವ ಪ್ರಯತ್ನ ಮಾಡಿ, ತನ್ನ ಸರ್ವಶಕ್ತಿಯನ್ನೂ ಅದಕ್ಕಾಗಿ ಮುಡಿಪಾಗಿಟ್ಟು ಕೊನೆಗೆ ವಿಫಲನಾಗುವ ಕತೆ, ನೀಲ್ ಎಮ್. ಗನ್‌ರ 'ಕಡಲು' ಕಡಲಿಗೆ ಹೋಗಿದ್ದ ಗಂಡ ಮಗ ಅಲ್ಲಿ ಎಂದಿಲ್ಲದಂತ ಬಿರುಗಾಳಿಗೆ ಸಿಕ್ಕಿ ಮನೆಯಲ್ಲಿ ಹೆಂಡತಿ, ಸಣ್ಣಮಗನ ಮೇಲೆ ಇದರಿಂದಾಗುವ ಆತಂಕ, ವಿಹ್ವಲಗಳ ಸೂಕ್ಷ್ಮ ಚಿತ್ರ. ಕಡಲಿನಿಂದ ವೀರರಂತೆ ಉಳಿದು ಬರುವ ಅವರಿಬ್ಬರೂ ಕಡಲಿನ ಜೊತೆ ಹೋರಾಡುವುದನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸಲಾಗಿದೆ.

ಫ್ರೆಡ್ ಉರ್ಕ್‌ಹಾರ್ಟರ 'ಮ್ಯಾಟಿನಿ' ಈ ಸಂಕಲನದ ಕೊನೆಯ ಕತೆ. ಹಾಗೂ ಹಾಸ್ಯಪ್ರಧಾನವಾಗುಳ್ಳ ಒಂದೇ ಕತೆ. ಅರ್ಧ ಟಿಕೇಟಿಗೆ ಅರ್ಹತೆ ಪಡೆಯಲು ಟ್ರೌಸರ್ ತೆಗೆದು ಚಡ್ಡಿಯಲ್ಲಿ ಸಿನೇಮಾಕ್ಕೆ ಹೋಗಿ, ತನ್ನ ತಮ್ಮ ಎರಡಕ್ಕೆ ಹೋಗಬೇಕಾದಾಗ ಚಿತ್ರದಲ್ಲಿ ತನ್ನ ಹೀರೋವನ್ನು ಕಳಕೊಳ್ಳಲಾಗದೆ ಅವನನ್ನು ಒಳಗೇ ಇಟ್ಟುದರ ಫಲವಾಗಿ ಮುಂದೆ ಸ್ಟೇಜ್ ಮೇಲೆ ಬಹುಮಾನಕ್ಕಾಗಿ ಹೋಗಬೇಕಾದಾಗ ಈ ತಮ್ಮ ಅಲ್ಲೇ ಮಾಡಿಕೊಂಡು ಬಿಡುತ್ತಾನೆ !

●

ಜೆಕೋಸ್ಲೋವಾಕಿಯ, ಪೋಲಂಡ್ ಕತೆಗಳುಳ್ಳ 'ನೆತ್ತರು ದೆವ್ವ' ೧೩ ಕತೆಗಳನ್ನೊಳಗೊಂಡಿದೆ. ಇಲ್ಲಿಯೂ ಯುದ್ಧದ ಹಿನ್ನೆಲೆಯ ಕತೆಗಳು ಸಾಕಷ್ಟಿದ್ದರೂ ಇತರ ಕತೆಗಳಲ್ಲಿಯಂತೆ ಅಲ್ಲಿಯೂ ವೈವಿಧ್ಯತೆಯೊಂದಿಗೆ ಮಾನವ ಜೀವನದ ವಿವಿಧ ಮುಖಗಳ ಪರಿಚಯವಿದೆ. 'ಮಹಾಯುದ್ಧದಲ್ಲಿ ಶ್ವೇಕ್‌ನ ಮಧ್ಯ ಪ್ರವೇಶ' (ಯಾರೊಸ್ಲಾವ್ ಹಾಶೆಕ್) ಇಂತಹ ಒಂದು ಕತೆ. ಶ್ವೇಕ್ ಕೆಲವು ವರ್ಷ ಸೈನ್ಯದಲ್ಲಿದ್ದು ಜನ್ಮತಃ ಮಾನಸಿಕ ದೌರ್ಬಲ್ಯದಿಂದ ನರಳುತ್ತಿರುವನೆಂಬ ವೈದ್ಯಮಂಡಲಿ ಸರ್ಟಿಫಿಕೇಟು ಕೊಟ್ಟಮೇಲೆ ಹೊರಗೆ ಬಂದಿದ್ದ. ಆದರೆ ಮಹಾಯುದ್ಧಕ್ಕೆ ನಾಂದಿಯಾದ ರಾಜಕುಮಾರ ಫರ್ಡಿನೆಂಡನ ಕೊಲೆಯಾದಾಗ ತನ್ನ ನಾಲಿಗೆ ಹರಿಬಿಟ್ಟು ರಹಸ್ಯ ಪೋಲೀಸ್ ಅಧಿಕಾರಿಯೊಬ್ಬನ ಬಳಿ ಮನಬಂದಂತೆ ಬಡಬಡಿಸಿ ದೇಶದ್ರೋಹದ ಅಪರಾಧವನ್ನು ಹೊತ್ತು ಬಂದಿಯಾಗುತ್ತಾನೆ. ಯಾನ್ ದರದಾರ 'ನೀರವ ತಡೆ

DEVU PATTAR
OUTTIPETH,
SHAHAPUR-585223

ಗಟ್ಟಿ' ನಿಶ್ಚಿತ ಸಾವಿನ ಸ್ಥಿತಿಯಲ್ಲಿಯೂ ದೇಶಪ್ರೇಮದಿಂದ ಪ್ರಾಣ ತ್ಯಾಗ ಮಾಡಲು ಸನ್ನದ್ಧ ಸಿಪಾಯಿಗಳ ಪರಿಚಯ. ತಾವು ಸಾಯುತ್ತಿದ್ದರೂ ಹತಾಶರಾಗದೆ 'ದಾಟಿ ಹೋಗಲು ಬಿಡೆವು' ಎಂದು ಶತ್ರುಗಳ ಕಣ್ಣಿಗೆ ಬೀಳುವಂತೆ ಬರೆಯುವ ಇವರ ನೈತಿಕ ಸ್ಥೈರ್ಯ ಅಂದಿನ ಜರ್ಮನಿಯ ವಿರುದ್ಧ ಎಲ್ಲ ಸೈನಿಕರ ಮನಸ್ಥಿತಿಯನ್ನು ರೂಪಿಸುವಂಥದು. ಆದರೆ ಯುದ್ಧಸಾಹಿತ್ಯದಲ್ಲೇ ಅತ್ಯುತ್ತಮವೆನ್ನಬಹುದಾದ ಕತೆ ಜೂಲಿಯಸ್ ಫೂಚಿಕ್‌ರ 'ಆರು ಹುಡುಗರ ಕಥೆ'. ಎಲ್ಲುಯೆಟ್‌ನ ಆರು ಮಕ್ಕಳು ಗೋಲಿಯಾಡುತ್ತಿದ್ದಾಗ ಶತ್ರುವಿನ ಬಾಂಬ ಅವರ ಮೇಲೆ ಸರಿಯಾಗಿ ಬಿದ್ದು ಅವರೆಲ್ಲರೂ ಛಿದ್ರ ಛಿದ್ರರಾಗುತ್ತಾರೆ. ಅದರ ಚಿತ್ರ ಪ್ರಕಟಣೆಯಾದಾಗ ಪ್ರಾಗ್‌ನಲ್ಲಿ ಆರು ಬಾಲಕರು ಅದನ್ನು ಕಂಡು ತತ್ತರಿಸುತ್ತಾರೆ. ಆಗ ಅವರ ದೃಷ್ಟಿಯಲ್ಲಿ 'ಶತ್ರು ಎಂದರೆ ಒಬ್ಬನೇ-ಭಯಂಕರನಾದ ಶತ್ರು, ಎಲ್ಲುಗ್ಯೆಟ್‌ನ ಮಕ್ಕಳನ್ನು ಕೊಲೆ ಮಾಡಿದ್ದ ಶತ್ರು.' ಆ ಮಕ್ಕಳಿಗೆ ಸಹಾಯ ಮಾಡಿ ಎಂಬ ಮನವಿ-ಪತ್ರಿಕೆಯಲ್ಲಿ ತಕ್ಷಣ ಕಾರ್ಯಸನ್ನದ್ಧರಾಗುತ್ತಾರೆ, ಈ ಆರು ಹುಡುಗರು. ಯಾವ ರಾಜಕೀಯ ಉನ್ನತ ಸಮಾಲೋಚನೆಗೂ ಕಡಿಮೆಯಲ್ಲ ಇವರ ಸಮಾಲೋಚನೆ. ತಮ್ಮ ಅತ್ಯಮೌಲ್ಯ ವಸ್ತುಗಳನ್ನೆಲ್ಲಾ ಮಾರಿ ಹಣವನ್ನು ಸಹಾಯಕ್ಕೆ ಕಳಿಸಲು ನಿರ್ಧರಿಸುತ್ತಾರೆ ಸಂಪೂರ್ಣ ತ್ಯಾಗ ಮನೋಭಾವದಿಂದ ತಮ್ಮ ಪ್ರಾಣದಷ್ಟೇ ಮಿಗಿಲಾದ ವಸ್ತುಗಳನ್ನು ಹೊರತೆಗೆಯುತ್ತಾರೆ–ಒಂದು ಸಣ್ಣ ಚಾಕು, ಜಜ್ಜಿಹೋದ ಬೂಟ್ ಪಾಲೀಷ್ ಡಬ್ಬಿ, ಆಟದ ಪೀಪಿ ಇತ್ಯಾದಿ ! ಊರಿನಲ್ಲೇ ಹಣವಂತ ಯೆಹೂದ್ಯ ಮುದುಕ ಇಸಾಕನ ಕಡೆ ಈ ಹರಕು ಚಿಂದಿಯ ಮಕ್ಕಳು ಹೋಗುತ್ತಾರೆ. ಆ ಸಾಮಾನುಗಳನ್ನು ಕಂಡ ಅವನು ಅವರನ್ನು ಗದರಿಸಿ ತೊಲಗಲು ಹೇಳುತ್ತಾನೆ. ಆದರೆ ಅವರು ವಿಚಲಿತರಾಗದೆ ತಮ್ಮ ನಿರ್ಧಾರವನ್ನು ತಿಳಿಸಿದಾಗ ಅವರ ಸಾಮಾನುಗಳ ಮೌಲ್ಯವನ್ನು ಅದ್ಭುತವಾಗಿ ವರ್ಣಿಸಿ ಚಿಲ್ಲರೆ ನಾಣ್ಯಗಳಲ್ಲಿ ಇಪ್ಪತ್ತು ಕ್ರೌನಗಳನ್ನು ಅವರಿಗೆ ನೀಡುತ್ತಾನೆ !

ಕಾರ್ಲ್‌ಚಾಪೆಕರ 'ಆರ್ಕಿಮಿಡೀಸನ ಮರಣ' ಆ ಗ್ರೀಕ್ ಗಣಿತಶಾಸ್ತ್ರಜ್ಞನ ಮರಣದ ಬಗ್ಗೆ ಪ್ರಚಲಿತ ಕತೆಯನ್ನು ಅಲ್ಲಗಳೆದು ಸತ್ಯನಿರೂಪಣೆ ಯತ್ನ ಪ್ರಯತ್ನಿಸಿರುವುದರಿಂದ ಕುತೂಹಲಕಾರಿ. ಯಾನ್‌ನೆರೂದಾರ 'ನೆತ್ತರು ದೆವ್ವ' ಅತೀಂದ್ರಿಯ ಶಕ್ತಿಯನ್ನುಳ್ಳ ಚಿತ್ರಗಾರನೊಬ್ಬ ಸಾವನ್ನು ಸಮೀಪಿಸುತ್ತಿರುವವರ ಚಿತ್ರಗಳನ್ನಷ್ಟೇ ತೆಗೆದು ನೆತ್ತರುದೆವ್ವವೆನಿಸಿಕೊಂಡು ಹೋದೆಡೆಯಲ್ಲೆಲ್ಲಾ ದ್ವೇಷಿಸಲ್ಪಡುವ ಚಿತ್ರ. ಜೆಕೊಸ್ಲೋವಾಕಿಯ ಕಥೆಗಳಲ್ಲಿ ಫ್ರಾನ್ಜ್ ಕಾಫ್ಕರ 'ಉಪವಾಸ ಕಲಾಕಾರ' ಪ್ರಸಿದ್ಧಿ ಪಡೆದಿರುವ ಕಥೆ. ಅಸ್ತಿತ್ವವಾದದ ಹಿನ್ನೆಲೆಯಲ್ಲಿ ರಚಿತವಾಗಿರುವ ಈ ಕತೆಯ ಕೇಂದ್ರ ವ್ಯಕ್ತಿ ಒಬ್ಬ ಉಪವಾಸ ಕಲಾಕಾರ. ತನ್ನ ಬಗ್ಗೆ, ತನ್ನ ಕಲೆಯ ಬಗ್ಗೆ

ಅಪಾರ ಹೆಮ್ಮೆಯಿಂದ್ದ ಈತ, ಇತರರನ್ನು ತನ್ನನ್ನು ಲಕ್ಷಿಸದಿದ್ದಕ್ಕಾಗಿ ಉಪೇಕ್ಷಿಸಿದ ಈತ ಕೊನೆಗೆ ಅರಿಯುವುದು ತಾನು ಪ್ರಾಣಿಗಳಿಗೂ ಕಡೆ ಎಂಬ ಸತ್ಯವನ್ನು. ಅವನು ಅನಿವಾರ್ಯವಾಗಿ ತನ್ನ ಎಲ್ಲಾ ದಾಖಲೆಗಳನ್ನೂ ಮುರಿದಾಗ ಯಾರೂ ಅವನನ್ನು ಹೊಗಳುವುದಿಲ್ಲವಷ್ಟೇ ಅಲ್ಲ. ಬೋರ್ಡಿನಲ್ಲಿದ್ದ ಅಂಕಿ ಅಂಶಗಳ ಬಗ್ಗೆ ಹಾಸ್ಯ ಮಾಡುತ್ತಾ 'ಸುಲಿಗೆ, ಮೋಸ, ದಗಾ' ಎಂದು ಹೇಳುತ್ತಿದ್ದರು.

ಪೋಲೆಂಡಿನ ಐದು ಕತೆಗಳು ಇಲ್ಲಿವೆ. ಇಲ್ಲಿಯ ಆಡಮ್ ಸೈಮನ್‌ಸ್ಕಿ ಅವರ 'ಒಂದು ಚಿಟಿಕೆ ಉಪ್ಪು' ರಾಜಕೀಯ ಕೈದಿಗಳನ್ನು ನೋಡಿಕೊಳ್ಳುತ್ತಿದ್ದವರ ಅಮಾನವೀಯತೆಯ ಮಿತಿಯನ್ನು ಚಿತ್ರಿಸುತ್ತದೆ. ಸೈಬೀರಿಯಕ್ಕಿಂತ ನರಕ ಸದೃಶವಾದ ಜಾಸ್ಜಿವರ್‌ಕ್ಸ ಪಟ್ಟಣದ ವರ್ಣನೆ. ಹಾಗೆ ನೋಡಿದರೆ ಆ ಪಟ್ಟಣವೇ ಇಲ್ಲ ಭೂಪಟದಲ್ಲೇ. ಇಂತಹ ಕಡೆಯಿಂದ ಒಬ್ಬ ಬರುತ್ತಿದ್ದಾನೆಂದರೆ ಸೈಬೀರಿಯದ ಕೈದಿಗಳು ತಮ್ಮಲ್ಲಿದ್ದಷ್ಟರಿಂದಲೇ ಭವ್ಯ ಔತಣವೊಂದನ್ನು ಏರ್ಪಡಿಸುತ್ತಾರೆ. ಸಂತೋಷದಿಂದ ಹಿಗ್ಗಿದ ಅವನಿಗೆ ಒಂದೇಒಂದು ತುತ್ತನ್ನೂ ಅಗಿಯಲಾರದಾಗ ನಿಜ ಹೊರಬೀಳುತ್ತದೆ–ಮೂರು ಅಖಂಡ ವರ್ಷ ಕಾಲ ಅವನು ಉಪ್ಪಿನ ರುಚಿಯನ್ನೇ ನೋಡಿರಲಿಲ್ಲ! ಹೆನ್ರಿಕ್ ಸಿಯೆಂಕೆವಿಚ್ ಅವರ 'ಆಸ್ಪಿನ್‌ವಾಲ್ ದೀಪಸ್ತಂಭದ ಕಾವಲುಗಾರ' ರಾಷ್ಟ್ರಪ್ರೇಮದ ಮತ್ತೊಂದು ಮುಖವನ್ನು ಚಿತ್ರಿಸುತ್ತದೆ. ದೇಶ ವಿದೇಶಗಳಲ್ಲಿ ಬಹಳ ಕಾಲ ಅಲೆದಾಡಿ ಮನಶ್ಶಾಂತಿಗಾಗಿ, ಕೆಲಸಕ್ಕಾಗಿ ತಹತಹಿಸುತ್ತಿರುವ ಪೋಲೆಂಡಿನ ಮುದುಕನೊಬ್ಬ ಕೊನೆಗೆ ಪನಾಮಾ ಕಾಲುವೆಯ ಬಳಿಯ ದ್ವೀಪವೊಂದರ ದ್ವೀಪಸ್ತಂಭದ ಮೇಲ್ವಿಚಾರಕನಾಗುತ್ತಾನೆ. ಒಂಟಿ ಸನ್ಯಾಸಿಯ ಬದುಕಾದರೂ ತನ್ನ ನೇಮ ನಿಷ್ಠೆಯಿಂದ ಅಲ್ಲಿಗೆ ಬರುವ ಕೆಲವೇ ಜನರ ಗೌರವಾದರಗಳಿಗೆ ಪಾತ್ರನಾಗುತ್ತಾನೆ. ಒಮ್ಮೆ ನ್ಯೂಯಾರ್ಕಿನಲ್ಲಿ ಸ್ಥಾಪಿತವಾದ ಪೋಲೀಷ್ ಕೂಟದ ಬಗ್ಗೆ ಓದಿ 'ಅನಗತ್ಯ ಎನಿಸಿದ್ದ ತನ್ನ ಅರ್ಧ ತಿಂಗಳ ಸಂಬಳವನ್ನು ಅಲ್ಲಿಗೆ ಕಳಿಸುತ್ತಾನೆ. ಆ ಸಂಸ್ಥೆ ಕೃತಜ್ಞತಾಪೂರ್ವಕ ಪೋಲೀಷ್ ಪುಸ್ತಕಗಳನ್ನು ಕಳಿಸಿಕೊಡುತ್ತದೆ. ದೇಶಪ್ರೇಮದ ಕವಿತೆಗಳಿದ್ದ ಅವನ್ನು ಓದುತ್ತ ಭಾವನಾಪರವಶನಾಗಿ ತನ್ನ ದ್ವೀಪಸ್ತಂಭದ ಕರ್ತವ್ಯವನ್ನು ಮರೆಯುತ್ತಾನೆ. ಕೆಲಸವನ್ನು ಕಳೆದುಕೊಳ್ಳುತ್ತಾನೆ! ಗಾಬ್ರಿಯೆಲಾ ಜಪೋಲ್‌ಸ್ಕರ 'ಅವಳ ಮುದ್ದುಮರಿ' ಮುಗ್ಧ ಹೆಣ್ಣೊಬ್ಬಳನ್ನು ಶೋಷಿಸುವ ಅವಳ ಪತಿ–ಸಮಾಜದ ಒಂದು ಕ್ರೂರ ಮುಖದ ವಿಶದ ಪರಿಚಯ.

●

ಯುಗೊಸ್ಲಾವಿಯ, ಅಲ್ಜೇನಿಯ ಮತ್ತು ಬಲ್ಗೇರಿಯ ಕತೆಗಳ ಸಂಪುಟ ಬಾವಿಕಟ್ಟೆಯ ಬಳಿ. 'ಬಾವಿಕಟ್ಟೆಯ ಬಳಿ' ಹೃದಯ ಪರಿವರ್ತನೆಯನ್ನು ಕೇಂದ್ರ

ವಸ್ತುಗಳುಳ್ಳ ಒಂದು ಉತ್ತಮ ಕತೆ. ಶ್ರೀಮಂತ ಕುಟುಂಬವೊಂದರಿಂದ ಅವಿಭಕ್ತ ಕುಟುಂಬವೊಂದನ್ನು ಸೇರಿದ ಸೊಸೆ ಅನೋಕಾಳ ಉದ್ಧಟ ಪ್ರವೃತ್ತಿಯನ್ನು, ಅದರಿಂದ ಎಲ್ಲರಲ್ಲಿ ಉಂಟಾದ ಜಿಗುಪ್ಸೆಯನ್ನು ಪರಿವರ್ತಿಸಿ ಎಲ್ಲರೂ ಸ್ನೇಹಪರರಾಗಿ ಬಾಳುವಂತೆ ಮಾಡುವ ಅಜ್ಜನ ಅನುಭವೀ ತಂತ್ರ ಮನಮುಟ್ಟುವಂತೆ ಬಂದಿದೆ. ಯುಗೊಸ್ಲಾವಿಯ ಕತೆಗಳಲ್ಲಿ ಮುಖ್ಯವಾಗಿ ಗಮನ ಸೆಳೆಯುವುದು. ಭಾಷೆಯ ಪರಿಪೂರ್ಣ ಉಪಯೋಗ. ವಯಸ್ಸಿಗೆ ತಕ್ಕ ಸಂದರ್ಭಕ್ಕೆ ಉಪಮೆಗಳೂ ಅಭಿಪ್ರಾಯಗಳೂ ಬಹಳ ಸ್ಪಷ್ಟವಾಗಿ ಬರುತ್ತವೆ. ಐವಾನ್ ಚನಕಾರ್ ಅವರ 'ಮಕ್ಕಳು ಮತ್ತು ದೊಡ್ಡವರು' ಕತೆಯಲ್ಲಿ ಏಳು ವರ್ಷದ ಹುಡುಗ ಮಾಟಿಚಿ ಹೇಳುತ್ತಾನೆ: 'ಸರಿ, ಯುದ್ಧ ಹೀಗಿರ್ತದೆ. ಜನರು ತಮ್ಮ ಕತ್ತಿಗಳಿಂದ ಒಬ್ಬರನ್ನೊಬ್ಬರು ತಿವೀತಾರೆ. ಒಬ್ಬರನ್ನೊಬ್ಬರು ಕತ್ತರಿಸ್ತಾರೆ. ಗುಂಡಿಕ್ತಾರೆ. ನೀನು ಯುದ್ಧದಲ್ಲಿ ತಿವಿದಷ್ಟೂ, ಕತ್ತರಿಸಿದಷ್ಟೂ ಹೆಚ್ಚು ಪರಾಕ್ರಮಿ. ಯಾರೂ ಏನೂ ಬೈಯೋದಿಲ್ಲ. ಯಾಕೆಂದರೆ, ಯುದ್ಧದಲ್ಲಿ ಹಾಗೆ ಮಾಡೋದೇ ಸರಿ...ಅದು ಯುದ್ಧ.' ಯುದ್ಧದ ಬಗ್ಗೆಯೇ ಇರುವ ಮತ್ತೊಂದು ಕತೆ–ಅದರ ಶೀರ್ಷಿಕೆಯೇ 'ಯುದ್ಧ.' ವಿಂಟೊವನ್ ಜಲಾಸ್‌ರದು. ಈ ಸಂಕಲನದ ಅತ್ಯುತ್ತಮ ಕತೆ. ಯುದ್ಧದ ಅನುಭವಗಳ ವಿವಿಧ ಸ್ತರಗಳ ಸೂಕ್ಷ್ಮ ವಿಶ್ಲೇಷಣೆ. ಕತೆ ಹೇಳುವ ರೀತಿಯೂ ವಿಶಿಷ್ಟ. ತಾವು ಹರಿದು ಹೋಗುವ ಎಲ್ಲ ದೇಶಗಳನ್ನೂ ಬೇರೆ ಬೇರೆ ಕಾಲದಲ್ಲಿ ಪ್ರತ್ಯೇಕಿಸುವ ಅಥವಾ ಒಂದು ಗೂಡಿಸುವ, ಜೀವನ ಪ್ರವಾಹವನ್ನು ಹೊತ್ತು ಸಾಗುವ, ನದಿಗಳ ಹಿನ್ನೆಲೆಯಲ್ಲಿ 'ಬುದ್ಧಿ ಇಲ್ಲದ' ಯುದ್ಧದ ವಿವೇಚನೆ ಇದೆ: 'ಆ ಮಹಾನದಿಯ ಪಾತ್ರದ ಇಕ್ಕೆಲಗಳಲ್ಲೂ ಯುದ್ಧರಂಗ ಹರಡಿಕೊಂಡಿತ್ತು. ಆದರೆ ನದಿಗೆ ತನ್ನ ದಡಗಳಲ್ಲಿ ಯುದ್ಧ ನಡೆದರೂ ಒಂದೇ ನಡೆಯದಿದ್ದರೂ ಒಂದೇ. ಅದು ತನ್ನ ಪಾಡಿಗೆ ತಾನು ಹರಿಯುತ್ತಲೇ ಇರುತ್ತದೆ. ಯುದ್ಧದ ಉದ್ದೇಶವಾದರೂ ಏನು? ಮನುಷ್ಯರ ಮೇಲೆ ಮತ್ತು ಆಸ್ತಿಪಾಸ್ತಿಗಳ ಮೇಲೆ ಒಡೆತನ ಸ್ಥಾಪಿಸಲೆಂದೇ ಯುದ್ಧ ನಡೆಯುತ್ತದೆ. ಎರಡೂ ಕಡೆಯವರು ಶತ್ರು ಪಕ್ಷಕ್ಕೆ ಉಪಯುಕ್ತವಾಗಬಹುದಾದ ಎಲ್ಲ ವಸ್ತುಗಳನ್ನೂ ನಾಶ ಮಾಡಲು ಪ್ರಯತ್ನಿಸುತ್ತಾರೆ. ಮನುಷ್ಯನ ಬುದ್ಧಿ ಅಥವಾ ಕರಕುಶಲತೆಯು ಸೃಷ್ಟಿಸಿದ ಎಲ್ಲ ವಸ್ತುಗಳಿಗೂ ಒಂದಲ್ಲ ಒಂದು ಪ್ರಯೋಜನ ಇದ್ದೇ ಇರುತ್ತದೆ. ಆದ್ದರಿಂದ ಅವೆಲ್ಲವನ್ನು ನಾಶ ಮಾಡುವುದೇ ಶತ್ರು ಸೈನ್ಯದ ಉದ್ದೇಶವಾಗುತ್ತದೆ. ಯುದ್ಧಕ್ಕೆ ಬುದ್ಧಿ ಇಲ್ಲ.' ಈ ಕತೆಯಂತೆಯೇ ಇವೋ ಆಂದ್ರಿಚ್‌ರ 'ಮುಸ್ತಫಾ ಮದಜರ್' ಕ್ರೌರ್ಯದ ಎಲ್ಲ ಸ್ತರಗಳ ಎಳೆ ಎಳೆಯಾದ ವಿಶ್ಲೇಷಣೆ. ಕತೆ ಸರಿದಂತೆ ಕ್ರೌರ್ಯದ ಭಯಾನಕ ರೂಪ ನಮ್ಮ ಕಣ್ಣ ಮುಂದೆ ಸ್ಪಷ್ಟವಾಗುತ್ತಾ ಬಂದು ಕತೆ ಮುಗಿಯುವ ವೇಳೆಗೆ ಓದುಗನ ಮೇಲೆ ಅಗಾಧ

ಪರಿಣಾಮ ಬೀರುತ್ತದೆ. ಸಿ. ಮಿಂಡೆರೋವಿತ್ಸ್‌ರ 'ಚಲನಚಿತ್ರ–ಮೂರು ರೀಲು ಗಳಲ್ಲಿ' ಹೊಸ ತಂತ್ರವೊಂದನ್ನು ಬಳಸಿಕೊಂಡು ಬಡವರ ಪಾಲಿಗೆ ಸುಖಾಂತ್ಯವಾಗು ವುದು ಬರಿ ಕನಸುಗಳಷ್ಟೇ, ಜೀವನದಲ್ಲಿ ಅವರಿಗೆ ದುರಂತವೇ ಕಟ್ಟಿಟ್ಟದ್ದು ಎಂಬ ಕಟುಸತ್ಯವನ್ನು ಸಿನಿಮಾ ನೋಡಲಿಚ್ಛಿಸುವ ಇಬ್ಬರು ಬಾಲಕರ ಅನುಭವ ಮೂಲಕ ತೋರಿಸುತ್ತದೆ.

ಆಲ್ಬೇನಿಯ ಕತೆಗಳಲ್ಲಿಯ ಅಲೆಕ್ಸ್ ಜಾತ್ಸಿ ಅವರ 'ಭಾವಣಿ ಕಿತ್ತರು' ಶೋಷಣೆಯ ಕ್ರೂರ ಮುಖವನ್ನು ಬಿಂಬಿಸುತ್ತದೆ. ತಮ್ಮ ಸೇವಕರು ತಮ್ಮ ಅಪ್ಪಣೆಯಂತೆ ಗುಡಿಸಲು ತೆರವು ಮಾಡಿ ಹೋಗಲು ನಿರಾಕರಿಸಿದಾಗ ಅವರ ಛಾವಣಿಯನ್ನೇ ಕಿತ್ತು ಬದುಕನ್ನು ಅಸಹನೀಯವನ್ನಾಗಿ ಮಾಡಿ ಅವರು ಹೋಗುವಂತೆ ಮಾಡುವ ಶೋಷ ಕರ ಚಿತ್ರ. ಹತ್ತರಲ್ಲಿ ಹನ್ನೊಂದಾಗಬಹುದಾದ ಈ ಕತೆಗೆ ಬೆಲೆ ಬಂದಿರುವುದು ಇದು ಅಲೆಕ್ಸ್ ಚಾತ್ಸಿಯವರ ಆತ್ಮವೃತ್ತವೆಂಬುದರಿಂದ. ಆದರೆ ಫತ್‌ಮಿರ್ ಗಜಾತರ 'ಅಜ್ಞಾತ ಯೋಧ' ಯಾರಿಗೂ ಪರಿಚಯವಿರದಿದ್ದ ಅಜ್ಞಾತ ಯುವಕ ಯೋಧ ಯುದ್ಧದಲ್ಲಿ ಐದು ಮಂದಿಯನ್ನು ಏಕಾಂಗಿಯಾಗಿ ಹೊಡೆದು ಸತ್ತಾಗ ಅವನಿಗೆ ಕಣ್ಣೀರಿಡುವ ತಾಯಿಯೊಬ್ಬಳು ಸಿಗುವ ಚಿತ್ರದಲ್ಲಿ ಮಾನವೀಯ ತುಡಿತದ ಪರಾಕಾಷ್ಠೆಯ ಪರಿಚಯವೇ ಇದೆ ನಾಸಿಲೆರಾರ 'ಸಂಗಾತಿಗಳು' ಯಾವ ಪೂರ್ವ ಪರಿಚಯವೂ ಇಲ್ಲದ ಕಷ್ಟದಲ್ಲಿ ಸಹಭಾಗಿಗಳಾಗಿ ತೋರುವ ಸ್ನೇಹ, ಪ್ರೇಮದ ಸುಂದರ ಕತೆ. ಪರ್ವತಾರೋಹಿ ತಂಡದವರು ವೈರ್‌ಲೆಸ್ ಮೂಲಕ ಸಹಾಯಕ್ಕೆ ಕರೆದಾಗ ಸಮುದ್ರದಲ್ಲಿರುವ ನೌಕೆಯೊಂದು ಅದನ್ನು ಪಡೆದು ಸಂಕೇತಗಳನ್ನು ಯಾವ ರೀತಿಯಿಂದಲೂ ತಪ್ಪಿಸಿಕೊಳ್ಳದೆ ಅವರ ಸಹಾಯಕ್ಕೆ ಧಾವಿಸುವುದು ಇಲ್ಲಿಯ ವಸ್ತು.

ಬಲ್ಗೇರಿಯದ ಕತೆಗಳಲ್ಲಿ ಇವಾಇಲೊಪಿತ್ರೋವ್‌ರ 'ತಾಯಿ' ಮಾತೃಪ್ರೇಮದ ಹಿರಿಮೆಯನ್ನು ಪ್ರತಿಪಾದಿಸುವ ಕತೆ. ತನ್ನ ಆರು ಮರಿಗಳಿಗೆ ಆಹಾರ ತರಲು ಹೊರಟು ಕುರಿ ಕಾಯುವವರ ಹಲ್ಲೆಗೆ ಸಿಕ್ಕು ಕಾಲು ಕತ್ತರಿಸಲ್ಪಟ್ಟು ನೆತ್ತರು ಸುರಿ ಸುತ್ತಾ ಮರಿಗಳ ಬಳಿ ಬಂದು ಅವುಗಳಿಗೆ ಆಹಾರವಾಗಿ ಪ್ರೇಮದಿಂದ ತನ್ನ ಮೈಯನ್ನೇ ಒಡ್ಡುವ ದೃಶ್ಯ ! ಎಲಿನ್–ಪೆಲಿನ್‌ಸ 'ಕಮಿಷನರ್ ಸಾಹೇಬರ ಕ್ರಿಸ್ ಮಸ್', ಹಾಸ್ಯ ವಿಡಂಬನೆಗಳಿಂದ ಸರ್ಕಾರಿ ಅಧಿಕಾರಿಯ ದಬ್ಬಾಳಿಕೆಯ ಅವಾನಂತತ್ವ ವನ್ನು ಬಣ್ಣಿಸುವ ಕತೆ. ಹಳ್ಳಿಯ ಗಾಡಿಯೊಂದರಲ್ಲಿ ಕೂತು ಹಳ್ಳಿಯ ಕಡೆಗೇ ಹೋಗುತ್ತಾ ಹೇಗೆ ಆ ಜನರ ಮೇಲೆ ತನ್ನ ಅಧಿಕಾರ ಚಲಾಯಿಸ್ತೀನಿ ಎಂದು ಹೇಳಿ ಕೊಳ್ಳುತ್ತಿರುವ ಅಧಿಕಾರಿಯನ್ನು ಗಾಡಿ ಹೊಡೆಯುವ ಹುಡುಗ ಚೌಗು ನೀರಿನ

ಮಂಥೈ ಅಸಹಾಯ ಪರಿಸ್ಥಿತಿಯಲ್ಲಿ ಕೈಬಿಟ್ಟು ಕಮಿಷನರ್ ಸಾಹೇಬರ ಕ್ರಿಸ್‌ಮಸ್. ಅವನ್ನೂ ಹಾಳುಗೆಡವುತ್ತಾನೆ,

•

ಈ ನಾಲ್ಕು ಸಂಪುಟಗಳಿಗೆ ಎಂದಿನಂತೆ ನಿರಂಜನರ ಪಾಂಡಿತ್ಯಪೂರ್ಣ ಪ್ರಸ್ತಾವನೆಗಳಿವೆ. ಸಂಪುಟಗಳು ಹೊರಬರುತ್ತಿದ್ದಂತೆ ಅವುಗಳ ಜನಪ್ರಿಯತೆಯೂ ಹೆಚ್ಚುತ್ತಿರುವುದು ಕಂಡುಬಂದಿದೆ, ಎಡಪಂಥೀಯ ಧೋರಣೆಯ ಕತೆಗಳಿಗಷ್ಟೇ ಅಲ್ಲದೆ ಆಯಾ ದೇಶಗಳ ಅತ್ಯುತ್ತಮ ಕತೆಗಳನ್ನಾರಿಸುವಲ್ಲಿ ತಾರತಮ್ಯ ಮಾಡದಿರುವುದೂ ಒಂದು ಕಾರಣವಿರಬೇಕು. ಶೋಷಕ-ಶೋಷಿತ ಸಂಬಂಧಗಳನ್ನು ಪರಿಚಯಿಸುವಾಗಲೂ ಕಲಾತ್ಮಕವಾಗಿರುವ ಕತೆಗಳಷ್ಟೇ ಇಲ್ಲಿ ಬಂದಿರುವುದರಿಂದ ವಿಶ್ವಕಥಾಕೋಶದ ಸಂಪುಟಗಳ ಮೌಲ್ಯ ಹೆಚ್ಚಾಗಿದೆ.

•

ಬದುಕಿನ ಸಾಕ್ಷಿ

ಸೈಯದ್ ಜಮೀರುಲ್ಲಾ ಷರೀಫ್

ಒಣ ಒಡಲ
ನನ್ನ ತಾಯ ಮಮತೆಯೇ
ನಾ ಹುಟ್ಟಿದ್ದಕ್ಕೆ ಸಾಕ್ಷಿಯಾಗಿ,
ರಕ್ತ ಬೆವರಾಗಿ ಹರಿಸಿದ ತಂದೆಯ ದುಡಿಮೆಯೇ
ನಾ ಬೆಳೆದದ್ದಕ್ಕೆ ಸಾಕ್ಷಿಯಾಗಿ,
ನಮ್ಮೂರ ಹರಕು ಜುಬ್ಬದ
ಮೇಷ್ಟ್ರೇ ನಾ ಓದಿದ್ದಕ್ಕೆ ಸಾಕ್ಷಿಯಾಗಿ.
ಮೈಲಿಗಲ್ಲಾಗಿದ್ದರೂ.
ಇಂದು ನಾ ಬದುಕಿದ್ದೇನೆಯೆ?

ವರ್ಷಂಪ್ರತಿ ಏಳುತ್ತಿರುವ ಸುಳಿಗಾಳಿಗೆ ಸಿಕ್ಕಿ
ಬೀಳುತ್ತಿರುವ ಮರ ಗಿಡ
ಕಲ್ಲು ಮಣ್ಣುಗಳಡಿ
ಸಿಕ್ಕಿ ಕೊಕ್ಕೆಯಾಗಿರುವ,
ದಿನ ದಿನವು ಹೀರುತ್ತಿರುವ
ಜಿಗಣೆಗಳಿಗೆ ರಕ್ತಕೊಟ್ಟು
ಬಂಡೆಯುಡಿಯ ಹಿಕ್ಕೆಯಾಗಿರುವ ನನಗೆ ಸಂಶಯ:
ನಾ ಬದುಕಿದ್ದೇನೆಯೆ ?

ಹೌದು! ನಾ ಬದುಕಿದ್ದೇನೆ!
ಕೊಕ್ಕೆಯಾದರೂ ಇಕ್ಕೆಲಗೋಲಾಡುತ
ನಡೆವ ಶಕ್ತಿ ಪಡೆದಿದ್ದೇನೆ;
ಹಿಕ್ಕೆಯಾದರೂ ಕಟ್ಟಿ ಕಟ್ಟಿ
ಬಿಟ್ಟೆಳೆವ ಉಸಿರಿಟ್ಟಿದ್ದೇನೆ.

ಇದಕೆ ಸಾಕ್ಷಿ
ನನ್ನ ಹೆಸರು ಮತಪಟ್ಟಿಯಲಿ
ಕಟ್ಟಿರುವುದೇ.
ಪ್ರತಿ ಸಾರಿ ಒತ್ತಿ ಒತ್ತಿ
ಪೆಟ್ಟಿಗೆ ತುಂಬಿಸುತ್ತಿರುವುದೇ.

ಡಾ। ಅಂಬೇಡ್ಕರ ಮತ್ತು ಮನು (?) ಸ್ಮೃತಿ

ಒಂದು ಟಿಪ್ಪಣಿ

ಡಾ. ಶಂಬಾ ಜೋಶಿ

ಮೋಸಕ್ಕೆ ಕಾರಣವಾಗುತ್ತಿರುವ ಪರಿಭಾಷೆಯ ಬಗೆಗೆ ಎಚ್ಚರ ಬೇಕು.

ಇಲ್ಲದೆ ಇರುವುದನ್ನು 'ಉಂಟು' ಎಂಬ ಭ್ರಮೆಯನ್ನು ನಿರ್ಮಿಸುತ್ತಿರುವ ಮಾತುಗಳಲ್ಲಿ ಹಿಂದೂ ಮತ್ತು ಮನು ಈ ಪದಗಳ ಮೂಲಕ ಉಂಟಾಗುತ್ತಿರುವ ಸಂ-ಭ್ರಮವು ಅಭ್ಯಸನೀಯವಾಗಿದೆ.

ದೇಶಕ್ಕೆ ಇರುವ, ಇದ್ದ, 'ಹಿಂದೂ' ಎಂಬ ಈ ಹೆಸರು ಆಗಂತುಕವಾಗಿದೆ. ಈ ದೇಶದ ಪ್ರಾಚೀನ ಹೆಸರು ಭಾರತ. ಈ ಸಂಗತಿಯು ಸರ್ವಮಾನ್ಯವಿದೆ.

ದೇಶವಾಚಕ ಹೆಸರೇ ಆಗಂತುಕ, ಪೂರ್ವಪರಂಪರೆಯಿಲ್ಲದ್ದು ಇರುವಾಗ ಈ, ಭಾರತೀಯರ ಧರ್ಮಕ್ಕೆ 'ಹಿಂದೂ' ಎಂಬ ಹೆಸರು ಇರೋಗು ಶಕ್ಯವೇ ಇಲ್ಲ; ಕ್ರಿ ಪೂ. ೪೧೭ ರ ಸುಮಾರಿಗೆ ಇರಾಣಿನ ಡರಾಯುಸನು ತನ್ನ ತಂದೆಯ ಸೋಲಿನ ಸೇಡು ತೀರಿಸಿಕೊಳ್ಳಲು ದಾಳಿ ಮಾಡಿ, ಸಿಂಧೂ ತೀರದ ಪಶ್ಚಿಮ ತೀರದ ಪಟ್ಟಿಯನ್ನು ಗೆದ್ದನು. ಈ ಪಟ್ಟಿಗೆ 'ಹಿಂದ' ಎಂದು ಹೆಸರಿಸಿದನು.

ಸ್ಥಳವಾಚಕವಾದ 'ಹಿಂದ' ಈ ಹೆಸರೇ 'ಧರ್ಮ' ಸೂಚಕವೂ ಆಗಿದೆ, ಅರ್ವಾಚೀನ ಕಾಲದಲ್ಲಿ! (ಈ ಅಂಶವನ್ನು "ಪ್ರವಾಹ ಪತಿತರ ಕರ್ಮ; ಹಿಂದೂ ಎಂಬ ಧರ್ಮ" ಈ ಗ್ರಂಥದಲ್ಲಿ ಆಧಾರಸಹಿತ ವಿವರಿಸಿದ್ದಾಗಿದೆ. ಪು.೪೯.)

ಡಾ। ಅಂಬೇಡ್ಕರರನ್ನು ಕೆರಳಿಸಿರುವ 'ಮನು (?) ಸ್ಮೃತಿ' ಎಂಬ ಈ ಪುಸ್ತಕವು ಸಂಪೂರ್ಣವಾಗಿ ವ್ಯಾಸ ಪಂಥೀಯರ ಮೋಸದ ತಂತ್ರವಾಗಿದೆ. ನಮ್ಮ 'ವೈದಿಕ'

ರೆಂಬ ಹಾರುವರ ಪೂರ್ವಪರಂಪರೆಯಲ್ಲಿ ಈ ಬಗೆಯು ಮೋಸಮಾಡುವ-ಖೊಟ್ಟಿ ಕಾಗದ ಪತ್ರ, ಪುಸ್ತಕ ತಯಾರಿಸುವ-ಮಾಡಿಕೆಯೇ ಇತ್ತು ಎಂಬುದನ್ನು ಪ್ರೊ. ಬುಹ್ಲರ ಸಪ್ರಮಾಣವಾಗಿ ಬಯಲಿಗೆ ತಂದಿದ್ದಾನೆ. (ಅದೇ ಪುಸ್ತಕ. ಪು.೩೬)

ಡಾ। ಅಂಬೇಡ್ಕರರು ನಿಜವಾದ 'ಮನುಸ್ಮೃತಿ' ಎಂದು ಬಗೆದ ಈ ಗ್ರಂಥವು ಸ್ವಯಂಭುಃ ಸ್ವಯಂಭೂ ಮನು ಎಂಬವನದು. ಆದರೆ ಈ ಸ್ವಯಂಭೂ ಮನು ಎಂಬುದು ಒಂದು ಮೋಸ ಎಂಬ ಸಂಗತಿಯು ಇಂದು ದೃಢಪಟ್ಟಿದೆ. 'ವೈವಸ್ವತ ಮನು' ಎಂಬ ಮಾನವಧರ್ಮ ವನ್ನು ಬೆಲೆಗೆ ಎರವಾಗಿಸುವ ಪ್ರಯತ್ನದಲ್ಲಿ ಈ ಕೃತಕ ಸ್ವಯಂಭೂ ಮನುವನ್ನು ಸೃಷ್ಟಿಸಲಾಗಿದೆ. ಆದರೆ ಈ ಕೃತಕ ಮನುವು ಇಲ್ಲವೇ ಇಲ್ಲ ಎಂಬ ಸಂಗತಿಯು "ವೈವಸ್ವತ ಮಾನವಧರ್ಮ" ಹಾಗೂ "ಬುಧನ ಜಾತಕ" ಗ್ರಂಥಗಳಲ್ಲಿ ಸಪ್ರಮಾಣವಾಗಿ ಸಿದ್ಧವಾಗಿದೆ.

ಆದಕಾರಣ, ಡಾ। ಅಂಬೇಡ್ಕರರು ವ್ಯಾಸನ ಅಭಿಚಾರ ಕೃತ್ಯಕ್ಕೆ (black magic) ಮೋಸಹೋದರು ಎಂಬ ಈ ಅಂಶವನ್ನು ಬೆಳಕಿಗೆ ತರುವುದು ಈ ಟಿಪ್ಪಣಿಯ ಉದ್ದೇಶ.

ಡಾ। ಎಸ್. ವಿ. ಸುಖಟನಕರರ ಬಾಯಿಂದ ಹೊರಟ ಉಕ್ತಿಯಂತೆ, ಇಂದು ಭಾರತೀಯರು ವ್ಯಾಸನ ಮಾಟಕ್ಕೆ (spell) ಒಳಗಾಗಿದ್ದಾರೆ: 'whet her we realise or not it remains a fact we in India are still under the spell of the Mahabharata,' (On the meaning of the Mahabharata, p,32.)

ನಾಲ್ಕು ಕಿರು ಹೊತ್ತಿಗೆಗಳು

ಪುಸ್ತಕ ವಿಮರ್ಶೆ

ಜಿ. ಎಸ್. ಅವಧಾನಿ

೧. ಕನ್ನಡದ ಹೋರಾಟ : ಬರಗೂರು ರಾಮಚಂದ್ರಪ್ಪ

೨. ಸಂಸ್ಕೃತ–ಸಂಸ್ಕೃತಿ–ಶೋಷಣೆ : ಅರ್ಕೆ

೩. ಕನ್ನಡ ಬಳಕೆಗೆ ಅಗತ್ಯ ಪರಿಸರದ ನಿರ್ಮಾಣ : ದೇವಯ್ಯ ಹರವೆ

೪. ಬಂಡಾಯ ಸಾಹಿತಿ : ರಮಜಾನ ದರ್ಗಾ

ಆಡಳಿತದಲ್ಲಿ ಕನ್ನಡ ಎನ್ನುವುದು ಒಂದು ನಮೂನೆ ಸೋಗಿನ ಹಂತದಲ್ಲೇ ತಟಸ್ಥವಾಗಿದೆ. ಹಬ್ಬಕ್ಕೊಮ್ಮೆ ಹುಣ್ಣಿಮೆಗೊಮ್ಮೆ ಇಂಥ ಉದ್ಘೋಷ ಉದುರಿಸಿ ಬಲು ನಾಜೂಕಿನಲ್ಲಿ ಮೋಸ ಮಾಡುವ ದಂಧೆ ಸಲೀಸಾಗಿ ನಡದೇ ಇದೆ. ಒಂದು ಕಡೆ ಆಂಗ್ಲ ಮಾಧ್ಯಮದ ಶಾಲೆಗಳನ್ನು ತೆರೆಯಲು ಅವಕಾಶ ಕೊಡುತ್ತಿರುವುದು; ಮತ್ತೊಂದು ಕಡೆ ಗೋಕಾಕ ಸಮಿತಿಯ ವರದಿಯನ್ನು ಜಾರಿಗೆ ತರದೆ ಇನ್ನೂ ನೆನೆಗುದಿಯಲ್ಲಿ ಇಟ್ಟಿರುವುದು. ಇಂಥ ಸಂದರ್ಭದಲ್ಲಿ ಕನ್ನಡ ಕನ್ನಡ ಎಂದು ಆಳುವ ದೊರೆಗಳು ಮುಕ್ತಾಫಲ ಉದುರಿಸುವುದು ವಿರೋಧಾಭಾಸವಲ್ಲದೆ ಮತ್ತೇನು ? ಎಷ್ಟರಮಟ್ಟಿಗೆ ಕನ್ನಡ ಆಡಳಿತಾತ್ಮಕವಾಗಿ ಸ್ಥಾನ ಪಡೆದಿದೆ ಮತ್ತು ಜನಜೀವನದಲ್ಲಿ ಅದು ನೇತೃತ್ವ ಹೊಂದಿದೆ ಎಂಬುದನ್ನು ತರಾಟೆಗೆ ತೆಗೆದುಕೊಳ್ಳುವ ಕಾಲ ಇದು. ಜವಾಬ್ದಾರಿ ಹೊತ್ತವರು ದಾರಿ ತಪ್ಪಿದಾಗ ಜನತೆಯ ಧ್ವನಿಯಾದ ಬರಹಗಾರ ಈ

ಇಂಥ ಆಂದೋಲನದ ಮುಂಚೂಣಿಯಲ್ಲಿರುವುದು ಅನಿವಾರ್ಯ. ಈ ಹಿನ್ನೆಲೆಯಲ್ಲಿ ಮೇಲಿನ ಕಿರುಹೊತ್ತಿಗೆಗಳು ತುಂಬ ಗಮನಾರ್ಹ.

●

ಕನ್ನಡದ ಹೋರಾಟ ಯಾಕೆ ಮತ್ತು ಹೇಗೆ ಎಂಬುದನ್ನು ಬರಗೂರರು ಇಲ್ಲಿ ತರ್ಕಬದ್ಧವಾಗಿ ಮಂಡಿಸಿದ್ದಾರೆ. ಸಂಸ್ಕೃತಕ್ಕೆ ಪ್ರಥಮ ಭಾಷೆಯ ಸ್ಥಾನ ಕಳಚಿದಾಗ ಸಂಪ್ರದಾಯನಿಷ್ಠರ ವಕಾಲತ್ತು ಜನರ ದಾರಿ ತಪ್ಪಿಸುವುದಕ್ಕೆ ಕಾರಣವಾಗಿದೆ, ಯಾವ ಪ್ರದೇಶವೇ ಆಗಿರಲಿ-ಅಲ್ಲಿಯ ಮಾತೃಭಾಷೆಗೇ ಪ್ರಧಾನ ಸ್ಥಾನವಿರಬೇಕಾದದ್ದು ಎಂಥ ದಡ್ಡನಿಗಾದರೂ ಹೊಳೆವ ಸಂಗತಿ. ಆದ್ದರಿಂದಲೆ ಸಂಸ್ಕೃತವನ್ನು ಮೂರನೆ ಭಾಷೆಯನ್ನಾಗಿಸಿದ್ದು. ಈ ಸಂದರ್ಭದಲ್ಲಿ 'ದೇವಭಾಷೆ'ಯ 'ದೂತ'ರು ಎಬ್ಬಿಸಿದ-ಆ ಮುಖಾಂತರವಾಗಿ ಜನವಿರೋಧಿ ನಿಲುವಿಗೆ ಕಾರಣವಾದ-ಗದ್ದಲದ ಹಿಂದಿನ ಮನಸ್ಸನ್ನು ತುಂಬ ಸೂಕ್ಷ್ಮವಾಗಿ ಬಯಲುಗೊಳಿಸಿದ್ದಾರೆ. ಭಾಷಾ ವಿವಾದ ಕೇವಲ ಭಾವನಾತ್ಮಕ ಹಂತದಲ್ಲೇ ನಿಂತಿಲ್ಲ. ಒಟ್ಟು ವ್ಯವಸ್ಥೆಯ, ಶೋಷಣೆಯ ಅಂಗವಾಗಿ ರೂಪುಗೊಂಡಿದೆ.ಇದು ಸದ್ಯದ ಸಮಸ್ಯೆಯಾಗಿ ಮಾತ್ರ ಉಳಿದಿಲ್ಲ. ಪರಂಪರಾನುಗತವಾಗಿ, ಅನೂಚಾನವಾಗಿ ಈ ನಾಡಿನ ಚರಿತ್ರೆಯ ದಾಖಲೆಯಾಗಿರುವುದನ್ನು ಆ ಇತಿಹಾಸದ ಒಡಲಿನಿಂದಲೆ ಹೆಕ್ಕಿ ಇಟ್ಟಿದ್ದಾರೆ. ಬಲಿಷ್ಠವಾದ ಸಂಸ್ಕೃತ (ಸಂಸ್ಕೃತಿಯ ಮುಖವಾಡಹೊತ್ತು) ತನ್ನ ಸಬಂಧ ಬಾಹುವಿನಡಿಯಲ್ಲಿ ದ್ರಾವಿಡ ಭಾಷೆಯಾದ ಕನ್ನಡವನ್ನು ತುಳಿದಾಗ ನಮ್ಮ ಕನ್ನಡ-ಕವಿಗಳು-ಕವಿರಾಜಮಾರ್ಗಕಾರ ನಯಸೇನ, ಆಂಡಯ್ಯ, ಮುದ್ದಣ ಮೊದಲಾದವರು-ಪ್ರತಿಕ್ರಿಯೆ ತೆಗೆದಿದ್ದಾರೆ. ವಚನ ಚಳುವಳಿಯಲ್ಲಿಂತೂ ಕನ್ನಡಕ್ಕೇ ಅಗ್ರಸ್ಥಾನ. ಏಕಕಾಲಕ್ಕೆ ಜಡ ಸಂಪ್ರದಾಯ ಹಾಗೂ ಜಡಸಂಸ್ಕೃತ ವಿರೋಧವೂ ಕೂಡಿ ಬಂದುದು ಅಸ್ವಾಭಾವಿಕವಾಗಿದ್ದಿಲ್ಲ. ಇಂಗ್ಲೀಷಿನ ವಿಚಾರದಲ್ಲೂ ಇದೇ ಮಾತನ್ನು ಹೇಳಬೇಕಾಗುತ್ತದೆ. ಉಚ್ಚವರ್ಗದವರ ಅಂದರೆ ಸಾಮಾಜಿಕವಾಗಿ, ಆರ್ಥಿಕವಾಗಿ-ಕಕ್ಷೆಗೆ ಸೀಮಿತವಾಗಿ ಕನ್ನಡ ಜನತೆಯನ್ನು ದೂರದಲ್ಲೇ ಇರಿಸಿತು. ಸ್ವಾತಂತ್ರ್ಯೋತರದ ದಿನಗಳಲ್ಲಿ ಹಿಂದಿಯೂ ಸೇರಿಕೊಂಡು 'ತ್ರಿಕೂಟ'ದ ದಾಳಿ ನಿರಂಕುಶವಾಗಿ ನಡೆದಿದೆ. ಜನಪರ ಹೋರಾಟಗಳಿಗೂ, ಭಾಷೆಗೂ ಇರುವ ಸಂಬಂಧವನ್ನು ವಿವರಿಸುತ್ತ ಇವು ಒಟ್ಟೊಟ್ಟಿಗೆ ನಡೆಯಬೇಕು ಅಂದಿದ್ದಾರೆ. ಪ್ರಜಾಪ್ರಭುತ್ವದ ನಿಜವಾದ ಯಶಸ್ಸು ಮತ್ತು ವಿಕಾಸ ಸಾಧ್ಯವಾಗುವುದು ಆಡಳಿತದ ಹಾಗೂ ಜನರ ಭಾಷೆ ಒಂದೇ ಆದಾಗ. ಕನ್ನಡದ ಉಳಿವೆಂದರೆ ಕನ್ನಡ ಸಂಸ್ಕೃತಿಯ ಜೀವಂತಿಕೆ ಎಂದೇ ಅರ್ಥ. ಶೂದ್ರರೂ ಸಂಸ್ಕೃತ ಕಲಿತು ಜ್ಞಾನಿಗಳಾಗಲಿ ಎಂದು ಪೂಸಿ ಹೊಡೆಯುವವರ 'ಔದಾರ್ಯ' ದ 'ಉರುಳ'

ನ್ನೂ ಬೆರಳಿಟ್ಟು ಕಾಣಿಸಿದ್ದಾರೆ. ಪ್ರತಿನಿತ್ಯ ಮತೀಯ ಶಕ್ತಿಗಳು ಈ ತುಳಿತದಲ್ಲಿ ಭಾಗಿಯಾಗಿರುವುದನ್ನು ಮತ್ತು ಅಲ್ಲಿಯ ವೈರುಧ್ಯಗಳನ್ನು; ಶಿಕ್ಷಣದಲ್ಲಿ, ಉದ್ಯೋಗ ಅವಕಾಶದಲ್ಲಿ ಕನ್ನಡಕ್ಕೆ ಆದ ಮೋಸವನ್ನು ಲೇಖಕರು ಬಯಲುಗೊಳಿಸಿದ್ದಾರೆ. ಕನ್ನಡ ಕೇವಲ ಭಾಷೆಯಲ್ಲ; ಜನತೆ ಮತ್ತು ಅವರ ಬದುಕೂ ಹೌದು ಎಂದು ಹೇಳಿ, ಸಂದರ್ಭ ಬಂದರೆ ಉಗ್ರ ಹೋರಾಟಕ್ಕೂ ಸಿದ್ಧರಾಗಬೇಕು ಎಂದು ಆಹ್ವಾನ ಕೊಟ್ಟಿದ್ದಾರೆ. ಬರಗೂರರ ಆಳವಾದ ನಿಜವಾದ ಕನ್ನಡದ ಪ್ರೀತಿಯು ಹೊರತಾಗಿ ಉದ್ವೇಗವಾಗಲಿ ಭಾವುಕತನವಾಗಲಿ ಬರಹದಲ್ಲಿ ಕಾಣುವುದಿಲ್ಲ. ಆದರ್ಶವಾಗಿ ಬಿಡಬಹುದಾದ ಅಪಾಯ ಇಲ್ಲದಿರುವುದಕ್ಕೆ ಕಾರಣ ಲೇಖಕರು ಕಟುವಾಸ್ತವವನ್ನ ಕರಾರುವಾಕ್ಕಾಗಿ ತೆರೆದಿಟ್ಟದ್ದೇ ಆಗಿದೆ.

●

ಸಂಸ್ಕೃತಿಯ ಮುಖವಾಡ ಹೊತ್ತು ಜನಜೀವನವನ್ನು ಹಿಂಸಿಸುತ್ತಿರುವ ಸಂಸ್ಕೃತದ ಅಮಾಢವ್ಯ ಶೋಷಣೆಯ ಚಿತ್ರವನ್ನು ಆರ್ಕೆಯವರು ಮಾರ್ಮಿಕವಾಗಿ, ಅಷ್ಟೇ ಖಚಿತವಾಗಿ ಬಿಡಿಸಿದ್ದಾರೆ. ಭಾಷೆಗೂ ಸಂಸ್ಕೃತಿಗೂ ಇರುವ ಸಂಬಂಧವನ್ನು ಹೇಳುತ್ತ 'ಭಾಷೆಯೇ ಸಂಸ್ಕೃತಿ ಅಲ್ಲ, ಅದು (ಭಾಷೆ) ವಿಶಾಲ ಸಂಸ್ಕೃತಿಯ ಒಂದು ಒಂದು ಘಟಕ ಮಾತ್ರ' ಎಂದಿದ್ದಾರೆ. ಆದರೂ ಈ ಸಂಸ್ಕೃತವಾದಿಗಳು ಸಂಸ್ಕೃತ = ಸಂಸ್ಕೃತಿ ಎಂದು ಸಮೀಕರಿಸಿ ಇವತ್ತಿನ ವರೆಗೂ ನಡೆಸಿಕೊಂಡು ಬಂದ ಅಮಾನವೀಯ ಅಂಶಗಳತ್ತ ಓದುಗರ ಗಮನ ಸೆಳೆದಿದ್ದಾರೆ. ಭಾಷೆ ಇತ್ಯಾತ್ಮಕ ಹಾಗೂ ನೇತ್ಯಾತ್ಮಕ ಮುಖಗಳನ್ನ ಹೊಂದಿದ್ದು ಅದರ ಎರಡನೆ ಮುಖದ ಪರಿಚಯವನ್ನು ಈ ಲೇಖನದಲ್ಲಿ ಮಾಡಿಕೊಟ್ಟಿದ್ದಾರೆ. ಸಂಸ್ಕೃತಪರ ನರಸತ್ತ ಸುದೀರ್ಘ ಬೊಬ್ಬೆ out dated. ಪಾಶ್ಚಿಮಾತ್ಯ ದಾರ್ಶನಿಕರು ಹಾಗೂ ಸಂಸ್ಕೃತ ಲೌಕಿಕ ಗ್ರಂಥಗಳೇ ಸಂಸ್ಕೃತದ ಜೀವ ಉಳಿಸಿವೆಯೇ ವಿನಾ ಪಂಡಿತ ಪ್ರಕಾಂಡರೂ ಅಲ್ಲ, ಅರಣ್ಯಕ ಉಪನಿಷತ್ತುಗಳಂತೆ 'ಕೌಪೀನ' ಸಾಹಿತ್ಯವೂ ಅಲ್ಲ ಎಂಬ ಹೊಸ ವಿಚಾರವನ್ನ ಮಂಡಿಸಿದ್ದಾರೆ. ಮಡಿವಂತಿಕೆಯ ಮುಸುಕಿನಲ್ಲಿ–ಸಂಸ್ಕೃತ ಅಂದರೆ ದೇವರು, ಸರಸ್ವತಿ, ಮೋಕ್ಷ ಎಂಬಿತ್ಯಾದಿಗಳಿಂದ ಜನರ ಬ್ರೇನ್ ವಾಶ್ ನಡೆದಿದೆ. ಸಂಸ್ಕೃತ ವಿದ್ವಾಂಸರ ಪ್ರತಿಗಾಮೀ ನಿಲುವು, ಮೂಗು ಹೇಸುವಂಥ ಮಡಿವಂತಿಕೆಗಳಿಂದಲೇ ಸಂಸ್ಕೃತ ತನ್ನ ಗೋರಿಯನ್ನು ತಾನೇ ತೋಡಿಕೊಂಡಿದೆ. ಸಂಸ್ಕೃತವಾದಿಗಳು ತಮ್ಮ ಅಂತರಂಗವನ್ನು ಮುಟ್ಟಿ ನೋಡಿಕೊಳ್ಳುವ ಪ್ರಾಮಾಣಿಕತೆ ತೋರಿಸದೆ ಇಪ್ಪತ್ತನ ಶತಮಾನದಲ್ಲೂ ಅದೇ ಅದೇ ಗೆದ್ದಲು ಹಿಡಿದ ರೋಗಗ್ರಸ್ತ ವಿಚಾರಗಳನ್ನು ಹಬ್ಬಿಸುತ್ತಿದ್ದಾರೆ. ಅಲ್ಲದೆ ಈ ವಾದಿಗಳ ಸಂಸ್ಕೃತೀಕರಣದ ಚಾಳಿ: ವೈಜ್ಞಾನಿಕತೆ,

ವೈಚಾರಿಕತೆ, ತಾಂತ್ರಿಕತೆ ಬೆಳೆಯಂದೆ ಇರಲು ಕಾರಣವಾದ ಇವರ ಮರ್ಜಿಯನ್ನು ಮಠಾಧೀಶರ ಬೊಗಳೆ ವೇದಾಂತವನ್ನು, ಕಾವ್ಯ ಶಾಸ್ತ್ರದರ್ಶನಗಳ ಬೇಜವಾಬ್ದಾರಿ ಜೀವನ ವಿಮುಖತೆಯನ್ನೆಲ್ಲ ಲೇಖಕರು ಯಾವ ಮುಲಾಜಿಲ್ಲದೆ ತರಾಟೆಗೆ ಎತ್ತಿಕೊಂಡಿದ್ದಾರೆ. ಸಂಸ್ಕೃತ ಸಾಹಿತ್ಯದ 'ಮಂಕ್ಕಿಕಾಮಂಕ್ಕಿ' ಗಳಾದ ಬ್ರಾಹ್ಮಣರು ನಿಜವಾದ ಅರ್ಥದಲ್ಲಿ ಅಸುಖಿಗಳೇ, ಶೋಷಿತರೇ ಆಗಿದ್ದಾರೆ. ಯಾಕೆಂದರೆ ಜಗತ್ತಿನ ನೂತನ ಬೆಳಕಿಗೆ ಕಣ್ಮುಚ್ಚಿ, ಗೊಡ್ಡುಭಾಷೆ-ವೇದಾಂತಕ್ಕೆ ಕೊರಳುಕೊಟ್ಟುಕೊಂಡು ನಿರರ್ಥಕವಾಗಿ ಸುಟ್ಟುಕೊಳ್ಳುತ್ತಿದ್ದಾರೆ. ಬಂಡಾಯದ ದನಿಯೆತ್ತಲಾರದಷ್ಟು ಈ ಭಾಷೆ-ಮಂತ್ರದರ ಹಳಿಸಲು ಭಾರ ಅವರನ್ನ ಕುಗ್ಗಿಸಿದೆ ಎಂಬ ಸೂಕ್ಷ್ಮವನ್ನು ಹೇಳುತ್ತ ನಮಗೀಗ ಅಗತ್ಯವಾದದ್ದು ಚಲನಶೀಲ ಬದುಕಿನ ಜೊತೆ ಸಹಸ್ಪಂದಿಸಬಲ್ಲ ಭಾಷೆಯೇ ಹೊರತು ಅಮೂರ್ತಕಲ್ಪನೆಗಳ ಗೊಡ್ಡು ಮೌಲ್ಯದ ಪುರಾಣಭಾಷೆ ಅಲ್ಲ ಎಂಬ ನಿಲುವಿಗೆ ಬರುವಲ್ಲಿ ಲೇಖಕನ ಜೀವನಪ್ರೀತಿ ಹಾಗೂ ಅವಾಸ್ತವಿಕತೆಗೆ ಉರಿವ ಮನಸ್ಸನ್ನು ಕಾಣುತ್ತೇವೆ.

●

ಜನತಂತ್ರ ಹಾಗೂ ಸಮುದಾಯದ ನಿಜವಾದ ಬೆಳವಣಿಗೆ ಮತ್ತು ವಿಕಾಸ ಬದುಕಿನ ಹಂತಗಳಲ್ಲೂ ಕನ್ನಡದ ಉಳಿಕೆಯನ್ನೇ ಅವಲಂಬಿಸಿವೆ ಯಾದ್ದರಿಂದ ಅದಕ್ಕೆ ತಕ್ಕ ವಾತಾವರಣವನ್ನು ಸೃಷ್ಟಿಸುವುದು ಮತ್ತು ಅದನ್ನ ಪರಿಣಾಮಕಾರಿಯಾಗಿ ಜನಕ್ಕೆ ತಲುಪಿಸುವಲ್ಲಿ ಸರಕಾರ ಹಾಗೂ ಅಧಿಕಾರಿಗಳ ಪ್ರಾಮಾಣಿಕ ಪಾತ್ರವೇನು ಎಂಬುದನ್ನು ದೇವಯ್ಯ ಹರವೆ ತಲಸ್ಪರ್ಶಿಯಾದ ವಿವೇಚನೆ ನಡೆಸಿದ್ದಾರೆ. ಜನಹಿತದ ಕಾನೂನು, ಯೋಜನೆಗಳು ಸಿದ್ಧವಾದರಷ್ಟೆ ಸಾಲದು. ಜನಭಾಷೆಯಲ್ಲಿಯೆ ಅವೆಲ್ಲ ಅಕೃತಿಗೊಳ್ಳಬೇಕಾದ ಅಗತ್ಯ ಇದ್ದಾಗಲೂ, ರಾಜ್ಯದ ಆಡಳಿತ-ಭಾಷಾ ವಾರು ಪ್ರಾಂತ್ಯರಚನೆಯಾದ ೨೪ ವರ್ಷಗಳಾದ ನಂತರವೂ ಸಹ ಕನ್ನಡವಲ್ಲಾಗಲು ನಡೆದ ಹೋರಾಟವನ್ನು ಎತ್ತಿ ಇಟ್ಟಿದ್ದಾರೆ, ಹಲ್ಮಿಡಿ ಶಿಲಾ ಲೇಖದ ಉಲ್ಲೇಖ ಮಾಡಿ ಕರ್ನಾಟಕದಲ್ಲಿ ಕ್ರಿ ಶ. ೩ನೆಯ ಶತಕಕ್ಕಿಂತ ಹಿಂದೆಯೇ ಆಡಳಿತ ಮತ್ತು ಆಡುಭಾಷೆ ಕನ್ನಡವೇ ಆಗಿತ್ತೆಂಬುದನ್ನು ನೆನಪಿಸಿದ್ದಾರೆ. ಭಾಷೆ-ಸಾಹಿತ್ಯ ವೃದ್ಧಿಯಾಗುವುದು ಪ್ರಭುತ್ವದ ಹಿನ್ನೆಲೆಯಲ್ಲಿಯೆ ಆದ್ದರಿಂದ ಇವತ್ತಿನ ಸರಕಾರ ಈ ದಿಸೆಯಲ್ಲಿ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವಂತಿಲ್ಲ ಎಂಬ ನಿಜ ಕಂಡಿರಿಸುವುದರ ಜೊತೆಗೆ ಕನ್ನಡಿಗರ ಕೀಳರಿಮೆಯನ್ನು ಬೊಟ್ಟಿಟ್ಟು ತೋರಿಸಿದ್ದಾರೆ. ಇಂಗ್ಲೀಷ ವ್ಯಾಮೋಹ ಕೂಡ ಬಹುದೊಡ್ಡ ಆತಂಕವೇ ಆಗಿದೆ. ದಿನನಿತ್ಯದ ಅನೇಕ ಸಂಗತಿಗಳಲ್ಲಿಯೂ ಸಹ ಪಾಶ್ಚಿಮಾತ್ಯ ಅನುಕರಣೆಯ ದೌರ್ಬಲ್ಯದತ್ತ ನಮ್ಮ ಗಮನ ಸೆಳೆದಿದ್ದಾರೆ. ಜನಪದ

ಸಂಗೀತಗಳಿದ್ದಾಗಲೂ ನಮ್ಮ ಹುಡುಗರು ಕ್ರಿಕೆಟ್, ಪಾಪ್‌ಮ್ಯೂಜಿಕ್‌ಗಳ ದಾಸರಾಗಿರುವುದನ್ನು ಬಹು ಮಾರ್ಮಿಕವಾಗಿ ಚುಚ್ಚಿ ಆಡಿದ್ದಾರೆ. ಪ್ರಾಥಮಿಕ ಶಾಲೆಗಳಲ್ಲಿ ಭಾಷಾಬೋಧಕರಿಗಿರಬೇಕಾದ ವಿಶೇಷ ಅರ್ಹತೆ; ಪಠ್ಯಪುಸ್ತಕಗಳ ತಯಾರಿಯಲ್ಲಿಯ ಆಶಯ, ಅಧಿಕಾರಿಗಳು ತಮ್ಮೆಲ್ಲ ವ್ಯವಹಾರವನ್ನು ಆಡಳಿತ ಭಾಷೆಯಲ್ಲಿ ನಡೆಸಬೇಕಾದ ತುರ್ತು, ಸಮೂಹ ಮಾಧ್ಯಮದ ಬಳಕೆ, ಕನ್ನಡದಲ್ಲೆ ಕಛೇರಿ ಕೈಪಿಡಿ, ಕೆಸಿಎಸ್‌ಆರ್, ಫೈನಾನ್ಸ್ ಕೋಡ್ ಪುಸ್ತಕಗಳು ರಚಿಸಲ್ಪಡಬೇಕಾದುದನ್ನು ಒತ್ತಿ ಹೇಳಿದ್ದಾರೆ, ಕನ್ನಡ ಬಳಸುವ ಅಧಿಕಾರಿಗಳಿಗೆ ಬಹುಮಾನ ಕೊಡಬಹುದು ಎಂದಿದ್ದಾರೆ. ಕನ್ನಡದ ಬಗ್ಗೆ ಪ್ರೀತಿ ಹುಟ್ಟಬೇಕೆಂಬುದು ಸತ್ಯ. ಒಂದು ಪ್ರದೇಶದಲ್ಲಿ ಕೆಲಸಮಾಡುವ ಅಧಿಕಾರಿ ಆ ನಾಡಿನ ಭಾಷೆಯನ್ನು ಕಲಿಯಬೇಕಾದದ್ದು ಅನಿವಾರ್ಯ ಆಗಬೇಕೆ ಹೊರತು ಹಣದ ಮೂಲಕ ಹುಟ್ಟಿದ ಪ್ರೀತಿ ಭಾಷೆ ಮತ್ತು ಜನಕ್ಕೆ ಹೇಗೆ–ಎಷ್ಟುನಿಷ್ಠವಾಗಿ ಉಳಿದೀತು ಎಂಬುದು ಅನುಮಾನಕ್ಕೆ ಕಾರಣವಾಗಿಬಿಡಬಹುದಲ್ಲವೆ ? ಮೇಲುನೋಟಕ್ಕೆ ಪುರಸ್ಕಾರದ ಯೋಜನೆ ಆಕರ್ಷಕವೇನೋ ಹೌದು. ಕನ್ನಡದ ಅಭಿವೃದ್ಧಿ ನಿರ್ದೇಶಕರ ಕಚೇರಿಯ ವೈಫಲ್ಯವನ್ನು ಲೇಖಕರು ನಿರ್ದಿಷ್ಟವಾಗಿ ತಿಳಿಸಿ ಅದು ಕಾರ್ಯ ರೂಪಕ್ಕೆ ತರಬಹುದಾದ ಸಾಧ್ಯತೆಯನ್ನು ಹೇಳಿದ್ದಾರೆ. ಇಲ್ಲಿನ ವಿಚಾರಗಳ ಹಿಂದೆ ಲೇಖಕರ ಆಳವಾದ ಹಾಗೂ ವ್ಯಾಪಕವಾದ ಸೂಕ್ಷ್ಮ ಗ್ರಹಿತ್ವವನ್ನು, ಸಕಾಲಿಕ ನಿಲುವನ್ನು ಗುರುತಿಸಲಡ್ಡಿಯಿಲ್ಲ.

●

ಬಂಡಾಯ ಸಾಹಿತಿಗಳಲ್ಲೊಬ್ಬರಾದ ರಮಜಾನ ದರ್ಗಾ ಬಂಡಾಯ ಸಾಹಿತಿಯ ಮನೋಧೋರಣೆಯನ್ನು ಮತ್ತು ಕೃತಿ ನಿರ್ಮಾಣದ ಹಿಂದಿರುವ ಮಾನವೀಯ ಕಳಕಳಿಯನ್ನು ಈ ಕಿರುಲೇಖನದಲ್ಲಿ ಮೂಡಿಸಿದ್ದಾರೆ. ಮಡಿವಂತಿಕೆಯಿಂದ ಮೂಗು ಮುರಿಯುವ ಅಥವಾ ಬಂಡಾಯವೆಂದರೇನೆಂದು ಕುತೂಹಲಿಗಳಾದವರಿಗೆ ಈ ಕಾಲದಲ್ಲಿ ಈ ಕೃತಿ ಉತ್ತರವಾಗಿ ಸಲ್ಲುತ್ತದೆ. ಬಂಡಾಯ ಸಾಹಿತಿಗೂ ಸೌಂದರ್ಯಕ್ಕೂ, ಬಂಡಾಯ ಮತ್ತು ಸಂಸ್ಕೃತ, ಸಾಹಿತಿ ಮತ್ತು ರಾಜಕಾರಣ ಮತ್ತು ಪರಿಷತ್ತಿದಿರುವ ಸಂಬಂಧಗಳನ್ನೆಲ್ಲ ಬಿಚ್ಚು ಮಗ್ಗಿಯಂತೆ ಸ್ಪಷ್ಟಪಡಿಸಿದ್ದಾರೆ. ಜಾತಿ ಮತ್ತು ವರ್ಗ ವ್ಯವಸ್ಥೆಯ ನಡುವೆ ನರಳುತ್ತಿರುವ ಬದುಕಿನ ಬಗ್ಗೆ ಬಂಡಾಯ ಸಾಹಿತಿಗೆ ಅತೃಪ್ತಿಯಿದೆ. ಅವೇ ಜೀವಂತಿಕೆಯ ಲಕ್ಷಣವಾದ್ದರಿಂದ ಆತ ಕಾಲುಗಳನ್ನು ಭೂಮಿಯಲ್ಲಿಟ್ಟು ದೃಷ್ಟಿಯನ್ನು ಮಾನವನ ಮೇಲೆ ಕೇಂದ್ರೀಕರಿಸುತ್ತಾನೆ ಎಂದಿದ್ದಾರೆ. ಕಲೆ-ಸೌಂದರ್ಯ ಇವನಿಗೆ ನಿಷಿದ್ಧವಲ್ಲ; ಆದರೆ ಅದು ಕೆಲವರದೇ ಸ್ವತ್ತಾವುದಕ್ಕೆ ಇವನಿಗೆ ರೋಷವಿದೆ. ಹಾಗೆಂದೇ ಪ್ರತಿಯೊಬ್ಬನೂ ಸೌಂದರ್ಯಾನುಭವ

ಪಡೆಯಲು ಸಾಧ್ಯವಾಗುವಂಥ ಸಮಾಜ ರಚನೆಯಂತ್ರ ಬಂಡಾಯ ಸಾಹಿತಿ ಮುಖಾಮುಖಿಯಾಗಿದ್ದಾನೆ ಎಂದಿದ್ದಾರೆ. ಬಂಡಾಯ ಸಾಹಿತ್ಯ ಕ್ಷಣಿಕ ಎನ್ನುವ ಮರಿಗೆ ಮನುಷ್ಯನ ಬಗ್ಗೆ ಬರೆವ ಸಾಹಿತ್ಯ ಅದು ಹೇಗೆ ಕ್ಷಣಿಕ ? ಎಂದು ಸವಾಲು ಹಾಕಿದ್ದಾರೆ. ಕೊನೆಯಲ್ಲಿ ಬಂಡಾಯ ಕಾವ್ಯದ ಒಂದು ಕಿರು ಪರಿಚಯವನ್ನೂ ಕೊಟ್ಟಿದ್ದಾರೆ. ಜನರು ಬೀದಿಯಲ್ಲಿದ್ದಾಗ ಕಾವ್ಯವೂ ಅಲ್ಲಿಗೆ ಬರುವುದು ಅನಿವಾರ್ಯ ಎಂಬ ಲೇಖಕರ ಸಿದ್ಧಾಂತ ನಮ್ಮಲ್ಲಿ ಹಲವರನ್ನು ಯೋಚಿಸುವುದಕ್ಕೆ ಹಚ್ಚುತ್ತ ದೆಂಬುದು ನಿರ್ವಿವಾದ.

Sabine.

Pol. Theory – Barker

Hist. of Pol. Th. — Dunning.

Pol phylosophy — Maxley

His. of Gr. Pol. thought — Sinclair

Growth of Pol. Th. in West — Heitman

Masters of pol. Ths —— Foster

Pol. Ths. in midage — Morrall

Social & pol. ideas of
Great Mid. age Thinkers — Hearnshaw.

2

No. R.N. 29 30/76
No. KRNG 97
Licenced to post without pre-payment.
Licence No. WPP-31

ಪ್ರಕಟವಾಗಿದೆ !

ಸಂಕ್ರಮಣದ ಮೊದಲ ಒಂದು ನೂರು ಸಂಚಿಕೆಗಳ (೧೯೬೪-೧೯೮೦)
ಲೇಖನ-ಸೂಚಿ ಹಾಗೂ ಲೇಖಕ-ನಿರ್ದೇಶಿ

ಸಂಕ್ರಮಣ ಶತಕ

ಸಂಕಲನ : ಸಿ. ಆರ್. ಕರಿಸಿದ್ದಪ್ಪ

ಕಳೆದ ಎರಡು ದಶಕಗಳ ಸಮಕಾಲೀನ ಕನ್ನಡ ಸಾಹಿತ್ಯದ ಹಾಗೂ
ಸಾಂಸ್ಕೃತಿಕ ಬದುಕಿನ ಅಭ್ಯಾಸಿಗಳಿಗೆ ಉಪಯುಕ್ತ ಕೈಪಿಡಿ.

ಸಂಕ್ರಮಣ ಚಂದಾದಾರರಿಗೆ : ೫ ರೂ.

ಬೆಲೆ : ೭ ರೂ.

ಸಂಕ್ರಮಣ ಪ್ರಕಾಶನ, ಧಾರವಾಡ-೫೮೦೦೦೮

ಪ್ರಕಟವಾಗಲಿದೆ !

ಚಂಪಾ : ಕವನಗಳು

(೧೯೭೭-೧೯೮೧)

ಚಂದಾದಾರರಿಗೆ : ೭ ರೂ.

ಬೆಲೆ : ೧೦ ರೂ.

ಸಂಕ್ರಮಣ ಪ್ರಕಾಶನ, ಧಾರವಾಡ-೮

ಡಾ. ಅಂಬೇಡ್ಕರ್ ವಿಶೇಷಾಂಕ

ಸಂಕ್ರಮಣದ ಈ ವಿಶೇಷಾಂಕದ ಕೆಲವೇ ಪ್ರತಿಗಳು ಉಳಿದಿ...
೧೦ ರೂ. ಮುಖಬೆಲೆಯ ಪುಸ್ತಕ ೮ ರೂಪಾಯಿಗಳಿಗೆ ಲಭ್ಯ.

ಸಂಕ್ರಮಣ ಪ್ರಕಾಶನ, ಧಾರವಾಡ-೮

DEVU PATTAR
GUTTIPETH,
SHAHAPUR-58522

...ANA MONTHLY DHARWAD 5800...